ವೀರತ್ವ ಮತ್ತು ಕೃಷಿ ಸಮಾಜ

(ಸೊರಬ ಪರಿಸರದ ಸ್ಮಾರಕ ಶಿಲೆಗಳ ಅಧ್ಯಯನದ ಹಿನ್ನೆಲೆಯಲ್ಲಿ)

ಮಾಸ್ಟರ್ ಆಫ್ ಫಿಲಾಸಫಿ (ಎಂ. ಫಿಲ್.) ಪದವಿಯ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು :

ಕೆ. ಶಿವಪ್ಪ

ಮಾರ್ಗದರ್ಶಕರು :

ಡಾ॥ ಕೆ. ಎಂ. ಸುರೇಶ

ಪುರಾತತ್ವ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – ೫೮೩ ೨೨೧

೧೯೯೬

76

76



ವೀರತ್ವ ಮತ್ತು ಕೃಷಿ ಸಮಾಜ

(ಸೊರಬ ಪರಿಸರದ ಸ್ಮಾರಕ ಶಿಲೆಗಳ ಅಧ್ಯಯನದ ಹಿನ್ನೆಲೆಯಲ್ಲಿ)

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು:
ಕೆ. ಶಿವಪ್ಪ

ಮಾರ್ಗದರ್ಶಕರು:
ಡಾ|| ಕೆ.ಎಂ. ಸುರೇಶ

ಪುರಾತತ್ವ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೨೧
೧೯೯೬

76

ಸಂಶೋಧಕರ ಪ್ರಮಾಣ ಪತ್ರ

"ವೀರತ್ವ ಮತ್ತು ಕೃಷಿ ಸಮಾಜ" (ಸೊರಬ ಪರಿಸರದ ಸ್ಮಾರಕ ಶಿಲೆಗಳ ಅಧ್ಯಯನದ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ|| ಕೆ.ಎಂ. ಸುರೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಇಲ್ಲವೆ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ: 31-10-1996
ಸ್ಥಳ: ವಿದ್ಯಾರಣ್ಯ

ಕೆ. ಶಿವಪ್ಪ
ಸಂಶೋಧಕರು
ಪುರಾತತ್ತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583 221

ಮಾರ್ಗದರ್ಶಕರ ದೃಢೀಕರಣ ಪತ್ರ

ಕೆ. ಶಿವಪ್ಪ ಇವರು "ವೀರತ್ವ ಮತ್ತು ಕೃಷಿ ಸಮಾಜ" (ಸೊರಬ ಪರಿಸರದ ಸ್ಮಾರಕ ಶಿಲೆಗಳ ಅಧ್ಯಯನದ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ.

ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಪ್ರಬಂಧವನ್ನು ಅಥವಾ ಇದರ ಭಾಗವನ್ನು ಇವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:31-10-1996
ಸ್ಥಳ:ವಿದ್ಯಾರಣ್ಯ

ಡಾ|| ಕೆ.ಎಂ. ಸುರೇಶ
ನಿರ್ದೇಶಕರು
ವಸ್ತು ಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ-583 221

[illegible]

[illegible]

[illegible]

[illegible]

[illegible]

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ: ಚಂದ್ರಶೇಖರ ಕಂಬಾರ ಮತ್ತು ಮಾನ್ಯ ಕುಲಸಚಿರಿಗೆ,

ಅಧ್ಯಯನ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಮಾರ್ಗದರ್ಶನ ನೀಡಿದ ಡಾ: ಕೆ.ಎಂ.ಸುರೇಶ ಅವರಿಗೆ,

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿದ ಶ್ರೀ. ಬಾಲಸುಬ್ರಮಣ್ಯ, ಡಾ: ದೇವರಕೊಂಡ ರೆಡ್ಡಿ, ಪ್ರೊ: ಲಕ್ಷ್ಮಣ ತೆಲಗಾವಿ, ಪ್ರೊ. ಶೇಷಾದ್ರಿ, ಡಾ: ಕೆ.ವಿ.ನಾರಾಯಣ, ಡಾ: ಪುರುಷೋತ್ತಮ ಬಿಳಿಮಲೆ, ಕುವೆಂಪು ವಿಶ್ವವಿದ್ಯಾಲಯದ ಡಾ:ರಾಜರಾಮ ಹೆಗಡೆ, ಪ್ರೊ.ಟಿ.ಎಸ್. ಸತ್ಯನಾಥ, ಡಾ: ಕೆ.ಜಿ.ಭಟ್ಟಸೂರಿ, ಡಾ: ಸಿ. ಮಹದೇವ, ಡಾ: ಸಿ.ಎಸ್.ವಾಸುದೇವನ್, ಡಾ: ಟಿ.ಪಿ.ವಿಜಯ, ಶ್ರೀ ಮೋಹನ್ ಕೃಷ್ಣ ರೈ, ಶ್ರೀ ಕಲವೀರ ಮನ್ವಚಾರ, ಶ್ರೀ ಗೋವಿಂದರಾಜ, ಶ್ರೀ ವಾಸುದೇವ ಬಡಿಗೇರ, ಶ್ರೀ ಮಾಧವ ಪೆರಾಜೆ, ಶ್ರೀಧರ ಪಿಸ್ಸೆ ಅವರುಗಳಿಗೆ,

ಕ್ಷೇತ್ರಕಾರ್ಯದ ಸಮಯದಲ್ಲಿ ಸಹಕರಿಸಿದ ಸ್ನೇಹಿತರಾದ ಶ್ರೀ ಕುಮಾರಸ್ವಾಮಿ, ಶ್ರೀ ಪರುಶುರಾಮ, ಶ್ರೀ ಮುತ್ತಪ್ಪ ಮತ್ತು ಸೊರಬ ತಾಲೂಕಿನ ಸಾರ್ವಜನಿಕರಿಗೆ,

ಅಧ್ಯಯನದ ಸಮಯದಲ್ಲಿ ಕರಡನ್ನು ತಿದ್ದಿ ಸಹಕರಿಸಿದ ಹಿರಿಯ ಸ್ನೇಹಿತರಾದ ಶ್ರೀ ಎಸ್.ವೈ. ಸೋಮಶೇಖರ, ಶ್ರೀ ಜಿ.ಎನ್. ಕೀರ್ತಿನಾಥ, ಶ್ರೀಮತಿ ಎಂ.ಪಿ.ವೀಣಾ, ಶ್ರೀ ವಿರೂಪಾಕ್ಷ, ಶಿವಕುಮಾರ, ಜಗದೀಶ ಮಠದ ಅವರುಗಳಿಗೆ,

ಅಧ್ಯಯನದ ಅವಧಿಯಲ್ಲಿ ನನ್ನೊಡನೆಯಿದ್ದು ಸಹಕರಿಸಿದ ಮಿತ್ರರಾದ ನರಸಿಂಹಮೂರ್ತಿ, ಕೊಟ್ರೇಶ್, ಗೀತಾ, ಸಿದ್ದರಾಜು, ಕುಶಾಲ, ತಾರಿಹಳ್ಳಿ ಹನುಮಂತಪ್ಪ, ರಾಜಶೇಖರ ಜಮದಂಡಿ ಅವರುಗಳಿಗೆ,

ಹಿರಿಯರಾದ ಶ್ರೀ ಎಚ್.ಬಿ.ರವೀಂದ್ರ, ಶ್ರೀ ಚಂದ್ರಶೇಖರ, ಶ್ರೀ ಬಂಗಾರಪ್ಪ ವೀರೇಶ್ ಅವರಿಗೆ,

ಸದಾ ನನ್ನ ಶ್ರೇಯಸ್ಸನ್ನೇ ಬಯಸುವ ತಂದೆ-ತಾಯಿ, ಅಕ್ಕ-ಅಣ್ಣ, ತಂಗಿ, ಮಾವಂದಿರು ಮತ್ತು ಬಂಧುಗಳಿಗೆ,

ಅಂದವಾಗಿ ಸಂಯೋಜಿಸಿ ಕೊಟ್ಟ ಶ್ರೀ ಎ.ಎಂ. ಕೃಪಾಶಂಕರ್ ಮತ್ತು ಸ್ಫೂರ್ತಿ ಕಂಪ್ಯೂಟರ್ಸ್ ಅವರಿಗೆ,

ತುಂಬು ಹೃದಯದ ಕೃತಜ್ಞತೆಗಳು.

ಕೆ. ಶಿವಪ್ಪ
ಸಂಶೋಧಕ
ಪುರಾತತ್ವ ವಿಭಾಗ.

ಪರಿವಿಡಿ

ಅಧ್ಯಾಯ-1

ಪ್ರಸ್ತಾವನೆ

1.1. ಪೀಠಿಕೆ
1.2. ಅಧ್ಯಯನದ ವಿಷಯ
1.3. ಅಧ್ಯಯನದ ಉದ್ದೇಶ
1.4. ಅಧ್ಯಯನದ ವಿಧಾನ
1.5. ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಮಹತ್ವ

1.1. ಪೀಠಿಕೆ

ಭೂಮಿಯ ಮೇಲೆ ಮಾನವ ಬಾಳಿ ಬದುಕಿದ್ದಾನೆ, ಬದುಕುತ್ತಲೂ ಇದ್ದಾನೆ. ಆತ ತನ್ನ ಅಲೆಮಾರಿ ಜೀವನದ ಹಂತದಲ್ಲಿ ಶಿಲೆಯನ್ನು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲಲು ಆಯುಧಗವನ್ನಾಗಿ ಬಳಸಿದ್ದಾನೆ. ಈ ಹಂತದಿಂದ ಪ್ರಾರಂಭವಾದ ಕಲ್ಲಿನ ಬಳಕೆ ಬೃಹತ್ ಆಕಾರದ ಸಮಾಧಿಗಳನ್ನು ಕಟ್ಟುವವರೆಗೆ, ದೇವಾಲಯಗಳನ್ನು ನಿರ್ಮಿಸುವವರೆಗೆ ಸಾಗುತ್ತಾ ಬಂದಿದೆ. ಮಾನವನ ನಾಗರೀಕತೆಯ ಬೆಳವಣಿಗೆಯಲ್ಲಿ ಶಿಲೆಯು ವಹಿಸಿದ ಪಾತ್ರ ಮಹತ್ತರವಾದುದು. ಈ " ಮಾನವ ಸಂಸ್ಕೃತಿಯ ವಿಕಾಸವನ್ನು ವಿದ್ವಾಂಸರು ಶಿಲಾಯುಗ, ಲೋಹಯುಗ, ಇತಿಹಾಸಯುಗ ಎಂದು ಮುಂತಾಗಿ ಅಭ್ಯಸಿಸುವುದನ್ನು ಗಮನಿಸಿದರೆ, ಮನುಷ್ಯನ ಜೀವನದಲ್ಲಿ ಶಿಲೆ ವಹಿಸಿದ್ದ, ವಹಿಸುತ್ತಲಿರುವ ಪಾತ್ರ ಸ್ಪಷ್ಟವಾಗುತ್ತದೆ.ಮೊದಮೊದಲು ಬಿಸಿಲು ಮಳೆಯ ರಕ್ಷಣೆಗಾಗಿ, ಬರಬರುತ್ತಾ ಬದುಕಿನ ಮೌಲ್ಯ ಪ್ರಸಾರಕ್ಕಾಗಿ ಬಳಕೆಗೊಂಡ ವಸ್ತು ಈ ಶಿಲೆ. ಕೊರೆದು ಕಲೆಯಾಗಿಸಿದ, ಬರೆದು ಕೃತಿಯಾಗಿಸಿದ ಈ ಮಾಧ್ಯಮವನ್ನು ಕ್ರಮವಾಗಿ ಶಿಲ್ಪ ಮತ್ತು ಶಾಸನವೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಶಿಲ್ಪಗಳು ನಿರಕ್ಷರರಿಗೆ, ಶಾಸನಗಳು ಸಾಕ್ಷರರಿಗೆ ಆಯಾ ಜನಾಂಗಗಳ ಮೌಲ್ಯವನ್ನು ಬೋಧಿಸುವ ಪ್ರಸಾರ ಫಲಕಗಳಾಗಿ ಅಲ್ಲಲ್ಲಿ ನಿಂತಿವೆ"[1]. ಹೀಗೆ ಶಿಲೆಯಿಂದಲೇ ನಿರ್ಮಾಣಗೊಂಡ ಸ್ಮಾರಕಶಿಲೆಗಳು ಕರ್ನಾಟಕದಾದ್ಯಂತ ಕಾಣಸಿಗುತ್ತವೆ. ಈ ಸ್ಮಾರಕ ಶಿಲೆಗಳ ವ್ಯಾಪ್ತಿಗೆ ಒಳಪಡುವ ವೀರಗಲ್ಲು, ಮಹಾಸತಿಕಲ್ಲು, ನಿಷಧಿಕಲ್ಲು ಮತ್ತು ಗೋಸಾಸ ಕಲ್ಲುಗಳು ಸಮಕಾಲೀನ ಜನರ ಜೀವನ ಮೌಲ್ಯಗಳನ್ನು ವಿಸ್ತೃತವಾಗಿ ನೀಡುತ್ತವೆ. ಈ ಸ್ಮಾರಕ ಶಿಲೆಗಳ ಒಂದು ಪ್ರಮುಖ ಪ್ರಕಾರವಾದ "ವೀರಗಲ್ಲು"ಗಳು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಹೆಚ್ಚು-ಹೆಚ್ಚಾಗಿ ಸಿಗುತ್ತವೆ.

ಕರ್ನಾಟಕದಲ್ಲಿ ಇರುವ ಸ್ಮಾರಕ ಶಿಲೆಗಳಲ್ಲಿ ವೀರಗಲ್ಲುಗಳ ಕುರಿತು ಪ್ರತ್ಯೇಕವಾದ ಅಧ್ಯಯನ ಈಗಾಗಲೇ ನಡೆದಿದೆ. ಇಂತಹ ಪ್ರತ್ಯೇಕ ಅಧ್ಯಯನವನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಿದರೆ ವೀರಗಲ್ಲುಗಳ ಬಗೆಗೆ ಹೆಚ್ಚಿನ ಬೆಳಕು ಚೆಲ್ಲುವ ಸಾಧ್ಯತೆಗಳಿವೆ. ವೀರಗಲ್ಲುಗಳ ಅಧ್ಯಯನದಿಂದ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಕೆಳಶ್ರೇಣಿಯಲ್ಲಿರುವ ಜನರ ವೀರತ್ವ ಕಲ್ಪನೆ ಹಾಗೂ ಅವರ ಸಮಕಾಲೀನ ಕೃಷಿ ಸಮಾಜದ ನಡುವೆ ಇರುವ ನಿಕಟ ಸಂಬಂಧದ ಬಗೆಗೆ ಹೊಸ ಬಗೆಯ ಸುಳಿವುಗಳು ಸಿಗುತ್ತವೆ. ಪ್ರಸ್ತುತ ಅಧ್ಯಯನವನ್ನು

[illegible]

ವೀರತ್ವ ಮತ್ತು ಕೃಷಿ ಸಮಾಜದ ಚಿಂತನಾ ಕ್ರಮದಲ್ಲಿ ನೋಡಲು ಉದ್ದೇಶಿಸಲಾಗಿದೆ. ವೀರಗಲ್ಲುಗಳನ್ನು ಈ ದೃಷ್ಟಿಕೋನದಿಂದ ನೋಡಿದಾಗ, ಆರ್ಥಿಕವಾಗಿ ಮುಂದುವರೆದ ಸಮುದಾಯ ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿದ್ದುದು ಕಂಡುಬರುತ್ತದೆ. ಇವರು ತಮ್ಮ ಹಿತವನ್ನು ಕಾಪಾಡಿಕೊಳ್ಳಲು ಕೆಳವರ್ಗದ ಜನರಲ್ಲಿ ವೀರತ್ವದ ಕಲ್ಪನೆಯನ್ನು ಬೆಳೆಸಿದ್ದುದು ಕಂಡುಬರುತ್ತದೆ. ಆರ್ಥಿಕವಾಗಿ ಮುಂದುವರಿದ ಜನ ತಮ್ಮ ಈ ಸ್ವಹಿತ ಕಾರ್ಯಕ್ಕೆ ಪುಷ್ಟಿ ಕೊಡುವ ಉದ್ದೇಶದಿಂದ ಹಾಗೂ ಇದಕ್ಕೆ ಸಾರ್ವಜನಿಕ ಒಪ್ಪಿಗೆಯನ್ನು ಪಡೆದುಕೊಳ್ಳುವ ಹುನ್ನಾರದಲ್ಲಿ ವೀರಗಲ್ಲುಗಳನ್ನು ಸೃಷ್ಟಿಸಿರುವುದನ್ನು ಕಾಣಬಹುದು.

ಪ್ರಸ್ತುತ ಮೊದಲನೆಯ ಅಧ್ಯಾಯವಾದ ಪ್ರಸ್ತಾವನೆಯನ್ನು ಆರು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಮೊದಲನೆಯ ಭಾಗ ಪೀಠಿಕೆಯಾಗಿದ್ದು, ಎರಡನೆಯ ಭಾಗ ಅಧ್ಯಯನದ ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ. ಅಧ್ಯಯನದ ವಿಧಾನವನ್ನು ಮೂರನೆಯ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ. ನಾಲ್ಕನೆಯ ಭಾಗವು ಅಧ್ಯಯನದ ಮುಖ್ಯ ಉದ್ದೇಶಗಳನ್ನು ವಿವರಿಸುತ್ತದೆ. ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಮಹತ್ವವನ್ನು ಐದನೆಯ ಭಾಗದಲ್ಲಿ ಹೇಳಲಾಗಿದೆ.

1.2. ಅಧ್ಯಯನದ ವಿಷಯ

ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ "ವೀರತ್ವ" ಒಂದು ಅತ್ಯುನ್ನತ ಸೇವೆಯಾಗಿ ಪರಿಗಣಿತವಾಗಿತ್ತು. "ಸಂಪಾದಿಸಿದ ಹಣವನ್ನು ಉದಾರವಾಗಿ ದಾನ ಮಾಡಬೇಕು, ಯುದ್ಧದಲ್ಲಿ ಧೈರ್ಯದಿಂದ ಹೋರಾಡಬೇಕು-ಇವೆರಡು ಆ ಕಾಲದ ಆದರ್ಶಗಳು"[2]. ಇದನ್ನು ಆಧರಿಸಿ ಅಂದಿನ ಕಾಲದ ರಾಜರು, ಶ್ರೀಮಂತರು ತಮ್ಮ ಬದುಕಿನಲ್ಲಿ ಪಾರಲೌಕಿಕ ಪ್ರಾಪ್ತಿಯನ್ನು ಪಡೆಯಲು ದೇವಾಲಯಗಳನ್ನು ನಿರ್ಮಾಣ ಮಾಡುತ್ತಿದ್ದರು. ಇಲ್ಲವೆ ಭೂದಾನವನ್ನು ಮಾಡುತ್ತಿದ್ದರು. ಅಥವಾ ಕೆರೆ-ಕಟ್ಟೆಗಳನ್ನು ನಿರ್ಮಿಸುತ್ತಿದ್ದರು. ಪಾರಲೌಕಿಕದ ಕಲ್ಪನೆಗಳು ಅಂದಿನ ಸಮಾಜದ ಶ್ರೀಮಂತ ವರ್ಗದಲ್ಲಿ ಇದ್ದಂತೆ ಕೆಳವರ್ಗದವರಲ್ಲೂ ಇದ್ದುದನ್ನು ಕಾಣಬಹುದು. ಕೆಳವರ್ಗದವರಿಗೆ ತಮ್ಮ ಜೀವನದಲ್ಲಿ ಮುಕ್ತಿಯನ್ನು ಪಡೆಯಲು ಶ್ರೀಮಂತರಂತೆ ಗುಡಿ-ಗೋಪುರಗಳನ್ನು ಕಟ್ಟುವ ಆರ್ಥಿಕ ಶಕ್ತಿ ಇದ್ದಿರಲಿಲ್ಲ. ಆದರೆ ಅವರು ಪಾರಲೌಕಿಕ ಪ್ರಾಪ್ತಿಗಾಗಿ ತಮ್ಮದೇ ಆದ ಮಾರ್ಗವೊಂದನ್ನು ಕಂಡುಕೊಂಡಿದ್ದರು. ಅಂತಹ ಹಲವು ಪ್ರಯತ್ನಗಳಲ್ಲಿ ವೀರತ್ವವೂ ಒಂದು.

[illegible]

[illegible]

[illegible]

[illegible]

[illegible]

ಮಧ್ಯಕಾಲದ ಜನಜೀವನದಲ್ಲಿ ವಿವಿಧ ಕಾರಣಗಳಿಗಾಗಿ ಅನೇಕ ಬಗೆಯ ಘರ್ಷಣೆಗಳು ಉಂಟಾಗುತ್ತಿದ್ದವು. ಹಣಬಲವುಳ್ಳ ರಾಜ್ಯ ಮತ್ತು ಸಮಾಜದ ಮೇಲ್ವರ್ಗಗಳಿಗೆ ತಮ್ಮ ಆಸ್ತಿ-ಅಂತಸ್ತುಗಳನ್ನು ಕಾಪಾಡಿಕೊಳ್ಳಲು ವೀರರ ವರ್ಗವೊಂದು ಅವಶ್ಯವಾಗಿ ಬೇಕಾಗಿದ್ದಿತ್ತು. ಈ ವೀರರ ವರ್ಗವನ್ನು ಹಣಬಲದಿಂದ ಕೊಳ್ಳುವ ಸಾಮರ್ಥ್ಯ ಅಂದಿನ ರಾಜ್ಯವಂಶಕ್ಕೆ ಆಗಲಿ ಅಥವಾ ಕೃಷಿಕ ಸಮಾಜಕ್ಕೆ ಆಗಲಿ ಇರಲಿಲ್ಲ. ಇಂತಹ ಸಮಾಜ ಕಾರ್ಯವನ್ನು ಸ್ವಯಂ ಸ್ಫೂರ್ತಿಯಿಂದ ಮಾಡುವ ಜನರು ಬೇಕಾಗಿದ್ದಿತ್ತು. ತಮ್ಮ ಆಸ್ತಿ-ಅಂತಸ್ತಿನ ರಕ್ಷಣಾ ಕಾರ್ಯಕ್ಕಾಗಿ ವೀರತ್ವದ ಕಲ್ಪನೆಯನ್ನು ಬೆಳೆಸಿದರು. ಈ ವೀರತ್ವದ ಕಲ್ಪನೆ ಸಮಾಜದ ಮೇಲ್ವರ್ಗದವರಿಗೆ ಪ್ರತಿಷ್ಠೆಯ ಪ್ರಶ್ನೆ ಮತ್ತು ಶೌರ್ಯ ತೋರಿಸುವುದಕ್ಕಾಗಿದ್ದರೆ, ಕೆಳವರ್ಗದ ಬಡಜನರಿಗೆ ತಮ್ಮ ಪಾರಲೌಕಿಕದ ಪ್ರಾಪ್ತಿಯನ್ನು ಪಡೆಯುವ ಮಾರ್ಗವಾಗಿ ದೊರೆಯಿತು. ನಂತರ ಒಬ್ಬ ವೀರಯೋಧನ ವೀರತ್ವಕ್ಕೂ ಆತನ ವೀರಮರಣದ ಜೊತೆಗೂ ಸಂಬಂಧವನ್ನು ಪಾರಲೌಕಿಕದ ಕಲ್ಪನೆಯ ಮೂಲಕ ಬೆಳೆಸಲಾಯಿತು. ತದನಂತರದ ಕಾಲದಲ್ಲಿ ಇದೊಂದು ಮೌಲ್ಯವಾಗಿ ಸಮಾಜದಲ್ಲಿ ಸ್ಥಾಪಿತವಾಯಿತು. ಹಾಗಾಗಿ ವೀರನೊಬ್ಬ ಯುದ್ಧ ಮಾಡಿ ಸತ್ತರೆ ಸ್ವರ್ಗಸಿಗುತ್ತದೆ ಹಾಗೂ ಜೀವನ್ಮುಕ್ತಿ ದೊರಕುತ್ತದೆ ಎಂಬ ನಂಬಿಕೆ ದೃಢಗೊಳ್ಳತೊಡಗಿತ್ತು. ಸಮಾಜದ ಜನ ಹೀಗೆ ಸದಾಕಾಲವು ವೀರತ್ವವನ್ನು ಮೆರೆಯುವಂತೆ ಮಾಡಿದರು. ಈ ವೀರತ್ವವನ್ನು ಹಾಡಿ-ಹೊಗಳುವುದಕ್ಕಾಗಿ ವೀರಗಲ್ಲುಗಳನ್ನು ನಿಲ್ಲಿಸತೊಡಗಿದರು. ಇದಕ್ಕೆ ಪೂರಕವಾಗಿ ಶಾಸನ ಪಾಠದ ಜೊತೆಗೆ ವೀರಮರಣ ಪಡೆದ ಯೋಧನಿಗೆ ಸ್ವರ್ಗಪ್ರಾಪ್ತಿಯಾದ ಚಿತ್ರಣಗಳನ್ನು ಕಲ್ಲಿನಲ್ಲಿ ಕೆತ್ತಿಸುವ ಮೂಲಕ ಹೆಚ್ಚು ಜನಪ್ರಿಯಗೊಳಿಸಲು ಪ್ರಯತ್ನಿಸಲಾಯಿತು. ಇದರಿಂದ ಸಮಾಜದ ಎಲ್ಲ ವರ್ಗದ ಜನ ಹೆಚ್ಚಿನ ಪ್ರಮಾಣದಲ್ಲಿ ವೀರತ್ವವನ್ನು ಒಂದು ಮೌಲ್ಯವಾಗಿ ಸ್ವೀಕರಿಸಿದಂತೆ ಕಂಡುಬರುತ್ತದೆ. ಹಾಗೂ ವೀರತ್ವವನ್ನು ಮೆ ರೆಯಲು ಹಾತೊರೆದಂತೆ ತಿಳಿದುಬರುತ್ತದೆ. ಹೀಗೆ ಮಧ್ಯಕಾಲೀನ ಸಮಾಜದಲ್ಲಿ ವೀರತ್ವ ಒಂದು ಮೌಲ್ಯವಾಗಿ, ನಂಬಿಕೆಯಾಗಿ, ಆದರ್ಶವಾಗಿ ರೂಪುಗೊಂಡು ಆಳಕ್ಕೆ ಬೇರುಗಳನ್ನು ಬಿಟ್ಟಿದ್ದು ಗೋಚರವಾಗುತ್ತದೆ. ಮಧ್ಯಕಾಲದಲ್ಲಿ ಹೀಗೆ ರಾಜ್ಯ ಮತ್ತು ಕೃಷಿ ಸಂಸ್ಕೃತಿಗಳು ವೀರತ್ವವನ್ನು ಪೋಷಿಸಿ ಬೆಳೆಸುವಲ್ಲಿ ಸ್ಪರ್ಧಾತ್ಮಕವಾಗಿ ಪ್ರೋತ್ಸಾಹ ಕೊಟ್ಟರೆ, ವೀರ ಸಂಸ್ಕೃತಿ ಈಎರಡನ್ನೂ ರಕ್ಷಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿರುವುದು ಕಂಡುಬರುವುದು.

ಮಧ್ಯಕಾಲೀನ ಕರ್ನಾಟಕದಲ್ಲಿ ಕೃಷಿ ಕಸುಬು ಸಮಾಜದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿತ್ತು. ಅಂದಿನ ಕಾಲದ " ಶಾಸನಗಳ ತುಂಬ ಮೂಡಿಬರುವುದು ನಮ್ಮ ಇಂದಿನ ಹಳ್ಳಿಗಳ ಜನಜೀವನ, ಅವರ ಆಸೆ-ಆಕಾಂಕ್ಷೆಗಳು, ಭಕ್ತಿ-ಶ್ರದ್ಧೆಗಳು ಅವರ ಕಷ್ಟ-ಸುಖಗಳು, ಅವರ ಆರ್ಥಿಕ ಪರಿಸ್ಥಿತಿ"[3]ಗಳೇ ಆಗಿರುವುದರಿಂದ ಅಂದು ಹಳ್ಳಿಯ ಜೀವನ ಹೆಚ್ಚು ವ್ಯಾಪಕವಾಗಿದ್ದಂತೆ ಕಂಡುಬರುತ್ತದೆ. ಹಳ್ಳಿಯ ಜನಜೀವನವೆಂದರೆ ಅಲ್ಲಿ ಕೃಷಿ ಪ್ರಧಾನ ಕಸುಬಾಗಿ ಮೈತಳೆದಿರುತ್ತದೆ. ಅದಕ್ಕೆ ಪೂರಕವಾಗಿ ಇನ್ನಿತರ ಕರಕುಶಲ ಕಸುಬುಗಳು ಬೆಳೆದುಕೊಳ್ಳುತ್ತವೆ. ಹೀಗೆ ಪ್ರಧಾನ ಕಸುಬನ್ನು ಮಾಡುವ ಕೃಷಿಕರು ಹಳ್ಳಿಯ ಆಡಳಿತ ವ್ಯವಹಾರಗಳನ್ನು ವಹಿಸಿಕೊಂಡು ಮುಂದಾಳುಗಳಾಗಿ ಕಾಣಿಸಿಕೊಳ್ಳುತ್ತಾರೆ. ಇವರು "ರಾಜನಿಂದ ನೇಮಿಸಲ್ಪಟ್ಟವರೂ ಅಲ್ಲ, ಊರಿನವರು ಚುನಾಯಿಸಿದವರು ಅಲ್ಲ. ಅವರು ವಯಸ್ಸಿನ ಕಾರಣದಿಂದಲೋ, ಅನುವಂಶಿಕ ಕಾರಣದಿಂದಲೋ ಊರಿನ ಸಹಜ ನಾಯಕರು, ಆ ಊರಿನ ಹಿತಾಸಕ್ತಿಯನ್ನು ನೋಡಿಕೊಳ್ಳುತ್ತಿದ್ದರು. ಊರಿನ ಜನತೆ ಅವರಲ್ಲಿ ನಂಬಿಕೆಯಿಟ್ಟು ಊರಿನ ಆಡಳಿತವನ್ನು ಅವರಿಗೆ ಒಪ್ಪಿಸುತ್ತಿದ್ದರು"[4]. ಇದರಿಂದ ಅಂದಿನ ಕಾಲದಲ್ಲಿ ಹಳ್ಳಿಗಳ ಆಡಳಿತವನ್ನು ನಡೆಸುವವರು ಆರ್ಥಿಕವಾಗಿ ಮೇಲ್ವರ್ಗಕ್ಕೆ ಸೇರಿದ ಕೃಷಿಕರೇ ಆಗಿದ್ದರೆಂದು ತಿಳಿದುಬರುತ್ತದೆ. ಹಿಂದೆ ಇದ್ದಂತಹ ಈ ಏರ್ಪಾಟು ಇಂದಿಗೂ ಹಳ್ಳಿಗಳಲ್ಲಿ ಮುಂದುವರೆದುಕೊಂಡು ಬಂದಿರುವುದಂತೂ ಸ್ಪಷ್ಟ. ಹೀಗಾಗಿ ಈಗಲೂ ಆರ್ಥಿಕವಾಗಿ ಮುಂದುವರೆದ ಕೃಷಿಕ ಕುಟುಂಬದ ವ್ಯಕ್ತಿಗಳೇ ಹಳ್ಳಿಗಳ ವಿವಿಧ ಪಂಚಾಯ್ತಿಗಳಲ್ಲಿ, ಆಡಳಿತ ವ್ಯವಹಾರಗಳಲ್ಲಿ, ಪ್ರಮುಖ ಪಾತ್ರವಹಿಸಿರುವುದನ್ನು ಕಾಣಬಹುದು. ಈ ಕೃಷಿಕ ಸಮಾಜವೇ ಹಳ್ಳಿಯ ಆಡಳಿತದಲ್ಲಿ ಪ್ರಬಲವಾಗಿದ್ದರಿಂದ ಊರಿನ ಹಾಗೂ ರಾಜ್ಯದ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿ ವೀರತ್ವವನ್ನು ಹುಟ್ಟುಹಾಕಿತು. ಸಮಾಜದ ಹಿತದೃಷ್ಟಿಯನ್ನು ಇಟ್ಟುಕೊಂಡು ವೀರಮರಣ ಅಪ್ಪಿದ ವೀರರ ಬಗೆಗಿನ ವೀರಗಲ್ಲುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವೀರಗಲ್ಲುಗಳನ್ನು ಹುಟ್ಟುಹಾಕಿದ ಜನವರ್ಗವೇ ಬೇರೆ, ವೀರತನ ಮೆರೆದು ವೀರಮರಣ ಅಪ್ಪಿದ ಜನವರ್ಗವೇ ಬೇರೆ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಹಳ್ಳಿಯ ಆಡಳಿತವನ್ನು ಹಿಡಿತದಲ್ಲಿಟ್ಟುಕೊಂಡಿದ್ದ ಕೃಷಿಕರು ಕೃಷಿಯಲ್ಲಿ ತಮ್ಮ ದುಡಿಮೆಯ ಪಾತ್ರವನ್ನು ಕಡಿಮೆಗೊಳಿಸಿಕೊಂಡಂತೆ ಸಮಾಜದ ಕೆಳವರ್ಗದ ಜನರನ್ನು ದುಡಿಸಿಕೊಳ್ಳತೊಡಗಿದರು. ತನ್ನ ಯಜಮಾನನ ಆಸ್ತಿ-ಅಂತಸ್ತುಗಳನ್ನು ಕಾಪಾಡುವ ಹೊಣೆ ಹೊತ್ತ ದುಡಿತವರ್ಗವು ಬೇರೆ ದಾರಿಕಾಣದೇ ವೀರತ್ವವನ್ನು ಮೆರೆಯುವ ಸಂದರ್ಭಗಳು ಉಂಟಾದವು. ಹೀಗಾಗಿ ವೀರಮರಣ ಅಪ್ಪಿದವರಲ್ಲಿ ಹಳ್ಳಿಯ

[illegible]

ಯಜಮಾನನ ಮಗ, ಅಳಿಯ ಭಾವಮೈದುನ, ಆಳು, ಸಾಕುಮಗ ಹಾಗೂ ದನಕಾಯುವ ಆಳುಗಳು ಸೇರಿರುವುದು ಶಾಸನಗಳಿಂದ ತಿಳಿದುಬರುವ ಸಂಗತಿಯಾಗಿದೆ.

1.3. ಅಧ್ಯಯನದ ವಿಧಾನ

ಪ್ರಾಥಮಿಕ ಆಕಾರಗಳಾದ ಶಾಸನಗಳಲ್ಲಿ ಬರುವ ಸ್ಮಾರಕ ಶಿಲೆಗಳ ಎಲ್ಲಾ ಪಾಠಗಳನ್ನು ಓದಿ ಅರ್ಥೈಸಿಕೊಳ್ಳಲಾಗಿದೆ. ಇವುಗಳನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ಮೂರು ಭಾಗಗಳ ಪಟ್ಟಿಕೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಿದೆ. ಮಾಹಿತಿಯನ್ನು ಸಂಗ್ರಹಿಸುವಾಗ ಅನುಸರಿಸಿದ ಕ್ರಮ ಹೀಗಿದೆ: ಮೊದಲನೆಯ ಕಾಗದದ ಪಟ್ಟಿಯಲ್ಲಿ ರಾಜರಿಂದ ಹಿಡಿದು ಊರಿನ ಗೌಡನವರೆಗೂ ಸಿಗುವ ಅಧಿಕಾರದ ಶ್ರೇಣಿಕರಣದ ವಿವರವಿದೆ. ಎರಡನೆಯ ಪಟ್ಟಿಕೆಯಲ್ಲಿ ಯುದ್ಧ ಯಾರು ಯಾರಿಗೆ ನಡೆಯಿತು, ಯಾವ ಕಾರಣಕ್ಕಾಗಿ ನಡೆಯಿತು, ಆ ಯುದ್ಧದಲ್ಲಿ ಸತ್ತ ವೀರನ ಹೆಸರು ಆತನ ಕುಟುಂಬದ ವಿವರಗಳು ಮತ್ತು ಯುದ್ಧದ ಫಲಿತಾಂಶಗಳು ಇವೆ. ನಂತರ ಅದರಲ್ಲಿಯೇ ಶಾಸನ ಬರೆದವನ ಹೆಸರು ಮತ್ತು ಶಿಲ್ಪಿಯ ಹೆಸರು ಸಹ ಇವೆ. ಹಾಗೆಯೇ ಮೂರನೆಯ ಪಟ್ಟಿಕೆಯಲ್ಲಿ ಸ್ಥಳನಾಮಗಳನ್ನು ಮತ್ತು ವೀರನ ಕುಟುಂಬಕ್ಕೆ ದಾನಕೊಟ್ಟ ವಿವರಗಳನ್ನು ದಾಖಲಿಸಿಕೊಳ್ಳಲಾಗಿದೆ. ನಂತರ ಅವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಲಾಯಿತು. ಅನುಷಂಗಿಕ ಆಕಾರಗಳಾಗಿ ಈ ಕ್ಷೇತ್ರದಲ್ಲಿ ನಡೆದ ಸಂಶೋಧನಾ ಗ್ರಂಥಗಳನ್ನು, ಲೇಖನಗಳನ್ನು ಮತ್ತು ಇತರ ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ.

ಸೊರಬ ಪರಿಸರದಲ್ಲಿನ ಸ್ಮಾರಕ ಶಿಲೆಗಳ ಹಂಚಿಕೆ ಸ್ಥಳ ನಿರ್ದೇಶನವನ್ನು ಗುರುತಿಸುವುದಕ್ಕಾಗಿ ಹಾಗೂ ಕ್ಷೇತ್ರ ಪರಿವೀಕ್ಷಣೆಯ ಕಾರ್ಯಕ್ಕಾಗಿ ಪ್ರಸ್ತುತ ಅಧ್ಯಯನದ ಪ್ರದೇಶವಾದ ಸೊರಬ ತಾಲೂಕಿನಾದ್ಯಂತ ಪ್ರವಾಸವನ್ನು ಮಾಡಲಾಯಿತು. ಈ ಸಮಯದಲ್ಲಿ ಪ್ರತಿಯೊಂದು ಗ್ರಾಮದ ಗ್ರಾಮಸ್ಥರಿಂದ[5] ಸ್ಮಾರಕ ಶಿಲೆಗಳು ಇರುವ ಸ್ಥಳವನ್ನು ತಿಳಿದುಕೊಳ್ಳಲಾಗುತ್ತಿತ್ತು. ನಂತರ ಅವುಗಳ ಎಲ್ಲ ವಿವರಗಳನ್ನು ದಾಖಲಿಸಿಕೊಳ್ಳಲಾಯಿತು. ಅಲ್ಲದೆ ವಿಶೇಷವಾದ ಸ್ಮಾರಕ ಶಿಲೆಗಳ ಛಾಯಚಿತ್ರವನ್ನು ತೆಗೆದುಕೊಳ್ಳಲಾಯಿತು. ಹೀಗೆ ಕ್ಷೇತ್ರಾಕಾರ್ಯ ಮಾಡಿದಾಗ ಗುರುತಿಸಿಕೊಂಡ ಸ್ಮಾರಕ ಶಿಲೆಗಳಲ್ಲಿ ಅಪ್ರಕಟಿತ ಸ್ಮಾರಕಶಿಲೆಗಳು ಸಿಗುವ ಸಾಧ್ಯತೆಗಳಿದ್ದವು.

ಆದರೆ ಪ್ರಸ್ತುತ ಎಂ.ಫಿಲ್., ಅಧ್ಯಯನದ ಪ್ರೌಢ ಪ್ರಬಂಧವನ್ನು ಅಲ್ಪಕಾಲವಧಿಯಲ್ಲಿ ಒಪ್ಪಿಸಬೇಕಾದ ತುರ್ತು ಇದ್ದುದ್ದರಿಂದ ಅಪ್ರಕಟಿತ ಸ್ಮಾರಕ ಶಿಲೆಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಲು ಸಾಧ್ಯವಾಗಲಿಲ್ಲ.

1.4. ಅಧ್ಯಯನದ ಉದ್ದೇಶ

ಮೊದಲನೇಯದಾಗಿ ಪ್ರಸ್ತುತ ಅಧ್ಯಯನದಲ್ಲಿ ಒಂದು ನಿರ್ದಿಷ್ಟ ಭೌಗೋಳಿಕ ಸೀಮೆಯನ್ನು-ಅಂದರೆ ಎರಡು ವಿಭಿನ್ನ ಸಂಸ್ಕೃತಿಗಳ ಕೊಡುತಾಣವಾದ ಪ್ರದೇಶವನ್ನು ಮತ್ತು ಆ ಪ್ರದೇಶದಲ್ಲಿರುವ ಸ್ಮಾರಕಶಿಲೆಗಳ ಸಮಗ್ರ ಸಾಂಸ್ಕೃತಿಕ ಅಧ್ಯಯನವನ್ನು ಮಾಡಲಾಗಿದೆ. ಹಾಗೂ ಅಲ್ಲಿನ ಸಮಾಜದಲ್ಲಿ ಕಂಡುಬರುವ ಆಚರಣೆ ಮತ್ತು ಅರ್ಥಿಕ ಚಟುವಟಿಕೆಯನ್ನು ಭೌಗೋಳಿಕ ಪರಿಸರದ ಹಿನ್ನಲೆಯಲ್ಲಿ ಅರಿಯಲು ಪ್ರಯತ್ನಿಸಲಾಗಿದೆ. ಹಾಗೆಯೇ ಇಂತಹ ಒಂದು ಪ್ರದೇಶದಲ್ಲಿರುವ ಮೇಲ್ವರ್ಗವು ತನ್ನ ಸಾಮಾಜಿಕ ಆಚರಣೆಯನ್ನು ಹೇಗೆ ಪ್ರಜ್ಞಾಪೂರ್ವಕವಾಗಿ ಹುಟ್ಟುಹಾಕಿ ತನ್ನ ಹಿತಕ್ಕೆ ಬಳಸಿಕೊಂಡಿದೆ ಎಂಬುದನ್ನು ವಿಸ್ತೃತವಾಗಿ ಅಭ್ಯಾಸ ಮಾಡುವುದೇ ಈ ಅಧ್ಯಯನದ ಗುರಿಯಾಗಿದೆ.

ಎರಡನೇಯದಾಗಿ ಮಧ್ಯಕಾಲೀನ ಕರ್ನಾಟಕದ ವಿವಿಧ ಗುಂಪುಗಳಾದ (i) ಕೃಷಿಯನ್ನೆ ಮೂಲ ಕಸುಬನ್ನಾಗಿ ಅವಲಂಬಿಸಿ ಜೀವನವನ್ನು ನಡೆಸುವ ಜನವರ್ಗ. (ii) ಅಲ್ಪಪ್ರಮಾಣದಲ್ಲಿ ಕುಮೆರಿ ಬೇಸಾಯವನ್ನು ಮಾಡಿಕೊಂಡಿದ್ದು ಪಶುಪಾಲನೆಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿಸಿ ಕೊಂಡ ಜನವರ್ಗ (iii) ರಾಜ್ಯದ ರಾಜಕೀಯದಿಂದ ಹೊರತಾಗಿ ಕಾಡನ್ನೆ ತಮ್ಮ ಜೀವನದ ಭಾಗವನ್ನಾಗಿ ಮಾಡಿಕೊಂಡು ಬದುಕಿದ "ಬೇಡಕಳ್ಳರು"[6] ಮತ್ತು "ಕಳ್ಳರು"[7] ಎನ್ನುವ ಜನವರ್ಗ. ಇಂತಹ ಮೂರು ವರ್ಗಗಳು ಸೊರಬದಂತಹ ಅಂಚು ಪ್ರದೇಶದಲ್ಲಿ ಬೆಳೆಯಲು ಅಲ್ಲಿಯ ಪರಿಸರವುಮಹತ್ವದ ಪಾತ್ರವನ್ನು ವಹಿಸಿರಬಹುದಾಗಿದೆ. ಈ ಎಲ್ಲಾ ವರ್ಗಗಳ ಉಲ್ಲೇಖಗಳು ವೀರಗಲ್ಲುಗಳಲ್ಲಿ ಸೂಕ್ಷ್ಮವಾಗಿ ತಿಳಿದುಬರುತ್ತದೆ. ಇವುಗಳ ಆಧಾರದ ಮೇಲೆ ಅಂದಿನ ಜನವರ್ಗಗಳ ಸಂಸ್ಕೃತಿಯನ್ನು ಅವರವರ ಆರ್ಥಿಕ ಚಟುವಟಿಕೆಯ ಹಿನ್ನೆಲೆಯಲ್ಲಿ ಪುನರ್ ನಿರ್ಮಿಸಲು ಪ್ರಯತ್ನಿಸಲಾಗಿದೆ.

ಮೂರನೆಯದಾಗಿ ಸೊರಬ ಸಹ್ಯಾದ್ರಿ ಪರ್ವತ ಶ್ರೇಣಿಯ ನಿತ್ಯಹರಿದ್ವರ್ಣಕಾಡಿನ ಅಂಚಿನಲ್ಲಿ ಬರುವ ತಾಲೂಕುಗಳಲ್ಲಿ ಒಂದು. ಈ ಪ್ರದೇಶದಲ್ಲಿ ಮಲೆನಾಡು ಕೊನೆಗೊಂಡು ಬಯಲುನಾಡು ಆರಂಭವಾಗುತ್ತದೆ. ಇಲ್ಲಿ ನಾಡಿನ ಮತ್ತು ಕಾಡಿನ ಎರಡು ಬಗೆಯ ಸಂಸ್ಕೃತಿಗಳ ಬೆಸೆಯುವಿಕೆ ಮತ್ತು ತಿಕ್ಕಾಟ, ಕಾಡು ಮತ್ತು ನಾಡುಗಳ ಒಗ್ಗೂಡುವಿಕೆಯಷ್ಟೆ ಸಹಜವಾಗಿದೆ. ಮಲೆನಾಡು ಕೊನೆಗೊಳ್ಳುವ ಸೊರಬ ತಾಲೂಕಿನಲ್ಲಿ ಚಿಕ್ಕ-ಪುಟ್ಟ ಬೆಟ್ಟಗುಡ್ಡಗಳು ಇವೆ. ಈ ಪರಿಸರದಲ್ಲಿ ದಟ್ಟವಾದ ಅರಣ್ಯವಿದ್ದು ಸ್ವಲ್ಪ ಇಳಿಜಾರಾದ ವಿಶಾಲಗದ್ದೆ ಮತ್ತು ಹುಲ್ಲುಗಾವಲು ಪ್ರದೇಶಗಳಿವೆ. ಇಂತಹ ಭೌಗೋಳಿಕ ಪರಿಸರವಿರುವ ಸೊರಬ ಪ್ರದೇಶದಲ್ಲಿ ಸುಮಾರು 400 ವೀರಗಲ್ಲುಗಳು, 260 ಮಹಾಸತಿ ಕಲ್ಲುಗಳು 65 ಗೋಸಾಸ ಕಲ್ಲುಗಳು (ಕ್ಷೇತ್ರಕಾರ್ಯ ಸಮಯದಲ್ಲಿ ಗುರುತಿಸಿಕೊಂಡಂತೆ) ಕಾಣಸಿಗುತ್ತವೆ. ಇವು ಸಾಮಾನ್ಯವಾಗಿ 10 ರಿಂದ 13ನೇ ಶತಮಾನಕ್ಕೆ ಸೇರಿದ ಸ್ಮಾರಕ ಶಿಲೆಗಳು. ಸೊರಬ ತಾಲೂಕಿನ ಪರಿಸರದಲ್ಲಿ ಕಾಣಸಿಗುವ ಸ್ಮಾರಕಶಿಲೆಗಳಿಗೆ ಹೋಲಿಸಿದರೆ ಕರ್ನಾಟಕದ ಬೇರೆ ಯಾವ ತಾಲೂಕು ಪ್ರದೇಶಗಳಲ್ಲೂ ಇಷ್ಟೊಂದು ಪ್ರಮಾಣದಲ್ಲಿ ಸ್ಮಾರಕಶಿಲೆಗಳು ಕಂಡುಬರುವುದಿಲ್ಲ. ಸೊರಬ ತಾಲೂಕಿನಲ್ಲಿ ವೀರಗಲ್ಲುಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ, ಈ ಪ್ರದೇಶದಲ್ಲಿ ವೀರಗಲ್ಲುಗಳೇ ಏಕೆ ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತವೆ? ಎಂಬ ಪ್ರಶ್ನೆಗೆ ಕಾರಣಗಳನ್ನು ಶೋಧಿಸಲು ಪ್ರಯತ್ನಿಸಲಾಗಿದೆ.

ನಾಲ್ಕನೆಯದಾಗಿ ಇಲ್ಲಿ ಸಿಗುವ ವೀರಗಲ್ಲುಗಳಲ್ಲಿ ಹೆಚ್ಚಿನವು ಸ್ಥಳೀಯ ಕಾಳಗದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುತ್ತವೆ. ಅದರಲ್ಲೂ ಗೋವುಗಳ ಅಪಹರಣದ ಕಾಲದಲ್ಲಿ ಅವುಗಳನ್ನು ರಕ್ಷಿಸಲು ಮುಂದೆ ಬಂದು ಹೋರಾಡಿ ಪ್ರಾಣತ್ಯಾಗ ಮಾಡಿದ ವೀರರ ಬಗೆಗಿನ ವೀರಗಲ್ಲುಗಳೇ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದರಿಂದ, ಅಂದಿನ ಕಾಲದ ಆರ್ಥಿಕ ಚಟುವಟಿಕೆ ಹಾಗೂ ಅದು ಸಮಾಜದ ಮೇಲೆ ಬೀರಿದ ಪರಿಣಾಮ ಎಂಥದ್ದು ಎಂಬುದನ್ನು ಗುರುತಿಸುವುದು ಮುಖ್ಯ.

ಐದನೆಯದಾಗಿ ಈ ಸ್ಮಾರಕಶಿಲೆಗಳಲ್ಲಿ ಕಂಡುಬರುವ ಸ್ಥಳನಾಮಗಳು ಮತ್ತು ವ್ಯಕ್ತಿನಾಮಗಳನ್ನು ವಿಶೇಷವಾಗಿ ಸಾಂಸ್ಕೃತಿಕ ಮತ್ತು ಭಾಷಾಶಾಸ್ತ್ರದ ಅಧ್ಯಯನದ ಮೂಲಕ ಮಧ್ಯಕಾಲೀನ ಕರ್ನಾಟಕದ ಭೌಗೋಳಿಕ ಲಕ್ಷಣ ಮತ್ತು ವಿವಿಧ ಜನವರ್ಗಗಳನ್ನು ಅರಿಯುವುದು ಪ್ರಮುಖ ಅಂಶವಾಗಿದೆ.

1.5. ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಮಹತ್ವ

ಸ್ಮಾರಕ ಶಿಲೆಗಳನ್ನು ಕುರಿತ ಪ್ರಸ್ತುತ ಪ್ರಬಂಧವು ಅದರ ರಚನಾ ಸ್ವರೂಪದ ನಿದರ್ಶನಾತ್ಮಕ ಸೂತ್ರಗಳನ್ನು ಅರಿಯುವ ಪ್ರಯತ್ನವಾಗಿದೆ. ಹಾಗೂ ಸ್ಮಾರಕ ಶಿಲೆಗಳ ಮೇಲೆ ಕೆತ್ತಿರುವ ಸಂಗತಿಗಳ ಇಂಗಿತಾರ್ಥವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ವೀರಗಲ್ಲುಗಳು ಹಂಚಿಕೆಯಾಗಿರುವ ಸ್ಥಳನಿದರ್ಶನ, ಅವುಗಳಲ್ಲಿ ಬಳಸಲಾಗಿರುವ ಕೆಲವೊಂದು ಪದಗಳು ಮತ್ತು ಭೌಗೋಳಿಕ ಪರಿಸರವನ್ನು ಸೂಕ್ಷ್ಮವಾಗಿ ಪರಿಶೀಲಿಸುವುದರ ಮೂಲಕ ಮಧ್ಯಕಾಲೀನ ಸಾಂಸ್ಕೃತಿಕ ಇತಿಹಾಸವನ್ನು ಪುನರ್ರಚಿಸುವ ಪ್ರಯತ್ನವಿದು. ಇಂತಹ ಪ್ರಯತ್ನದಿಂದ ಒಂದು ಪ್ರದೇಶದ ಇತಿಹಾಸವು ತನ್ನ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಆಯಾಮಗಳಲ್ಲಿ ಹೊಸರೂಪ ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

ಇದೊಂದು ಪ್ರಾದೇಶಿಕ ಅಧ್ಯಯನ. ಪ್ರಾದೇಶಿಕ ಅಧ್ಯಯನದ ಮಹತ್ವವನ್ನು ಅರಿತು ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಸೊರಬ ತಾಲೂಕಿಗೆ ಸೀಮಿತಗೊಳಿಸಲಾಗಿದೆ. ಈ ಪ್ರದೇಶದಲ್ಲಿ ನೆಡಲ್ಪಟ್ಟ 10 ರಿಂದ 13ನೇ ಶತಮಾನದ ಕಾಲಾವಧಿಯ ಸ್ಮಾರಕ ಶಿಲೆಗಳನ್ನು ಪ್ರಸ್ತುತ ಅಧ್ಯಯನಕ್ಕೆ ಹೆಚ್ಚು ಬಳಸಿಕೊಳ್ಳಲಾಗಿದೆ. ಕಾರಣ ಈ ಕಾಲಾವಧಿಯ ಸ್ಮಾರಕಶಿಲೆಗಳ ಸಂಖ್ಯೆ, ಮಧ್ಯಕಾಲದ ಪೂರ್ವ ಇಲ್ಲವೆ ಉತ್ತರ ಕಾಲದಲ್ಲಿ ಸಿಗುವ ಸಂಖ್ಯೆಗಳಿಗಿಂತ ಅತ್ಯಧಿಕವಾಗಿರುವುದರಿಂದ ಮಧ್ಯಕಾಲದ ಕಾಲಾವಧಿಯನ್ನು ಸ್ಮಾರಕ ಶಿಲೆಗಳ ಶಾಸನದ ಸಂಗತಿಗಳು ಘಟಿಸಿದ ಗಟ್ಟಿ ಕಾಲವೆಂದು ಪರಿಗಣಿಸಿ ಈ ಕಾಲಾವಧಿಯನ್ನೇ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ವೀರಗಲ್ಲುಗಳೇ ಹೆಚ್ಚಿನ ಪ್ರಮಾಣದಲ್ಲಿ ಸಿಗುವುದರಿಂದ ಇವುಗಳನ್ನೇ ಹೆಚ್ಚು ಅಧ್ಯಯನಕ್ಕೆ ಒಳಪಡಿಕೊಂಡಿದ್ದು, ಇವುಗಳ ಜೊತೆಗೆ ಅವಶ್ಯಕತೆಗೆ ಅನುಗುಣವಾಗಿ ಮಹಾಸತಿ ಮತ್ತು ಗೋಸಾಸ ಕಲ್ಲುಗಳನ್ನು ಬಳಸಿಕೊಳ್ಳಲಾಗಿದೆ. ಅಲ್ಲದೆ 10 ರಿಂದ 13ನೇ ಶತಮಾನದ ಸ್ಮಾರಕ ಶಿಲೆಗಳ ಜೊತೆಗೆ ಪ್ರಸ್ತುತ ಅಧ್ಯಯನಕ್ಕೆ ಮಾಹಿತಿ ನೀಡುವ ದೇವಾಲಯ ದಾನ ಶಾಸನಗಳು ಹಾಗೂ ಇನ್ನಿತರ ಶಾಸನಗಳನ್ನು ಗಮನಿಸಲಾಗಿದೆ ಸ್ಮಾರಕ ಶಿಲೆಗಳ ಸಾಲಿಗೆ ಸೇರುವ ಧಾರ್ಮಿಕ ಸಂಗತಿಗಳನ್ನು ಒಳಗೊಂಡ ನಿಷಧಿಕಲ್ಲುಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡದೆ ಇರುವುದರಿಂದ ಇವುಗಳನ್ನು ಕೈಬಿಡಲಾಗಿದೆ.

(i) ಒಂದು ಸೀಮಿತ ಪ್ರದೇಶದಲ್ಲಿ ನೆಲೆಗೊಂಡಿದ್ದ ವಿವಿಧ ಜನವರ್ಗದ ಸಂಸ್ಕೃತಿಯನ್ನು ಆ ಸಮಾಜದ ಆರ್ಥಿಕ ಚಟುವಟಿಕೆಯ ಹಿನ್ನೆಲೆಯಲ್ಲಿ ವಿವರವಾದ ಅಧ್ಯಯನ ಇಲ್ಲಿಯವರೆಗೂ ನಡೆದಿಲ್ಲ. ಮಧ್ಯಕಾಲದ

ಸ್ಮಾರಕ ಶಿಲೆಗಳನ್ನು ಅಧ್ಯಯನಕ್ಕೆ ಒಳಪಡಿಸಿ ಸಾಂಸ್ಕೃತಿಕ ಅಂಶಗಳನ್ನು ಕಟ್ಟಿಕೊಡುವ ಪ್ರಯತ್ನ ಆಗಿರುವುದರಿಂದ ಈ ಅಧ್ಯಯನಕ್ಕೆ ಹೆಚ್ಚಿನ ಮಹತ್ವ ಒದಗಿ ಬರಲಿದೆ.

(ii) ವಿಭಿನ್ನ ಬಗೆಯ ಸಂಸ್ಕೃತಿಗಳ ಕೂಡುತಾಣದಂತಹ ಪ್ರದೇಶವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವುದೇ ಮಹತ್ವ ಪೂರ್ಣವಾದ ಅಂಶವಾಗಿದೆ. ಇದು ಒಂದು ಪ್ರದೇಶದ ಇತಿಹಾಸವನ್ನು ಮರಳಿಕಟ್ಟುವ ಪ್ರಯತ್ನದಲ್ಲಿ ಹೊಸತಿರುವನ್ನು ನೀಡಲಿದೆ.

(iii) ಪ್ರಸ್ತುತ ಅಧ್ಯಯನದ ವೀರಗಲ್ಲುಗಳು- ಇಂಥ ವೀರಗಲ್ಲುಗಳನ್ನು ಹುಟ್ಟು ಹಾಕಿದ ಜನವರ್ಗದ ಬಗ್ಗೆ ಮತ್ತು ವೀರಗಲ್ಲುಗಳನ್ನು ಹುಟ್ಟುಹಾಕಲು ಕಾರಣವಾದ ಜನವರ್ಗಗಳ ಬಗ್ಗೆ ಹೆಚ್ಚಿನ ಅಧ್ಯಯನವನ್ನು ಬಯಸುತ್ತವೆ. ಹೆಚ್ಚಿನ ಅಧ್ಯಯನವನ್ನು ಬಯಸುತ್ತಿರುವ ವೀರಗಲ್ಲುಗಳ ಅಧ್ಯಯನವೇ ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಳ್ಳುತ್ತದೆ.

(iv) ಒಂದು ಪ್ರದೇಶದಲ್ಲಿ ಬರುವ ಸ್ಥಳನಾಮಗಳು, ಆ ಪ್ರದೇಶದ ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ಹುಟ್ಟುತ್ತವೆ. ಹಾಗೆಯೇ ಒಂದು ಪ್ರದೇಶದಲ್ಲಿ ನೆಲೆಸಿರುವ ವ್ಯಕ್ತಿಗಳ ಹೆಸರುಗಳು ಕೂಡ ಆಯಾ ಪ್ರದೇಶದಲ್ಲಿ ರೂಢಿಯಲ್ಲಿರುವ ವೃತ್ತಿಗಳು ಹಾಗೂ ಸಾಮಾಜಿಕ ರಚನೆಯಿಂದ ಮೈದೊರುತ್ತವೆ. ಇದುವರೆಗೂ ನಡೆದಿರುವ ಶಾಸನಗಳ ಅಧ್ಯಯನದಲ್ಲಿ ಸ್ಥಳನಾಮ ಮತ್ತು ವ್ಯಕ್ತಿನಾಮಗಳನ್ನು ಆ ಪ್ರದೇಶದ ಆರ್ಥಿಕ ಚಟುವಟಿಕೆ ಮತ್ತು ಸಾಮಾಜಿಕ ರಚನೆಯ ಹಿನ್ನೆಲೆಯಲ್ಲಿ ಗುರುತಿಸಿರುವುದಿಲ್ಲ. ಇದುವರೆಗೂ ನಡೆಯದೆ ಇರುವ ಇಂಥ ಅಧ್ಯಯನ ಕ್ರಮವನ್ನು ಇಲ್ಲಿ ವ್ಯವಸ್ಥಿತವಾಗಿ ಅಳವಡಿಸಿಕೊಳ್ಳಲಾಗಿದೆ.

ಮಧ್ಯಕಾಲದ ಕೃಷಿ ಹಾಗೂ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ಸ್ಮಾರಕಶಿಲೆಗಳ ಅಧ್ಯಯನದಿಂದ ಕಟ್ಟಿಕೊಡಲು ಸಾಧ್ಯ. ಕನ್ನಡ ಶಾಸನಗಳ ಅಧ್ಯಯನದಲ್ಲಿ ಇಂತಹ ಪ್ರಯತ್ನ ಇದುವರೆಗೆ ನಡೆದಿರುವುದಿಲ್ಲ. ಹೀಗಾಗಿ ಒಂದು ಪ್ರದೇಶದ ಕೃಷಿಕ ಸಮಾಜದ ಇತಿಹಾಸವನ್ನು ಮರಳಿ ಕಟ್ಟುವ ಪ್ರಸ್ತುತ ಅಧ್ಯಯನದ ವಿಷಯವು ವಿಶಿಷ್ಟ ಪೂರ್ಣವಾದುದಾಗಿದೆ.

ಒಟ್ಟಾರೆ ಸೊರಬ ಪ್ರದೇಶದಲ್ಲಿನ 10 ರಿಂದ 13ನೇ ಶತಮಾನದ ಕಾಲಘಟ್ಟದಲ್ಲಿ ಬರುವ ಸ್ಮಾರಕ ಶಿಲೆಗಳು ತಿಳಿಸುವ ರಾಜಕೀಯ, ಆರ್ಥಿಕ, ಸಾಮಾಜಿಕ ಜೀವನ ವಿವರಗಳನ್ನು ಕೊಡುತ್ತಾ, ಒಂದು ಸೀಮಿತವಾದ ಪರಿಸರದ ಸೂಕ್ಷ್ಮ ಅಧ್ಯಯನದ ಕಡೆಗೆ ಗುರಿಯಿಟ್ಟು ಈ ಅಧ್ಯಯನ ಸಾಗುತ್ತಿದೆ.

ಅಡಿಟಿಪ್ಪಣಿ

1. ಕಲಬುರ್ಗಿ, ಎಂ.ಎಂ.: ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಬೆಂಗಳೂರು, 1980, ಪು-3.

2. ಚಿದಾನಂದಮೂರ್ತಿ, ಎಂ.: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, 1979, ಪು-245.

3. ಅದೇ ಪುಟ-352

4. ಅದೇ ಪುಟ-356

5. ಕ್ಷೇತ್ರ ಕಾರ್ಯವನ್ನು 1996ರ ಮೇ, ತಿಂಗಳಿನಲ್ಲಿ ಆರಂಭಿಸಿದ್ದರಿಂದ ಆ ತಿಂಗಳ ಕೊನೆಯಲ್ಲಿ ಮಾನಸೂನ್ ಮಳೆ ಆರಂಭವಾಯಿತು. ಈ ಕಾರಣದಿಂದ ದಟ್ಟವಾದ ಅರಣ್ಯದ ಒಳನಾಡಿನಲ್ಲಿರುವ ಕೆಲವು ಗ್ರಾಮಗಳಿಗೆ ಹೋಗಲು ಸಾಧ್ಯವಾಗಲಿಲ್ಲ.

6.Ec VIII, ಸೊರಬ 240, ಕ್ರಿ.ಶ.954, ಚಿಕ್ಕಚೌಡಿ.

7. ಅದೇ ಸೊರಬ, 168, ಕ್ರಿ.ಶ. 1416 ಹರೂರು

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ-2

ಈ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಕರ್ನಾಟಕದ ರಾಜಕೀಯ ಇತಿಹಾಸ ಕುರಿತು ಹಲವಾರು ಗ್ರಂಥ-ಲೇಖನಗಳು ಪ್ರಕಟಗೊಂಡಿವೆ. ಆದರೆ ಸ್ಮಾರಕಶಿಲೆಗಳ ಪಾಠಗಳನ್ನು ಬಳಸಿಕೊಂಡು ವಿವಿಧ ದೃಷ್ಟಿಕೋನದಲ್ಲಿ ವಿಶ್ಲೇಷಿಸಿದ ಗ್ರಂಥಗಳೇ ಕಡಿಮೆ ಎಂದು ಹೇಳಬೇಕು. ಈ ಕೊರತೆಯನ್ನು ನೀಗಿಸುವುದಕ್ಕಾಗಿ ಡಾ: ಎಂ. ಚಿದಾನಂದ ಮೂರ್ತಿಯವರು ಎಲ್ಲಾ ಬಗೆಯ ಸ್ಮಾರಕ ಶಿಲೆ ಮತ್ತು ಶಾಸನಗಳನ್ನು ಬಳಸಿಕೊಂಡು 1966ರಲ್ಲಿ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ"ಎಂಬ ಮಹಾಪ್ರಬಂಧ ರಚಿಸಿದರು. ಇದು ಕರ್ನಾಟಕದ ಇತಿಹಾಸ ಅಧ್ಯಯನದಲ್ಲಿ ಒಂದು ಮೈಲಿಗಲ್ಲಾಗಿದೆ. ಇಲ್ಲಿ ಅವರು ವೀರಗಲ್ಲುಗಳ ಬಗ್ಗೆ "ಯುದ್ಧಕಲೆ" ಎಂಬ ಅಧ್ಯಾಯದಲ್ಲಿ ವೀರಗಲ್ಲುಗಳ ಪಾಠ ಮತ್ತು ಶಿಲ್ಪಗಳ ಮಹತ್ವವನ್ನು ಗುರುತಿಸಿ ಆ ಬಗ್ಗೆ ಕೆಲವಾರು ಮಹತ್ವದ ಅಂಶಗಳನ್ನು ಹೊರಹಾಕಿದ್ದಾರೆ. ಹಾಗೆಯೇ ಆತ್ಮಬಲಿಯ ಪ್ರಕಾರಗಳನ್ನು ಚರ್ಚಿಸಿದ ಅಧ್ಯಾಯದಲ್ಲಿ ಸಹಗಮನವನ್ನು ಕುರಿತು ಸಂಕ್ಷಿಪ್ತವಾಗಿಯಾದರೂ ಬೆಲೆಯುಳ್ಳ ಚಿಂತನೆ ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ಇವರು ಬರೆದ ಇನ್ನೊಂದು ಗ್ರಂಥ 'ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು' ಎಂಬುದು. ಇದು ಎಳೆಯರಿಗಾಗಿ ಬರೆದ ಚಿಕ್ಕಗ್ರಂಥ. ಇಲ್ಲಿ ಮೊದಲಬಾರಿಗೆ ವೀರಗಲ್ಲುಗಳ ವಿಂಗಡಣೆ ಮತ್ತು ವೀರಗಲ್ಲುಗಳ ಶಿಲ್ಪದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅಲ್ಲದೆ ಮಾಸ್ತಿಕಲ್ಲುಗಳ ಪಾಠ ಮತ್ತು ಶಿಲ್ಪಗಳನ್ನು ಅಚ್ಚುಕಟ್ಟಾಗಿ ಬಳಸಿಕೊಂಡಿದ್ದಾರೆ.

ಶ್ರೀ. ಆರ್. ನರಸಿಂಹಚಾರ್ಯರು ಪ್ರಕಟಿಸಿದ ಮೈಸೂರು ಸರಕಾರದ ಪ್ರಾಕ್ತನ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಶಾಸನ ಪಾಠವಿರುವ ಮತ್ತು ಶಾಸನ ಪಾಠವಿಲ್ಲದ ವೀರಗಲ್ಲುಗಳ ಬಗ್ಗೆ ಉಪಯುಕ್ತವಾದ ಮಾಹಿತಿಯು ದೊರೆಯುತ್ತದೆ. ಶಾಸನ ರಹಿತ ವೀರಗಲ್ಲುಗಳ ಶಿಲ್ಪದ ಬಗ್ಗೆ ಗಮನಹರಿಸಿದವರಲ್ಲಿ ಶ್ರೀ. ಆರ್.ನರಸಿಂಹಚಾರ್ಯರು ಮೊದಲಿಗರು.

ಕರ್ನಾಟಕದ ಸ್ಮಾರಕ ಶಿಲೆಗಳ ಶಿಲ್ಪದ ಮಹತ್ವವನ್ನು ಗಮನಿಸಿ ವಿವರಣೆ ಕೊಟ್ಟವರು ಹೆಚ್.ಕಜಿನ್ಸ್. ಇವರು 'ಚಾಲುಕ್ಯನ್ ಆರ್ಕಿಟೆಕ್ಚರ್ ' ಎಂಬ ಮಹತ್ವದ ಗ್ರಂಥದಲ್ಲಿ ಶಾಸನಗಳ ಶಿಲ್ಪ ಮತ್ತು ವೀರಗಲ್ಲುಗಳ ಶಿಲ್ಪದ ಬಗ್ಗೆ ಸ್ಥೂಲವಾಗಿ ವಿವೇಚನೆ ಮಾಡಿದ್ದಾರೆ. 1941ರಲ್ಲಿ ಪ್ರಕಟವಾದ ಬಿ.ಎಂ.ಶ್ರೀ. ಯವರ ಸಂಭಾವನಾ ಗ್ರಂಥವಾದ 'ಸಂಭಾವನೆ' ಯಲ್ಲಿ "ವೀರಗಲ್ಲು-ಮಾಸ್ತಿಕಲ್ಲು" ಎಂಬ ಲೇಖನವನ್ನು ಶ್ರೀ. ತಿ.ತಾ.ಶರ್ಮ ಅವರು ಬರೆದಿದ್ದಾರೆ. 1946ರಲ್ಲಿ ಪ್ರಕಟವಾದ ಡಾ:ರಂ.ಶ್ರೀ ಮುಗಳಿಯವರ "ಹೆರಿಟೇಜ್ ಆಫ್ ಕರ್ನಾಟಕ" ಎಂಬ

ಕೃತಿಯಲ್ಲಿ ಪ್ರಾಚೀನ ಕರ್ನಾಟಕದ ಸೈನಿಕ ಜೀವನವನ್ನು ಮತ್ತು ಸಂಘಟನೆಯನ್ನು ಕುರಿತಂತೆ ಮೂರು ಅಧ್ಯಾಯಗಳಲ್ಲಿ ಚರ್ಚಿಸಿದ್ದಾರೆ. ಹಾಗೆಯೇ ಮಾಸ್ತಿಕಲ್ಲುಗಳ ಬಗ್ಗೆಯು ಸಹ ಸ್ಥೂಲವಾದ ವಿವರಣೆ ಕೊಟ್ಟಿದ್ದಾರೆ.

ಎಸ್. ಸೆಟ್ಟರ್ ಮತ್ತು ಸೊಂತೆಮಿಯರ್ ಅವರು ಸಂಪಾದಿಸಿದ 'ಮೆಮೊರಿಯಲ್ ಸ್ಟೋನ್' ಎಂಬ ಗ್ರಂಥ, ಪ್ರಾಚೀನ ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿನ ಸ್ಮಾರಕ ಶಿಲೆಗಳ ವಿವಿಧ ಪ್ರಕಾರಗಳು, ಅವುಗಳ ವಿಶ್ಲೇಷಣೆ, ಅವುಗಳ ಸಾಮಾಜಿಕ ಮಹತ್ವ ಮುಂತಾದ ವಿವಿಧ ದೃಷ್ಟಿಗಳಿಂದ ಕೂಡಿದ ಲೇಖನಗಳನ್ನು ಒಳಗೊಂಡಿದೆ.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದಿಂದ ಪ್ರಕಟವಾದ ಬಿ.ಆರ್. ಹಿರೇಮಠ ಅವರ 'ವೀರಗಲ್ಲುಗಳು' ಎಂಬ ಪುಸ್ತಕವನ್ನು ಇಲ್ಲಿ ಸ್ಮರಿಸಬಹುದು. ಈ ಪುಸ್ತಕ ಅಂತಹ ಮಹತ್ವದ ಅಂಶವನ್ನು ಹೊಂದಿರುವುದಿಲ್ಲ. ಇದೇ ವಿಭಾಗದಿಂದ ಪ್ರಕಟಗೊಂಡ ಚನ್ನಕ್ಕ ಎಲಿಗಾರ ಅವರ 'ಮಾಸ್ತಿಕಲ್ಲು' ಎಂಬ ಪುಸ್ತಕವು ಮಾಸ್ತಿಕಲ್ಲುಗಳ ವಿಷಯವನ್ನು ಗ್ರಂಥಸಾಹಿತ್ಯ, ಜಾನಪದ ಸಾಹಿತ್ಯ, ಪ್ರವಾಸ ಸಾಹಿತ್ಯದ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತದೆ. ಇದನ್ನೇ ಅವರು "ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ" ಎಂಬ ತಮ್ಮ ಮಹಾಪ್ರಬಂಧದ ಒಂದು ಅಧ್ಯಾಯದಲ್ಲಿ ವಿಸ್ತರಿಸಿ ವಿವರಿಸಿದ್ದಾರೆ.

ಡಾ: ಎಂ. ಎಂ. ಕಲಬುರ್ಗಿಯವರ 'ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು' ಎಂಬ ಕೃತಿಯು ಸ್ಮಾರಕ ಶಿಲೆಗಳ ನಿರೂಪಣೆಯ ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತದೆ. ಶಾಸನ, ಶಿಲ್ಪ, ಕಾವ್ಯ, ಜನಪದ ಸಾಹಿತ್ಯ, ಪ್ರವಾಸ ಸಾಹಿತ್ಯ ಈ ಮೊದಲಾದವುಗಳಿಂದ ದೊರಕುವ ಮಾಹಿತಿಯನ್ನು ತಮ್ಮ ಇತಿಮಿತಿಗಳಲ್ಲಿ ಸಂಗ್ರಹಿಸಿ ಅಧ್ಯಯನ ಮಾಡಿದ್ದಾರೆ.

ಡಾ: ಬಿ.ಎ. ಸಾಲೆತೊರೆ ಅವರ 'ಸೋಶಿಯಲ್ ಆ್ಯಂಡ್ ಪೋಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪಾಯರ್' ಎಂಬ ಗ್ರಂಥದಲ್ಲಿ ವಿಜಯನಗರದಲ್ಲಿ ಜರುಗಿದ ಸತಿ ಘಟನೆಗಳನ್ನು ಕುರಿತು ವಿವರಿಸಲಾಗಿದೆ. ಎಡ್ವರ್ಡ್ ಥಾಮ್ಸನ್ ರ 'ಸತಿ', ಪಿ.ವಿ. ಕಾಣೆ ಅವರ 'ಹಿಸ್ಟರಿ ಆಫ್ ಧರ್ಮಶಾಸ್ತ್ರ', ಡಾ: ಎ.ಎಸ್. ಅಲ್ತೇಕರ್

ಅವರ 'ದಿ ಪೊಜಿಶನ್ ಆಫ್ ವುಮೆನ್ ಇನ್ ಹಿಂದು ಸಿವಲೈಜೆಷನ್ ', ವಿ.ಎನ್. ದತ್ತ ಅವರ 'ಸತಿ' ಈ ಮೊದಲಾದ ಗ್ರಂಥಗಳು ಸತಿ ಪದ್ಧತಿಯ ಕುರಿತಾಗಿ ವಿವರವಾದ ವಿಷಯ ನಿರೂಪಣೆ ಮಾಡುತ್ತವೆ.

ಈ ಎಲ್ಲಾ ಅಧ್ಯಯನಗಳು ಬಿಡಿ ಬಿಡಿಯಾಗಿ ನಡೆದವುಗಳಾಗಿದ್ದು, ಸ್ಮಾರಕ ಶಿಲೆಗಳ ಸ್ಥೂಲವಾದ ಪರಿಚಯ ನೀಡುತ್ತವೆ. ಇದಕ್ಕೆ ಅಪವಾದ ಎಂಬಂತೆ ಡಾ: ಆರ್.ಶೇಷಶಾಸ್ತ್ರೀ ಅವರ 'ಕರ್ನಾಟಕದ ವೀರಗಲ್ಲುಗಳು' ಎಂಬ ಮಹಾಪ್ರಬಂಧ ಸಂಶೋಧನೆಯಿಂದ ರಚಿಸಿರುವುದಾಗಿದೆ. ಇದು ವೀರಗಲ್ಲುಗಳ ಅಧ್ಯಯನವನ್ನೇ ಮುಖ್ಯ ಉದ್ದೇಶ ಇಟ್ಟುಕೊಂಡು ನಡೆದಿರುವುದು. 'ವೀರತನ'ದ ನಿಷ್ಪತ್ತಿಯಿಂದ ಹಿಡಿದು, ವೀರಗಲ್ಲುಗಳನ್ನು ಹಾಕಿಸುವ ಉದ್ದೇಶ, ಅವುಗಳನ್ನು ಹಾಕಿಸುವಾಗಿನ ಆಚರಣೆಗಳನ್ನು ಸೂಕ್ಷ್ಮವಾಗಿ ಚರ್ಚಿಸಿದ್ದಾರೆ. ಯುದ್ಧದ ಹಿನ್ನೆಲೆಯನ್ನು ಇಟ್ಟುಕೊಂಡು ವೀರಗಲ್ಲುಗಳ ವಿಂಗಡಣೆ ಮಾಡಿ ಮಧ್ಯಕಾಲೀನ ಯುದ್ಧದ ಸ್ವರೂಪವನ್ನು ಪುನರ್ ರಚಿಸುವ ಪ್ರಯತ್ನ ಮಾಡಿದ್ದಾರೆ. ಯುದ್ಧದಲ್ಲಿ ಮರಣ ಹೊಂದಿದ ಮತ್ತು ಗೆದ್ದು ಬಂದ ವೀರರಿಗೆ ಬೇರೆ ಬೇರೆ ರೀತಿಯ ದಾನದತ್ತಿಗಳನ್ನು ಕೊಡುವ ಸಂಪ್ರದಾಯವನ್ನು ಕೂಲಂಕುಷವಾಗಿ ಚರ್ಚಿಸಿ ಹೊಸ ಹೊಸ ಮಾಹಿತಿಗಳನ್ನು ನೀಡಿದ್ದಾರೆ. ಹಾಗೆಯೇ ವೀರತ್ವದ ಮಹತ್ವವಿದ್ದಾಗ ವೀರಗಲ್ಲುಗಳ ಶಾಸನದ ಪಾಠ ಮತ್ತು ವೀರತ್ವ ಒಂದು ಸಾಮಾನ್ಯವಾಗಿ ಬಂದಾಗ ಶಾಸನ ಪಾಠದಲ್ಲಿನ ವ್ಯತ್ಯಾಸವನ್ನು ತುಂಬಾ ಎಚ್ಚರಿಕೆಯಿಂದ ಗುರುತಿಸಿ ಶಾಸನಪಾಠದ ಮಹತ್ವವನ್ನು ತಿಳಿಸಿದ್ದಾರೆ. ಎಲ್ಲಾ ಬಗೆಯ ವೀರಗಲ್ಲುಗಳ ಮತ್ತು ಆಯುಧಗಳ ಚಿತ್ರಗಳನ್ನು ನೀಡಿರುವುದು ಅವರ ಕ್ಷೇತ್ರ ಪರಿವೀಕ್ಷಣೆಯ ಫಲವೇ ಎಂದು ಹೇಳಬೇಕು. ಈ ಅಧ್ಯಯನದಲ್ಲಿ ಶಾಸನ, ಶಿಲ್ಪ, ಕಾವ್ಯ, ಜನಪದ ಸಾಹಿತ್ಯಗಳನ್ನು ವೀರಗಲ್ಲುಗಳ ಅಧ್ಯಯನಕ್ಕೆ ತಕ್ಕಹಾಗೆ ಬಳಸಿಕೊಂಡು ಮಹಾಪ್ರಬಂಧ ರಚಿಸಿದ್ದಾರೆ. ಒಟ್ಟಾರೆ ಕರ್ನಾಟಕದ ಮತ್ತು ಹೊರನಾಡುಗಳಲ್ಲಿದ್ದ ಕನ್ನಡಿಗರ ವೀರಗಲ್ಲುಗಳನ್ನು ಬಳಸಿಕೊಂಡಿದ್ದಾರೆ. ನಂತರ ಶಾಸನಪಾಠವಿದ್ದ ವೀರಗಲ್ಲಿಗೆ ಕೊಟ್ಟ ಪ್ರಾಶಸ್ತ್ಯವನ್ನು ಶಾಸನ ಪಾಠವಿಲ್ಲದ ಸುಂದರ ಶಿಲ್ಪದ ವೀರಗಲ್ಲುಗಳಿಗೂ ಕೊಟ್ಟಿದ್ದಾರೆ. ಆದ್ದರಿಂದ ಅನೇಕ ವೀರಗಲ್ಲುಗಳು ಇವರ ಸಂಶೋಧನೆಯಿಂದ ಬೆಳಕು ಕಾಣುವಂತಾಗಿದೆ.

ಮಹಾಸತಿಯ ಆಚರಣೆಯನ್ನು ಕುರಿತು ರಚಿಸಿದ ಡಾ: ಬಿ.ಎಸ್.ಶೇಠ ಅವರ "ಕರ್ನಾಟಕದಲ್ಲಿ ಸತಿಪದ್ಧತಿ" ಎಂಬ ಮಹಾಪ್ರಬಂಧ ವಿಷಯ ನಿರೂಪಣೆಯಲ್ಲಿ ತುಂಬಾ ಬೆಲೆಯುಳ್ಳ ಪಾತ್ರವಹಿಸಿದೆ. ಶಾಸನ

[illegible]

[illegible]

[illegible]

ಶಿಲ್ಪ, ಕಾವ್ಯ, ಜನಪದ ಸಾಹಿತ್ಯ, ಪ್ರವಾಸಿ ಸಾಹಿತ್ಯಗಳನ್ನು ತಮ್ಮ ಅಧ್ಯಯನದ ಚೌಕಟ್ಟಿನಲ್ಲಿ ವ್ಯವಸ್ಥಿತವಾಗಿ ಬಳಸಿಕೊಂಡು ಸತಿಪದ್ಧತಿಯ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಸತಿಪದ್ಧತಿಯ ಉಗಮ ಮತ್ತು ವಿಕಾಸವನ್ನು, ಸತಿಪದ್ಧತಿಗೆ ಕಾರಣಗಳನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಸಿಕ್ಕ ಆಧಾರಗಳನ್ನೆ ಬಳಸಿಕೊಂಡು ಸತಿಸಂದರ್ಭದ ವಿಧಿಗಳನ್ನು, ಅವಳ ಚಿತಾಪ್ರವೇಶ ನಂತರ ಅವಳಿಗ ಸಿಗುವ ಸಮಾಜಿಕ ಗೌರವಗಳನ್ನು ಗುರುತಿಸಿದ್ದಾರೆ. ಕ್ಷೇತ್ರ ಪರಿವೀಕ್ಷಣೆ ಫಲದಿಂದ ಆಧಾರಗಳನ್ನು ಹುಡುಕಿ ಮತ್ತು ಜನಪದ ಸಾಹಿತ್ಯದಿಂದ ಮಾಹಿತಿ ಸಂಗ್ರಹಿಸಿ ಅನೇಕ ಮಹತ್ವದ ಹೊಸ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಜೊತೆಗೆ ಬಸವರಾಜ ಕಲ್ಗುಡಿ ಅವರ 'ಮಹಾಸತಿ ಆಚರಣೆ ಒಂದು ಅಧ್ಯಯನ' ಎಂಬ ಗ್ರಂಥ ಸತಿ ವಿಷಯವಾಗಿ ಮಾಹಿತಿಗಳನ್ನು ಒದಗಿಸುವ ಶಾಸನ, ಜನಪದಗೀತೆ, ಪ್ರವಾಸಿಗರ ವರದಿ-ಇತ್ಯಾದಿಗಳನ್ನು ಒಂದೆಡೆಗೆ ಸಂಗ್ರಹಿಸುವ ಪ್ರಯತ್ನ ಮಾಡಿದ್ದಾರೆ.

ಹೀಗೆ ಆರಂಭದಲ್ಲಿ ಬಿಡಿ ಬಿಡಿಯಾದ ಲೇಖನಗಳ ರೂಪದಲ್ಲಿ ನಡೆದ ಸ್ಮಾರಕಶಿಲೆಗಳ ಅಧ್ಯಯನ ನಂತರ ಪ್ರತ್ಯೇಕ ಮಹಾಪ್ರಬಂಧಗಳ ರೂಪದಲ್ಲಿ ಸೂಕ್ಷ್ಮವಾಗಿ ನಡೆದವು. ಅಲ್ಲಿ ಪ್ರತಿಯೊಂದು ಅಂಶಗಳನ್ನು ಸಹ ಸೂಕ್ಷ್ಮವಾಗಿ ವೀಕ್ಷಿಸಿ ಅಧ್ಯಯನ ಮಾಡಿದ್ದಾರೆ. ಇವುಗಳೆಲ್ಲ ಸಾಮಾನ್ಯವಾಗಿ ಕರ್ನಾಟಕದ ವ್ಯಾಪ್ತಿಯನ್ನು ಪಡೆದುಕೊಂಡಿದ್ದು ಸಾಮಾಜಿಕ, ಧಾರ್ಮಿಕ ಮತ್ತು ಪಾರಲೌಕಿಕ ಕಲ್ಪನೆಗಳ ಹಿನ್ನೆಲೆಯಲ್ಲಿ ನಡೆದವುಗಳಾಗಿವೆ.

[illegible]

ಅಧ್ಯಾಯ: 3

ರಾಜಕೀಯ ವಿವರಗಳು

3.1. ರಾಜಕೀಯ ಪ್ರಕ್ರಿಯೆ
3.2. ಅಧಿಕಾರದ ಶ್ರೇಣೀಕರಣ
ಅ. ಮಹಾಮಂಡಳೇಶ್ವರರು
ಆ. ಸಾಮಂತರು
ಇ. ಗಾವುಂಡರು
3.3. ಯುದ್ಧದ ಸ್ವರೂಪ

3.1. ರಾಜಕೀಯ ಪ್ರಕ್ರಿಯೆ

ಒಂದು ರಾಜ್ಯದ ರಾಜಕೀಯ ಚಟುವಟಿಕೆಯ ಪ್ರಕ್ರಿಯೆಯನ್ನು ಎರಡು ಭಾಗಗಳನ್ನಾಗಿ ವಿಭಾಗಿಸಿಕೊಂಡು ಅಭ್ಯಸಿಸಬಹುದು. ಮೊದಲನೆಯದಾಗಿ ರಾಜ್ಯದ ರಾಜಕೀಯ ಚಟುವಟಿಕೆ ವ್ಯವಸ್ಥಿತವಾಗಿ ನಡೆಯುತ್ತಿದ್ದಂತಹ ಒಂದು ಭಾಗ. ಅಂದರೆ ಸಾಮ್ರಾಜ್ಯದ ಕೇಂದ್ರ ಮತ್ತು ಸುತ್ತಮುತ್ತಲಿನ ಪ್ರದೇಶ. ಎರಡನೆಯದಾಗಿ ಸಾಮ್ರಾಜ್ಯದ ರಾಜಕೀಯ ಚಟುವಟಿಕೆ ವ್ಯವಸ್ಥಿತವಾಗಿ ನಡೆಯದೆ ಇರುವಂತಹ ಅಂಚು ಪ್ರದೇಶ. ಹೀಗೆ ನೋಡಿದಾಗ ಸೊರಬ ರಾಜ್ಯದ ಅಂಚು ಎಂಬುದು ಸ್ಪಷ್ಟ. ಸೊರಬ ಪರಿಸರದ ಗಡಿಗಳು ಆರಂಭವಾಗುತ್ತಿದ್ದಂತೆ ಸಹ್ಯಾದ್ರಿ ಬೆಟ್ಟದ ಶ್ರೇಣಿಗಳು ಮತ್ತು ದಟ್ಟವಾದ ಅರಣ್ಯ ಎದುರಾಗುತ್ತದೆ. ಆದ್ದರಿಂದ ರಾಜ್ಯದ ಒಳನಾಡಿನಲ್ಲಿ ಆದಂತಹ ಚಟುವಟಿಕೆಗಿಂತ ಇಲ್ಲಿ ಭಿನ್ನವಾದ ಚಟುವಟಿಕೆಗಳು ನಡೆಯಲು ಸಾಧ್ಯ.

ಒಂದು ರಾಜ್ಯದ ರಾಜನ ರಾಜಕೀಯ ಗಮನ ರಾಜ್ಯದ ಗಡಿಯಕಡೆಗೆ ಹೋದಂತೆ ಕಡಿಮೆಯಾಗುತ್ತಾ ಹೋಗುತ್ತದೆ. ಆಗ ಸಾಮಾನ್ಯವಾಗಿ ರಾಜಕೀಯ ಹಿಡಿತ ಅಷ್ಟು ಪ್ರಭಾವಶಾಲಿಯಾಗಿರುವುದಿಲ್ಲ. ಇಂತಹ ಸಮಯದಲ್ಲಿ ರಾಜ್ಯದ ಗಡಿ ಪ್ರದೇಶದಲ್ಲಿ ಆಳ್ವಿಕೆ ನಡೆಸುವ ಮಾಂಡಳೀಕರು, ಸಾಮಂತರು ಮತ್ತು ಗೌಡರುಗಳ ಮೇಲಿನ ಹಿಡಿತ ತಂತಾನೆ ತಪ್ಪುವುದು. ಆಗ ಅವರು ಸ್ವೇಚ್ಛೆಯಾಗಿ ಆಳ್ವಿಕೆ ನಡೆಸಲು ಆರಂಭಿಸಿ, ಪ್ರಬಲರಾಗಲು ಹವಣಿಸುತ್ತಾರೆ. ತಮ್ಮ ತಮ್ಮ ಮಂಡಲಗಳನ್ನು ವಿಸ್ತರಿಸಿಕೊಂಡು ಅಲ್ಲಿಯ ಸಂಪತ್ತನ್ನು ಅನುಭವಿಸ ತೊಡಗುವರು. ಇಂತಹ ಕ್ರಿಯೆಯಲ್ಲಿ ತೊಡಗಿದಾಗ ಕಾಳಗಗಳು ನೆರೆಯ ರಾಜ್ಯದ ಮೇಲೆ ನಡೆದರೆ ಅದು ಒಂದು ರಾಜ್ಯದ ಗಡಿ ವಿಸ್ತಾರಣೆ ಮೇಲೆ ಪರಿಣಾಮ ಬೀರುತ್ತದೆ. ಒಂದು ಮಂಡಲದ ಒಳಗೆ ಹಳ್ಳಿ-ಹಳ್ಳಿಗಳ ನಡುವೆ ನಡೆದರೆ ಅದು ಹಳ್ಳಿಯಗಡಿ ವಿಸ್ತಾರದ ಮೇಲೆ ಪ್ರಭಾವ ಬೀರುವುದು. ಇವೆಲ್ಲ ಅಂತಿಮವಾಗಿ ಒಂದು ರಾಜ್ಯದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೆ ಪರಿಣಾಮ ಬೀರುತ್ತದೆ.

ಜನವಸತಿ ಕಡಿಮೆಯಿದ್ದು, ಹೆಚ್ಚು ಅರಣ್ಯದಿಂದ ಕೂಡಿ ಫಲವತ್ತಾದ ಭೂಮಿಯನ್ನು ಹೊಂದಿದ ಭಾಗ ಸೊರಬ. ಇಲ್ಲಿ ರಾಜ್ಯದ ಸಾಂಸ್ಕೃತಿಕ ಚಟುವಟಿಕೆ ಕ್ರಿ.ಶ.10ನೇ ಶತಮಾನದಿಂದ ಹೆಚ್ಚು ಆರಂಭವಾದಂತೆ ಕಾಣುತ್ತದೆ. ಅಂಚಿನಂತಹ ಸೊರಬ ಪರಿಸರದಲ್ಲಿ ವಿವಿಧ ರೀತಿಯ ರಾಜಕೀಯ ಪ್ರಕ್ರಿಯೆಗಳು ಈ ಅವಧಿಯಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ನಡೆದಿರುವುದು ಕಂಡುಬರುತ್ತದೆ. ಇಂತಹ ರಾಜಕೀಯ ಚಟುವಟಿಕೆಯಲ್ಲಿ

ರಾಜರುಗಳ ಪ್ರವೇಶ ಎಲ್ಲಿಯೂ ಕಾಣದೆ ಕೇವಲ ಮಾಂಡಳೀಕರ, ಸಾಮಂತರ ಮತ್ತು ಗೌಡರ ನಡುವೆ ನಡೆದುವುಗಳಾಗಿವೆ. ಇವುಗಳು ಬೇರೆ ಬೇರೆ ರಾಜ್ಯಗಳ ಅವಧಿಯಲ್ಲಿ, ಬೇರೆ ಬೇರೆ ರಾಜರುಗಳು, ಮಹಾಮಂಡಳೇಶ್ವರರ ಕಾಲಾವಧಿಯಲ್ಲಿ ನಡೆದ ಘಟನಾವಳಿಗಳಾಗಿ ವಿವರಿಸಬಹುದು.

ರಾಜಮನೆತನಗಳು

ಕರ್ನಾಟಕದ ಪ್ರಥಮ ರಾಜಮನೆತನ ಕದಂಬರದು. ಇವರು ಕ್ರಿ.ಶ. 4ನೇ ಶತಮಾನದದಿಂದ 6ನೇ ಶತಮಾನದ ನಡುವೆ ಆಳ್ವಿಕೆ ನಡೆಸಿದರು. ಇವರ ಕಾಲಕ್ಕೆ ಸೇರಿದ ಸ್ಮಾರಕ ಶಿಲೆಗಳು ಅಲ್ಲಿಲ್ಲಿ ಒಂದೊಂದು ಸಿಕ್ಕರೆ, ಅವುಗಳಿಗಿಂತ ತಾಮ್ರ ಶಾಸನಗಳೇ ಹೆಚ್ಚು ಸಿಕ್ಕಿವೆ. ಕದಂಬರ ರಾಜಧಾನಿಯಾದ ಬನವಾಸಿ ಸೊರಬ ಪ್ರದೇಶಕ್ಕೆ ತುಂಬ ಹತ್ತಿರದಲ್ಲಿದೆ. ಆದರೂ ಇವರ ಕಾಲದ ದಾಖಲೆಗಳು ಕಡಿಮೆ ಪ್ರಮಾಣದಲ್ಲಿ ದೊರಕಲು ಈ ಪ್ರದೇಶ ಹೆಚ್ಚು ಅರಣ್ಯದಿಂದ ಆವೃತ್ತವಾಗಿರುವುದೇ ಕಾರಣವಾಗಿರಬೇಕು.

ಬಾದಾಮಿ ಚಾಲುಕ್ಯರು ಕ್ರಿ.ಶ. 540 ರಿಂದ ಕ್ರಿ.ಶ.753ರ ವರೆಗೆ ಕರ್ನಾಟಕದಲ್ಲಿ ಪರಮಾಧಿಕಾರಿಗಳಾಗಿ ಆಳ್ವಿಕೆ ನಡೆಸಿದರು. ಇವರು ಕರ್ನಾಟಕವನ್ನು ಮೊದಲ ಬಾರಿಗೆ ಏಕಾಡಳಿತಕ್ಕೆ ಒಳಪಡಿಸಿದವರು. ಆದರೂ ಇವರ ಕಾಲಕ್ಕೆ ಸೇರಿದ ಶಾಸನಗಳು ಸೊರಬ ಪರಿಸರದಲ್ಲಿ ಕಾಣಸಿಗುವುದಿಲ್ಲ. ನಂತರ ಬಾದಾಮಿ ಚಾಲುಕ್ಯರನ್ನು ಪದಚ್ಯುತಗೊಳಿಸಿ ಆಳ್ವಿಕೆಗೆ ಬಂದವರು ರಾಷ್ಟ್ರಕೂಟರು. ಇವರು ಎಂಟನೇ ಶತಮಾನದ ಮಧ್ಯಭಾಗದಿಂದ ಕರ್ನಾಟಕದ ವಿಶಾಲ ಸಾಮ್ರಾಜ್ಯದ ಸ್ವಾಮಿಗಳಾದರು. ರಾಷ್ಟ್ರಕೂಟರ ಆಳ್ವಿಕೆಯ ಉತ್ತರಾರ್ಧದಿಂದ ಸೊರಬ ಪ್ರದೇಶದಲ್ಲಿ ಸ್ಮಾರಕ ಶಿಲೆಗಳಾದ ವೀರಗಲ್ಲು, ಗೋಸಾಸಕಲ್ಲು ಮತ್ತು ಶಾಸನಗಳು ಸಿಗುತ್ತವೆ. ಮೇಲಿನ ಎರಡು ರಾಜಮನೆತನಕ್ಕೆ ಹೋಲಿಸಿದರೆ ರಾಷ್ಟ್ರಕೂಟರ ಕಾಲದ ಸ್ಮಾರಕ ಶಿಲೆಗಳು ಹೆಚ್ಚು ಸಿಗುತ್ತವೆ. ಬಹುಶಃ ರಾಷ್ಟ್ರಕೂಟರ ಆಳ್ವಿಕೆಯ ಉತ್ತರಾರ್ಧದಿಂದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಈ ಪ್ರದೇಶದಲ್ಲಿ ಆರಂಭವಾಗಿರಬೇಕು.

ರಾಷ್ಟ್ರಕೂಟರನ್ನು ಇತಿಹಾಸ ಪಟಲಕ್ಕೆ ಸೇರಿಸುವುದರ ಮೂಲಕ ಬಾದಾಮಿ ಚಾಲುಕ್ಯರ ವಂಶದವರೆಂದು ಕರೆದುಕೊಂಡು ಆಳ್ವಿಕೆ ನಡೆಸಿದವರು ಕಲ್ಯಾಣದ ಚಾಲುಕ್ಯರು. ಇವರು ಕಲ್ಯಾಣವನ್ನು ರಾಜಧಾನಿಯನ್ನಾಗಿ

ಮಾಡಿಕೊಂಡು ಇಡೀ ದಕ್ಷಿಣ ಭಾರತದ ಬಹುಭಾಗವನ್ನು ಆಳಿದರು. ಕ್ರಿ.ಶ.973 ರಿಂದ ಕ್ರಿ.ಶ.1162ರವರೆಗೆ ಮತ್ತು ಕ್ರಿ.ಶ.1184 ರಿಂದ ಕ್ರಿ.ಶ.1189ರವರೆಗೆ ಇವರ ಆಳ್ವಿಕೆಯ ಕಾಲಾವಧಿಯಾಗಿದೆ. ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಕರ್ನಾಟಕದಾದ್ಯಂತ ಅತಿಹೆಚ್ಚು ಸ್ಮಾರಕ ಶಿಲೆಗಳು ಹಾಗೂ ಶಾಸನಗಳು ಸಿಗುತ್ತವೆ. ಅದರಲ್ಲೂ ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದವುಗಳೇ ಹೆಚ್ಚು ಎಂದು ವಿದ್ವಾಂಸರು ಗುರುತಿಸಿದ್ದಾರೆ. ಇವುಗಳ ಪ್ರಮಾಣವನ್ನು ಸೊರಬ ಪ್ರದೇಶಕ್ಕೆ ಸೀಮಿತಗೊಳಿಸಿ ನೋಡಿದರೆ ಉಳಿದೆಲ್ಲ ರಾಜವಂಶಗಳಿಗಿಂತ ಇಲ್ಲಿಯೂ ಸಹ ಕಲ್ಯಾಣಿ ಚಾಲುಕ್ಯರ ಕಾಲದ ಸ್ಮಾರಕ ಶಿಲೆಗಳು ಮತ್ತು ಶಾಸನಗಳು ಹೆಚ್ಚು ಸಿಗುತ್ತವೆ.

ಕಲ್ಯಾಣಿ ಚಾಲುಕ್ಯರ ನಂತರ ಆಳ್ವಿಕೆ ನಡೆಸಿದವರು ಕಲಚೂರಿಗಳು, ಹೊಯ್ಸಳರು, ಯಾದವರು, ವಿಜನಗರದ ಅರಸರು, ಕೆಳದಿ ಮತ್ತು ಮೈಸೂರು ಒಡೆಯರು. ಈ ಎಲ್ಲಾ ರಾಜವಂಶಗಳ ಆಳ್ವಿಕೆಗೆ ಸೊರಬ ಪ್ರದೇಶ ಸೇರಿದ್ದಿತು. ಇವುಗಳಲ್ಲಿ ಕಲಚೂರಿ, ಯಾದವ ಮತ್ತು ವಿಜನಗರದ ಅರಸರ ಕಾಲದಲ್ಲಿಯೂ ಇಲ್ಲಿ ಸ್ಮಾರಕಶಿಲೆಗಳು ಸಿಗುತ್ತವೆ. ಆದರೆ ಕೆಳದಿ ಹಾಗೂ ಮೈಸೂರು ಒಡೆಯರ ಕಾಲದವು ಕಡಿಮೆ ಸಂಖ್ಯೆಯಲ್ಲಿ ದೊರೆತಿವೆ.

ಅ. ಮಹಾಮಂಡಳೇಶ್ವರರು

ಸಾಮ್ರಾಜ್ಯದ ಅಧಿಪತಿಯಾದ ಚಕ್ರವರ್ತಿಯ ಪಾದಪದ್ಮೋಪಜೀವಿಗಳಾಗಿದ್ದವರು ಮಹಾಮಂಡಳೇಶ್ವರರು. ತಮ್ಮ ಆಳ್ವಿಕೆಗೊಳಪಟ್ಟ ಭೂ-ಪ್ರದೇಶವನ್ನು ಆಳಲು ಇವರು ಸ್ವತಂತ್ರರಾದರೂ ತಮ್ಮ ಮೇಲಿನ ಪ್ರಭುಗಳಿಗೆ ಅಧೀನರಾಗಿಯೂ, ವಿಧೇಯರಾಗಿಯೂ ಇರುತ್ತಿದ್ದರು.

ಮಹಾಮಂಡಳೇಶ್ವರರಿಗೆ ಆಗಾಗ ಬಳಸುವ ಪರ್ಯಾಯ ನಾಮ ಮಂಡಳೇಶ್ವರ ಅಥವಾ ಮಾಂಡಳೀಕ ಎಂದು. 'ಮಹಾಮಂಡಳೇಶ್ವರ'ಪದದ ಶಬ್ದಶಃ ಅರ್ಥ ವಿಸ್ತಾರವಾದ ಭೂಮಿಗೆ ಅಥವಾ ವಿಭಾಗಕ್ಕೆ ಒಡೆಯ ಎಂದಾಗುತ್ತದೆ. ಇವರು ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ವಿಭಾಗಗಳನ್ನು ಆಳುತ್ತಿದ್ದರು. ವಿಸ್ತಾರವಾದ ಸಾಮ್ರಾಜ್ಯದ ಆಡಳಿತವನ್ನು ಚಕ್ರವರ್ತಿಯೊಬ್ಬನೆ ನಡೆಸುವುದು ಅಸಾಧ್ಯ. ಈ ಕಾರ್ಯಕ್ಕಾಗಿ ಮತ್ತು ಸಾಮ್ರಾಜ್ಯದ ಆಡಳಿತ ಸೌಲಭ್ಯಕ್ಕಾಗಿ ಅವನು ವಿಶಾಲವಾದ ರಾಷ್ಟ್ರದಲ್ಲಿ ವಿಭಾಗಿಸಿದ ಮಂಡಲಗಳಿಗೆ ವಂಶಪಾರಂಪರ್ಯದಿಂದ

ಬಂದ ಮಂಡಳೇಶ್ವರರೇ ತನ್ನ ಕೈಕೆಳಗೆ ಮುಂದುವರೆಯಲು ಅನುಮತಿ ನೀಡುತ್ತಿದ್ದನು. ಕೆಲವೊಮ್ಮೆ ತನ್ನ ರಾಜಧಾನಿಯ ಅಧಿಕಾರಿಗಳಿಗೂ ವಹಿಸಿಕೊಡುತ್ತಿದ್ದನು.

ಹೀಗೆ ವಿಭಾಗಿಸಿದ ಸಾಮ್ರಾಜ್ಯದ ವಿಭಾಗಗಳಲ್ಲಿ ಬನವಾಸಿ 12000 ಒಂದು. ಸೊರಬ ಪ್ರದೇಶವು ಈ ಬನವಾಸಿ 12000ಕ್ಕೆ ಸೇರಿದೆ. ಈ ಮಂಡಲವನ್ನು ಬೇರೆಬೇರೆ ರಾಜವಂಶಗಳ ಅವಧಿಯಲ್ಲಿ ಬೇರೆ ಬೇರೆ ಮಹಾಮಂಡಳೇಶ್ವರರು ಆಳ್ವಿಕೆ ನಡೆಸಿದ್ದಾರೆ. ಸೊರಬ ಪರಿಸರದಲ್ಲಿ ಸಿಕ್ಕ ಸ್ಮಾರಕ ಶಿಲೆಗಳ ಆಧಾರದ ಮೇಲೆ ಮಾತ್ರ ಈ ಮಂಡಲದ ಮಹಾಮಂಡಳೇಶ್ವರರ ಹೆಸರುಗಳನ್ನು ಹಾಗೂ ಆಳ್ವಿಕೆ ನಡೆಸಿದ ಕಾಲವನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಸೊರಬ ಪ್ರದೇಶದಲ್ಲಿ ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ಕ್ರಿ.ಶ.737ರ[1] ಮೊದಲ ವೀರಗಲ್ಲಿನಲ್ಲಿ ಬನವಾಸಿನಾಡನ್ನು ಮದನಾಗ ಅರಸ ಆಳುತ್ತಿದ್ದ ಎಂದು ತಿಳಿಸುತ್ತದೆ. ಕ್ರಿ.ಶ.800ರಲ್ಲಿ "ಎರೆಯಮ್ಮರಸರ್ ಬನವಾಸಿ ನಾಡಾಳ್"[2] ಎಂದಿದೆ. ಈ ಕಾಲಕ್ಕೆ ಸೇರಿದ ಇನ್ನೊಂದು ವೀರಗಲ್ಲಿನಲ್ಲಿ ರಾಜಾದಿತ್ಯ[3] ಎಂಬುವನು ಬನವಾಸಿಮಂಡಲವನ್ನು ಆಳುತ್ತಿದ್ದಾನೆಂದು ಉಲ್ಲೇಖಿಸುತ್ತದೆ. ಕೃಷ್ಣ II ಕಾಲದಿಂದ ಬನವಾಸಿ 12000 ಎಂಬ ಉಲ್ಲೇಖ ಬರುತ್ತದೆ. ಕ್ರಿ.ಶ. 910 ರ ಶಾಸನವೊಂದರಲ್ಲಿ "ಶ್ರೀ ಪೃಥ್ವೀವಲ್ಲಭ ಸೇನಾಪರಿಸರ್ಭನವಾಸಿ ಪನ್ನಿಛ್ಛಾಸಿರ ಮುಮಾಳ್" [4] ಎಂದು ವಿವರಿಸುತ್ತದೆ.

ಕ್ರಿ.ಶ. 954ರಲ್ಲಿ ಕಾಲವಿಟ್ಟರಸನು,[5] ಕ್ರಿ.ಶ.955ರಲ್ಲಿ ಮತ್ತು ಕ್ರಿ.ಶ.965ರಲ್ಲಿ ಜವನ್ನೆಸ್[6] ಆಳ್ವಿಕೆನಡೆಸಿದ್ದಾರೆ. ಆದರೆ ಕ್ರಿ.ಶ. 960ರಲ್ಲಿ ಗಜ್ಜೆಂದರ[7] ಮತ್ತು ಕ್ರಿ.ಶ. 964ರಲ್ಲಿ ಬಪ್ಪವ [8] ಆಳ್ವಿಕೆ ನಡೆಸಿದ್ದಾರೆ. ಅಂದರೆ ಇಲ್ಲಿ ಜವನ್ನೆಸ ಎಂಬವನು ಎರಡು ಕಾಲಾವಧಿಯಲ್ಲಿ ಬನವಾಸಿ 12000 ರಕ್ಕೆ ಮಹಾಮಂಡಳೇಶ್ವರನಾಗಿ ಆಳ್ವಿಕೆ ನಡಿಸಿರಬಹುದು.

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕ್ರಿ.ಶ. 999 ರಲ್ಲಿ ಸಾಮಂತ ಕೇಸರಿ ಭೀಮನು,[9] ಚಟ್ಟಯ್ಯ ದೇವನು[10] ಕ್ರಿ.ಶ. 1012 ರಲ್ಲಿ ಹಾಗೂ ಕ್ರಿ.ಶ. 1015 ರಲ್ಲಿ ಕುಂದರಾಜನು[11] ಬನವಾಸಿ 12000 ವನ್ನು ಆಳುತ್ತಿದ್ದರೆಂದು ಶಾಸನಗಳು ತಿಳಿಸುತ್ತವೆ. ಕ್ರಿ.ಶ. 1018 ರಲ್ಲಿ ಆಳುತ್ತಿದ್ದ ಗೊರವದೇವ[12]ನನ್ನು ಶಾಸನವೊಂದು "ಬನವಾಸಿ

ಪುವರೇಶ್ವರಂ ಜಯನ್ತ್ರೀ ಮಧುಕೇಶ್ವರ ದೇವಲಬ್ಧ ವರದಪ್ಪಾ" ಎಂದು ವರ್ಣಿಸಿದರೆ, ಇದೇ ಕಾಲದ ಇನ್ನೊಂದು ವೀರಗಲ್ಲು "ತತ್ಪಾದ ಪದ್ಮೋಪಜೀವಿ ಸ್ವಸ್ತಿಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರ ಬನವಾಸಿ ಪುರವರಾಧೀಶ್ವರ ಕಾದಂಬ ಚಕ್ರ(ವರ್ತಿಮಧು) ಕೇಶ್ವರ ಲಬ್ಧಾವಾರಪ್ರಸಾದ[13] ಎಂದು ವಿವರಿಸುತ್ತದೆ. ಕ್ರಿ.ಶ. 1029ರಲ್ಲಿ ಕುಂದಮರಸನು[14] ಬನವಾಸಿ 12000 ಮತ್ತು ಸಾಂತಳಿಗೆ 1000 ವನ್ನು ಆಳಿದ್ದಾರೆ. ಕ್ರಿ.ಶ.1033ರ ಶಾಸನವು ಬನವಾಸಿ 12000 ಹಾಗೂ ಸಾಂತಳಿಗೆ 1000 ಮತ್ತು ಅನೇಕ ಛತ್ರಗಳನ್ನು ಆಳುತ್ತಿದ್ದ ಆಲಯ್ಯನನ್ನು [15] ಉಲ್ಲೇಖಿಸುತ್ತದೆ.

ಬನವಾಸಿನಾಡನ್ನು ಮತ್ತು ಸಾಂತಳಿಗೆ 1000 ವನ್ನು ಕ್ರಿ.ಶ.1065ರಲ್ಲಿ (ವಿಕ್ರ) ಮಾದಿತ್ಯನು [16] ಆಳುತ್ತಿದ್ದನು. ಕ್ರಿ.ಶ. 1074ರ ತೊರವಂದದ ಶಾಸನದಲ್ಲಿ ಮಹಾಮಂಡಳೇಶ್ವರನಾದ ಉದಯಾದಿತ್ಯನ[17] ಅಧಿಕಾರಗಳನ್ನು ಈ ಕೆಳಗಿನಂತೆ ವಿವರಿಸುತ್ತದೆ. "....ತತ್ಪಾದ ಪದ್ಮೋಪಜೀವಿ ಸ್ವಸ್ತಿಸಮಧಿಗತ ಪಂಚಮಹಾ ಶಬ್ದ ಮಹಾಸಾಮಂನ್ತಾಧಿಪತಿ ಮಹಾಪ್ರಚಂಡ ನಾಯಕನಾಸ್ಥಾನ ವಾಸ್ತುನಾಯಕ ನಿಯೋಗಯೋಗನ್ದರಾಯಣ ಚತುರ ಪಾರಾಯಣಂ ವಿವೇಕ ವಿದ್ಯಧರಂ ಸಕಳಕಳಾಧರಂ ವಿಕ್ರಮೋತ್ತುಂಗನ ಸಹಾಯಸಿಂಗಂ ಶ್ರೀಮದ್ಭುವನಯ್ಯಮಲ್ಲದೇವ ಪಾದಾರವಿಂದ ಷಟ್ಚರಣಂ ಶ್ರೀಮನ್ಮಹಾ ಪ್ರಧಾನ ಸಂಧಿವಿಗ್ರಹಿಮನೆವೆರ್ಗಡೆದಣ್ಣಾನಾಯಕ..." ಈ ಎಲ್ಲಾ ಅಧಿಕಾರಗಳನ್ನು ಹೊಂದಿದ ಆತ ವನವಾಸಿ 12000, ಸಾಂತಳಿಗೆ 1000 ವನ್ನು ಹದಿನೆಂಟು ಛತ್ರದ ಗ್ರಾಮಗಳನ್ನು, ವಡ್ಡಾರಾಳುವ ಸುಂಕದ ಪ್ರದೇಶವನ್ನು ಸುಖದಿಂದ ಆಳುತ್ತಿದ್ದಾನೆಂದು ವಿವರಿಸುತ್ತದೆ. ಕ್ರಿ.ಶ.1075ರಲ್ಲಿ ಮಯೂರವರ್ಮದೇವನು[18] ಬನವಾಸಿ 12000, ಸಾಂತಳಿಗೆ 1000 ಮತ್ತು ಹಾನಗಲ್ಲು 500ನ್ನು ಆಳುತ್ತಿದ್ದನು.

ಕ್ರಿ.ಶ. 1070 ರಲ್ಲಿ ಮತ್ತು ಕ್ರಿ.ಶ. 1077 ರಲ್ಲಿ ಕೀರ್ತಿದೇವನು,[19] ಕ್ರಿ.ಶ.1084ರಲ್ಲಿ ಮಧುಪಯ್ಯಪೆರ್ಗಡೆ, [20] ಕ್ರಿ.ಶ. 1100 ರಲ್ಲಿ ಕೀರ್ತಿವರ್ಮ[21] ಕ್ರಿ.ಶ. 1103-4 ರವರೆಗೆ ಕ್ರಿ.ಶ.1112 ರಲ್ಲಿ ತೈಲಪನ ಮಗ ಕೀರ್ತಿದೇವ[22] ಬನವಾಸಿಯ ಮಹಾಮಂಡಳೇಶ್ವರರಾಗಿ ಆಳುತ್ತಿದ್ದರು. ಗೋವಿಂದರಸನು[23] ಕ್ರಿ.ಶ. 1112 ರಲ್ಲಿ, ಬನವಾಸಿಯ ಅಧಿಪತಿಯಾಗಿದ್ದಾರೆ, ಕ್ರಿ.ಶ.1116 ರಲ್ಲಿ ಗೋಪರಸನು[24] ಕ್ರಿ.ಶ. 1126 ರಲ್ಲಿ ಬೋಗಯ್ಯನು[25] ಬನವಾಸಿ ನಾಡನ್ನು ಆಳುತ್ತಿದ್ದರು. ಕ್ರಿ.ಶ. 1077ರಿಂದ ಕ್ರಿ.ಶ. 1126 ರ ಅವಧಿಯಲ್ಲಿ

ಆಳಿದ ಮಹಾಮಂಡಳೇಶ್ವರರು ಕೇವಲ ಬನವಾಸಿ 12000 ಒಂದನ್ನು ಮಾತ್ರ ಆಳಿದಂತೆ ಕಂಡು ಬರುತ್ತದೆ.

ಕ್ರಿ.ಶ. 1127ರಲ್ಲಿ ತೈಲಪದೇವ[26] ಬನವಾಸಿ 12000ವನ್ನು ಮತ್ತು ಸಾಂತಳಿಗೆ 1000ವನ್ನು ಆಳುತ್ತಿದ್ದರೆ, ತೈಲಹದೇವನು[27] ಬನವಾಸಿ 12000 ಹಾಗೂ ಹಾನಗಲ್ಲು 500ನ್ನು, ಕ್ರಿ.ಶ. 1129 ರಲ್ಲಿ ಆಳ್ವಿಕೆ ನಡೆಸಿದ ವಿವರತಿಳಿದು ಬರುತ್ತದೆ. ಮಯೂರವರ್ಮದೇವನು[28] ಕ್ರಿ.ಶ.1131 ರಲ್ಲಿ ಇದ್ದರೆ. ಕ್ರಿ.ಶ.1139ರಲ್ಲಿ ಮಧುಕರಸನು,[29] ಕ್ರಿ.ಶ. 1140ರಲ್ಲಿ ಮನೆವೆರ್ಗ್ಗಡೆ, ದಂಡನಾಯಕ ಬಿಮ್ಮಣ್ಣಯ್ಯ[30] ರ ಹೆಸರುಗಳಿವೆ. ಕ್ರಿ.ಶ. 1143 ರಲ್ಲಿ ಯೋಗೇಶ್ವರ ದಂಡನಾಯಕ,[31] ಕ್ರಿ.ಶ. 1145ರಲ್ಲಿ ಗೊರವರದೇವ,[32] ಕ್ರಿ.ಶ. 1151ರಲ್ಲಿ ಕೀರ್ತಿದೇವರು,[33] ಕ್ರಿ.ಶ. 1154ರಲ್ಲಿ ಮಹಾಪ್ರಧಾನ, ಸೇನಾಧಿಪತಿ, ಪುಲಗೇರಿನಾಡ ಹೆಗ್ಗಡೆ, ದಂಡನಾಯಹಾದೇವರಸನು[34], ಕ್ರಿ.ಶ. 1165ರಲ್ಲಿ ಕೀರ್ತಿದೇವರಸ[35], ಕ್ರಿ.ಶ. 1178 ರಲ್ಲಿ ಗೋವಿಂದರಾಜ[36], ಕ್ರಿ.ಶ.1183 ರಲ್ಲಿ ವೀರಬಲ್ಲಾಳ[37], ಕ್ರಿ.ಶ. 1187 ರಲ್ಲಿ ಕೊಂಡಮರಸ[38] ಬನವಾಸಿ 12000 ದ ಅಧಿಪತಿಗಳಾಗಿ ಆಳ್ವಿಕೆ ನಡೆಸಿದ ವಿಷಯ ಶಾಸನಗಳಿಂದ ತಿಳಿದುಬರುತ್ತದೆ.ಕ್ರಿ.ಶ. 1189 ರಲ್ಲಿ ಕಾಮದೇವರಸನು[39] ಬನವಾಸಿ 12000 ವನ್ನು ಮತ್ತು ಹಾನಗಲ್ಲು 500ನ್ನು ಆಳುತ್ತಿದ್ದನು.

ಕಲಚೂರಿ ಅರಸರ ಆಳ್ವಿಕೆಯ ಅವಧಿಯಲ್ಲಿ ಕ್ರಿ.ಶ. 1162-63ರಲ್ಲಿ ಕೀರ್ತಿದೇವನು[40]. ಕ್ರಿ.ಶ. 1177ರಲ್ಲಿ ವಿಕ್ರಮಾಂಕನು[41], ಕ್ರಿ.ಶ. 1178ರಲ್ಲಿ ದಂಡನಾಯಕ ಗೋವಿಂದ ರಾಜ[42]ನು, ಕ್ರಿ.ಶ. 1179 ರಲ್ಲಿ ವೀರರಸನು [43] ಬನವಾಸಿ 12000ವನ್ನು ಆಳುತ್ತಿದ್ದರು.ಹೊಯ್ಸಳರ ವೀರಬಲ್ಲಾಳನ ಕಾಲದಲ್ಲಿ ಕ್ರಿ.ಶ.1207ರಿಂದ 1208 ರ ವರೆಗೆ ಬನವಾಸಿ12000 ವನ್ನು ಆಳುತ್ತಿದ್ದ ಕಾವದೇವನ [44] ಉಲ್ಲೇಖವಿದೆ. ನಂತರ ಯಾದವರ ಕಾಲದಲ್ಲಿ ಕ್ರಿ.ಶ.1220-1231ರ ವರೆಗೆ ಮಲ್ಲಿದೇವರಸನು [45] . 12000 ಆಳುತ್ತಿದ್ದನು. ಕ್ರಿ.ಶ. 1235 ರಲ್ಲಿ ಸೋಯಿದೇವನು [46] ಬನವಾಸಿ 12000ವನ್ನು ಬಂದಳಿಕೆಯಿಂದ ಆಳುತ್ತಿದ್ದಾನೆಂದು ಶಾಸನವೊಂದು ತಿಳಿಸುತ್ತದೆ. ಕ್ರಿ.ಶ.1265ರಲ್ಲಿ ಕಾಮದೇವರಸನು[47], ಕ್ರಿ.ಶ. 1270ರಲ್ಲಿ ಚಿಕ್ಕಕಾವದೇವನು[48], ಕ್ರಿ.ಶ. 1280 ರಲ್ಲಿ ಕಾಮದೇವನು[49], ಕ್ರಿ.ಶ. 1289 ರಲ್ಲಿ ಕಾಮದೇವನು [50] ಬನವಾಸಿ ರಾಜ್ಯವನ್ನು ಆಳುತ್ತಿದ್ದ ವಿಷಯ ತಿಳಿದು ಬರುತ್ತದೆ.

[illegible]

[illegible]

ಮಹಾಮಂಡಳೇಶ್ವರರ ಮಹಾಮಂಡಳೇಶ್ವರರು

ಮಧ್ಯಕಾಲದಲ್ಲಿ ಸೊರಬ ಪ್ರದೇಶವು ಮಹಾಮಂಡಳೇಶ್ವರರು ಆಳುತ್ತಿದ್ದ ಬನವಾಸಿ 12000ಕ್ಕೆ ಸೇರಿದ್ದಿತು. ಈ ಮಂಡಲದ ಒಳಗಡೆಯೇ ಅನೇಕ ಚಿಕ್ಕ-ಚಿಕ್ಕ ಮಂಡಲಗಳಿದ್ದು ಅಲ್ಲಿ ಮಾಂಡಳೀಕರು ಮಹಾಮಂಡಳೇಶ್ವರರ ಅಧೀನರಾಗಿದ್ದರೂ ಸಹ ಸ್ವತಂತ್ರವಾಗಿ ಆಳ್ವಿಕೆ ನಡೆಸಿದವರಂತೆ ವರ್ತಿಸಿರುವುದು ಕಂಡುಬರುತ್ತದೆ. ಹೀಗೆ ಕ್ರಿ.ಶ. 12ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ ಸಾಂತಳಿಗೆಯ ಸಾಂತರರು ಮತ್ತು ಉದ್ರಿಯ ಗಂಗರು ಪ್ರಮುಖರಾಗಿದ್ದಾರೆ[51]. ಇವರು ಕೆಲವು ಕಾಲ ಮಾತ್ರ ಈ ರೀತಿ ಮಹಾಮಂಡಳೇಶ್ವರರ ಮಹಾಮಂಡಳೇಶ್ವರರಾಗಿ ಆಳ್ವಿಕೆ ನಡೆಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇವರು ತಮ್ಮ ಪ್ರಾಂತ್ಯ ಅಸ್ಥಿತ್ವಕ್ಕೆ ಬಂದ ನಂತರ ಈ ಪ್ರದೇಶಕ್ಕೆ ತಾವೇ ಶ್ರೇಷ್ಠರೆಂದು ತಿಳಿದು ಕೊಂಡು ಶಾಸನಗಳನ್ನು ಹಾಕಿಸುವಾಗ ನೇರವಾಗಿ ತಮ್ಮ ಹೆಸರಿನಲ್ಲಿಯೇ ಬರೆಯಿಸುತ್ತಿದ್ದರು.

ಉದ್ರಿಯ ಗಂಗರ ಪ್ರಥಮ ಮತ್ತು ಹೆಚ್ಚು ಪ್ರಭಾವಶಾಲಿಯಾದ ಮಾಂಡಳೀಕನೆಂದರೆ ಎಕ್ಕಲರಸದೇವ[52] ಈತನು ಕ್ರಿ.ಶ.1129 ರಲ್ಲಿ ಈ ಪ್ರಾಂತ್ಯದ ಮಾಂಡಳೀಕನಾದಂತೆ ಕಂಡು ಬರುತ್ತದೆ. ಈತನ ಆರಂಭದ ಶಾಸನ ವಿವರಿಸುವಂತೆ" ಸ್ವಸ್ತಿಶ್ರೀಮದ್ವಿಕ್ರಮ ವರ್ಷದ ಕೀಲಕ ಸಂವತ್ಸರದ ಮಾಘ ಶುದ್ಧಾ 13 ಸೋ ಶ್ರೀ ಮನ್ಮಾಹಾಮಂಡಲೇಶ್ವರಂ ಎಕ್ಕಾಲರಸದೇವರುದ್ಧರೆಯೊಳ್ ಸುಖ ಸಂಕಥಾ ವಿನೋಧದಿಂರಾಜ್ಯಂಗೆಯುತ್ತಿರೆ." ಎಂದು ಆರಂಭವಾಗುವ ಶಾಸನಗಳನ್ನು ಬರೆಸುತ್ತಿದ್ದರು. ಕಲ್ಯಾಣಿ ಚಾಲುಕ್ಯರ 3ನೇ ತ್ತೈಲಪನ ಕಾಲಕ್ಕೆ ತನ್ನ ರಾಜನ ಹೆಸರನ್ನು ಬರೆಸುವುದನ್ನು ಕಾಣುತ್ತೇವೆ. ಆದರೆ ಕಲಚೂರಿ ಅರಸರ ಆಳ್ವಿಕೆ ಆರಂಭವಾಗುತ್ತಿದ್ದಂತೆ ಈತನ ಶಾಸನದ ಬರವಣಿಗೆಯಲ್ಲಿ ಸಂಪೂರ್ಣ ಬದಲಾವಣೆ ಕಂಡುಬರುತ್ತದೆ. ತಾನು ಯಾವ ಸಾಮ್ರಾಜ್ಯದ ರಾಜನ ಪಾದಪದ್ಮೋಪ ಜೀವಿಯೋ ಅವರ ಹೆಸರನ್ನು, ನಂತರ ಯಾವ ಮಹಾಮಂಡಳೇಶ್ವರನ ಅಧೀನನಾಗಿಯದ್ದಾನೋ ಆತನ ಹೆಸರನ್ನು ಬರೆಸುವುದರ ಮೂಲದ ತಾನೂ ಸಹ ಒಬ್ಬ ಅಧೀನ ಮಹಾಮಂಡಳೇಶ್ವರ ಎಂದು ಶಾಸನ ಹಾಕಿಸಿರುವುದನ್ನು ಕಾಣುತ್ತೇವೆ. ಉದಾಹರಣೆಗೆ "ಸ್ವಸ್ತಿಶ್ರೀ ಮತ್ಕಳಚೂರ್ಯನಿಜವಿಜಯಭುಜಭಳಚಕ್ರವರ್ತಿಬಿಜ್ಜಣದೇವರುಪೃಥ್ವೀರಾಜ್ಯಂಗೇಯ್ಯುತ್ತಿರೆಸ್ವಸ್ತಿಸಮಧಿಗತ ಪಂಚಮಹಾಶಬ್ದಮಹಾಮಂಡಳೇಶ್ವರಂ → ಬನವಾಸಿಪುರವರಾಧೀಶ್ವರಂ

ಜಯಂತೀಪಮಧುಕೇಶ್ವರಲಬ್ಧವರಪ್ರಸಾದರಪ್ಪಶ್ರೀಮನ್ಮಹಾಮಂಡಳೇಶ್ವರಂ ಕೀರ್ತಿದೇವರಸರಂ ಶ್ರೀಮನ್ಮಾಹಮಂಡಳೇಶ್ವರಂ ಉದ್ಧರೆಯಕ್ಕಲರಸರಂ "[53] ಎಂದು ಶಾಸನ ವೊಂದು ವಿವರಿಸುತ್ತದೆ. ಹೀಗೆ ಈತನ ಈ ರೀತಿಯ ಬರವಣಿಗೆ ಕ್ರಿ.ಶ. 1192 ರ ವರೆಗೆ ಕಂಡುಬರುತ್ತದೆ.

ಉದ್ರಿಯ ಗಂಗರಂತೆ ಮಹಾಮಂಡಳೇಶ್ವರಾಗಿ ಮೆರೆದ ಸಾಮಂತರಲ್ಲಿ ಸಾಂತರರು ಸಹ ಒಬ್ಬರಾಗಿದ್ದಾರೆ. ಇವರ ಮಂಡಲವು 9ನೇ ಶತಮಾನದ ಕೊನೆಯಲ್ಲಿ ಅಸ್ತಿತ್ವಕ್ಕೆ ಬಂದರೂ ಇವರು ಮಹಾಮಂಡಳೇಶ್ವರರೆಂದು ಶಾಸನ ಹಾಕಿಸಿರುವುದು ಕ್ರಿ.ಶ.1152 ರ ಸುಮಾರಿನಲ್ಲಿ. ಇವರ ಬಗ್ಗೆ ನಮಗೆ ಸೊರಬ ಪ್ರದೇಶದಲ್ಲಿ ಆಧಾರಗಳು ಸಿಗುವುದು 12ನೇ ಶತಮಾನದ ಹೊತ್ತಿಗೆ, ಕ್ರಿ.ಶ.1152ರಲ್ಲಿ ಬೊಮ್ಮರಸ[54] ಎಂಬ ಮಹಾಮಂಡಳೇಶ್ವರ ಆಳುತ್ತಿದ್ದ ವಿಚಾರ ತಿಳಿಯುತ್ತದೆ. ಕ್ರಿ.ಶ. 1179 ರಲ್ಲಿ ಬೀರರಸನ [55]ಹೆಸರು ಕೇಳಿಬರುತ್ತದೆ.

ಇಂತಹವುದೆ ಚಿಕ್ಕ ಪ್ರದೇಶದ ಆಳ್ವಿಕೆಯನ್ನು ನಡೆಸಿದ ಇತರ ಮಹಾಮಂಡಳೇಶ್ವರರ ಹೆಸರುಗಳು ಅಲ್ಲಲ್ಲಿ ಕೇಳಿಬರುತ್ತವೆ ಕ್ರಿ.ಶ. 1076ರಲ್ಲಿ ಮಲ್ಲಿಕಾರ್ಜುನ [56] ದೇವನು ಮಹಾಮಂಡಳೇಶ್ವರನಾಗಿ ಹಾನಗಲ್ಲು 500 ನ್ನು ಆಳುತ್ತಿದ್ದನು. ಇದೇರೀತಿ ಕ್ರಿ.ಶ.1157ರಲ್ಲಿ ಮಲ್ಲಿದೇವರಸ [57], ಕ್ರಿ.ಶ. 1158ರಲ್ಲಿ ಬೊಪ್ಪದೇವ[58] ಹಾಯವನ್ನು ಆಳುತ್ತಿದ್ದರು. ಕ್ರಿ.ಶ.1163-1177ರ ವರೆಗೆ ಆಳ್ವಿಕೆ ನಡೆಸಿದ ಜಗದೇವರಸ [59], ಕ್ರಿ.ಶ. 1235ರಲ್ಲಿ ಸೋಯಿದೇವ [60] ಬಂದಳಿಕೆಯ ಮಹಾಮಂಡಳೇಶ್ವರನಾಗಿ ಆಳ್ವಿಕೆ ನಡೆಸಿರುವುದು ಶಾಸನಗಳಿಂದ ತಿಳಿಯುವ ಸಂಗತಿಯಾಗಿದೆ.

ಹೀಗೆ ಕ್ರಿ.ಶ.9ನೇ ಶತಮಾನದಿಂದ 13ನೇ ಶತಮಾನದ ಕೊನೆಯ ಕಾಲಾವಧಿಯವರೆಗೆ ಬನವಾಸಿ 12000ವನ್ನು ಆಳಿದ ಸುಮಾರು 50 ಮಹಾಮಂಡಳೇಶ್ವರರ ಹೆಸರುಗಳು ಕೇಳಿಬರುತ್ತವೆ ಇವರಲ್ಲಿ ಕೆಲವರು ಕೇವಲ ಬನವಾಸಿ ನಾಡನ್ನು ಆಳಿದರೆ ಇನ್ನೂ ಕೆಲವರು ಎರಡರಿಂದ ಮೂರು ಪ್ರಾಂತ್ಯಗಳನ್ನು ಏಕಕಾಲಕ್ಕೆ ಆಳ್ವಿಕೆನಡೆಸಿದ್ದಾರೆ. ಮತ್ತೆ ಕೆಲವರು ಬೇರೆ ಬೇರೆ ಅಧಿಕಾರಗಳ ಜೊತೆಗೆ ಬನವಾಸಿ ಮಂಡಲವನ್ನು ಆಳುವವರು. ಈ ಬನವಾಸಿ 12000ಕ್ಕೆ ಸೇರಿದ ಪ್ರದೇಶದಲ್ಲಿಯೇ ಮಹಾಮಂಡಳೇಶ್ವರರ ಮಹಾಮಂಡಳೇಶ್ವರರಾಗಿ ಆಳ್ವಿಕೆಯನ್ನು ನಡೆಸಿರುವುದು ಸಹ ಕಂಡುಬರುತ್ತದೆ.

ಆ. ಸಾಮಂತರು

ಸಾಮಂತರಾದವರು ಮಹಾಮಂಡಳೇಶ್ವರನ ಅಧೀನರಾಗಿ ಒಂದು ಚಿಕ್ಕ ಪ್ರಾಂತ್ಯದ ಒಡೆಯನಾಗಿ ಆಳ್ವಿಕೆ ನಡೆಸಿರುವುದನ್ನು ಕಾಣುತ್ತೇವೆ. ಇವರು ರಾಜನಿಗೆ ನೇರವಾಗಿ ಅಧೀನರಾಗಿರದೆ ತಮ್ಮ ತಮ್ಮ ಮಹಾಮಂಡಳೇಶ್ವರರಿಗೆ ಮಾತ್ರ ಅಧೀನರಾಗಿ ತಮ್ಮ ಪ್ರಾಂತ್ಯದಲ್ಲಿ ಸ್ವತಂತ್ರವಾಗಿ ಆಳ್ವಿಕೆ ನಡೆಸುತ್ತಿರುತ್ತಾರೆ. ಅದೇ ರೀತಿ ನಾಡಗೌಡ ಮತ್ತು ಮಾಂಡಳೀಕ ಎಂಬುವವರೂ ಸಹ ಸಾಮಂತರ ಸಮಾನ ಹುದ್ದೆ ಮತ್ತು ಅಧಿಕಾರಗಳನ್ನು ಹೊಂದಿರುವರು.

ಕ್ರಿ.ಶ. 800 ರಲ್ಲಿ ಚಿತ್ರವಾಹನನು [61] ಆಳುವಖೇಡ 6000ವನ್ನು, ಕ್ರಿ.ಶ.904ರಲ್ಲಿ ಪ್ರಿಯಾಗರನ್ನು[62] ಮಹಾಸಾಮಂತನಾಗಿ ಎಡನಾಡನ್ನು, ಕಂಗಲಿಂಡಿಗ [63] ನಾಡಗೌಡನಾಗಿ ಕ್ರಿ.ಶ.954ರಲ್ಲಿ ಆಳುತ್ತಿದ್ದರು. ಕ್ರಿ.ಶ.955ರಲ್ಲಿ ಬಿಟ್ಟಗನು [64] ನಾಡಗೌಡನಾಗಿ ಸಣ್ಣನಾಡನ್ನು ಆಳುತ್ತಿದ್ದನು. ಕ್ರಿ.ಶ. 960ರಲ್ಲಿ ನಾಗರಖಂಡ 70 ನ್ನು ಎರೆಯಣನು [65] ಸಾಮಂತನಾಗಿಯೂ, ನಾಡಗೌಡನಾಗಿ ಕ್ರಿ.ಶ.967ರಲ್ಲಿ ಬಿಟ್ಟಗ [67] ಬದುರುಳಿಗೆ 70ನ್ನು ನಾಡಗೌಡನಾಗಿ, ಕ್ರಿ.ಶ. 979ರಲ್ಲಿಯೂ ಬಿಟ್ಟಗ [67] ಜಿಡ್ಡುಳಿಗೆ 70ನ್ನು ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ.

ಮಹಾಸಾಮಂತನಾದ ಶಾಂತಿವರ್ಮನು [68] ಕ್ರಿ.ಶ. 991ರಲ್ಲಿ ಹೆಚ್ಚೆಯಲ್ಲಿ ಆಳುತ್ತಿದ್ದನು. ಕ್ರಿ.ಶ. 999ರಲ್ಲಿ ಕಡಿಮೆಯ್ಯ [69] ಪೊರ್ಗೆಸ್ವತ್ತನ್ನು ಆಳುತ್ತಿದ್ದರೆ, ಸತ್ತಗರ ನಾಗಾರ್ಜುನ [70] ಬಂದಳಿಕೆಯನ್ನು ನಾಡಗೌಡನಾಗಿ ಆಳುತ್ತಿದ್ದನು. ಕ್ರಿ.ಶ.1081ರಲ್ಲಿ ಮಹಾಸಾಮಂತಾಧಿಪತಿ ದಂಡನಾಯಕ, ತಂ*ಬರ ಪ್ರಭು[71] ಸಾಂತಳಿಗೆ 1000 ಜಿಡ್ಡುಳಿಗೆ 70 ಮತ್ತು ನಾಗರಖಂಡ 70ನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಕ್ರಿ.ಶ.1084ರಲ್ಲಿ ಮಹಾಪ್ರಧಾನನಾಗಿ ಮಧುವಯ್ಯಪೆರ್ಗಡೆ [72], ಆಳ್ವಿಕೆ ನಡೆಸಿದರೆ, ಬೊಪ್ಪ [73] ಎಂಬುವವನು ನಾಡಗೌಡನಾಗಿ ಬಂದಳಿಕೆಯನ್ನು ಆಳುತ್ತಿದ್ದನು. ಕ್ರಿ.ಶ.1112ರಲ್ಲಿ ಬೊಪ್ಪರಸನು [74] ನಾಗರಖಂಡ 70ನ್ನು ಆಳಿದರೆ, ಕ್ರಿ.ಶ. 1116ರಲ್ಲಿ ಬೊಪ್ಪದೇವ [75] ಆಳುತ್ತಿದ್ದಾನೆಂದು ಶಾಸನ ತಿಳಿಸುತ್ತದೆ.

[illegible]

[illegible]

[illegible]

[illegible]

ಕ್ರಿ.ಶ. 1129ರಲ್ಲಿ ಮಾಂಡಳೀಕನಾದ ಸಿಂಗಣ್ಣನ[76] ಉಲ್ಲೇಖವಿದೆ. ಕ್ರಿ.ಶ.1139ರಲ್ಲಿ ಸೋಮರಸನು[77] ನಾಗರಖಂಡ 70ನ್ನು ನಾಡಗೌಡನಾಗಿ ಆಳಿದರೆ, ಕ್ರಿ.ಶ. 1143ರಲ್ಲಿ ಅಧಿಕಾರಿ ಪೆರ್ಗಡೆ ಮಲ್ಲಿದೇವನು [78] ಜಿಡ್ಡುಳಿಗೆ 70ನ್ನು ಆಳುತ್ತಿದ್ದನು. ಕ್ರಿ.ಶ.1152ರಲ್ಲಿ ಕಾಳಗೌಡನು [79] ನಾಡಪ್ರಭುವಾಗಿದ್ದನು. ಕ್ರಿ.ಶ.1154ರಲ್ಲಿ[80] ಮಹಾಪ್ರಧಾನರಾದ ಮಾದಯ್ಯ ಮತ್ತು ಚಟ್ಟಯ್ಯರು ಆಳುತ್ತಿದ್ದರು. ಕ್ರಿ.ಶ. 1157ರಲ್ಲಿ ಎಯಾಸಿಂಗ್[81] ಕ್ರಿ.ಶ.1159ರಲ್ಲಿ ಮಹಾಪ್ರಧಾನ ಬೊಮ್ಮರಸ [82], ಕ್ರಿ.ಶ.1163ರಲ್ಲಿ ಬಮ್ಮಣ್ಣ [83], ಕ್ರಿ.ಶ. 1165ರಲ್ಲಿ ಮಹಾಪ್ರಧಾನ ಮಾಂಡಳೀಕ ಬೊಮ್ಮರಸನ [84] ಉಲ್ಲೇಖವಿದೆ. ಕ್ರಿ.ಶ.1171ರಲ್ಲಿ ಕೈಲಯ್ಯ[85], ನೆರೆಯಿಂಗಲ್ಲ ಠಾಣಾಂತರದಲ್ಲಿ ಆಳುತ್ತಿದ್ದ. ಕ್ರಿ.ಶ. 1176ರಲ್ಲಿ ಸಾಮಂತ ವಿಕ್ರಮಾದಿತ್ಯನ[86] ಉಲ್ಲೇಖ ಕಂಡುಬರುತ್ತದೆ. ಕ್ರಿ.ಶ.1178ರಲ್ಲಿ ಐಹದೇವರಸ [87]ನು ಹಾನಗಲ್ಲು 500ನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ

ಕ್ರಿ.ಶ.1243ರಲ್ಲಿ ಕಾಮೇಯ ಹಡವಳ[88]ನು ನಾಡಗೌಡನಾಗಿ ಆಳುತ್ತಿದ್ದನು. ಕ್ರಿ.ಶ.1265ರಲ್ಲಿ ನಾಡಪ್ರಭು ಹಡವಳ ಬೀರಯ್ಯ[89]ನ ಹೆಸರು ಕೇಳಿಬರುತ್ತದೆ. ಕ್ರಿ.ಶ.1288ರಲ್ಲಿ ಕಾಮಗೌಡನು[90], ಕ್ರಿ.ಶ.1289ರಲ್ಲಿ ಮಹಾಪ್ರಧಾನ ಬೀರಯ್ಯ ದಂಡನಾಯಕನು [91] ಎಡನಾಡು 70ನ್ನು, ಕ್ರಿ.ಶ. 1294ರಲ್ಲಿ ಮೇಯಿದೇವ ರಾಣಯ್ಯ [92] ಎಡನಾಡು 70ನ್ನುಆಳುತ್ತಿದ್ದುದು ಕಂಡುಬರುತ್ತದೆ.

ಹೀಗೆ ಬನವಾಸಿ 12000 ಮಂಡಲದ ಒಳಗಡೆಯೇ ಸುಮಾರು 4 ರಿಂದ 5 ಸಾಮಂತರ ಸ್ವತಂತ್ರ ಪ್ರಾಂತ್ಯಗಳಿವೆ. ಜೊತೆಗೆ ಅಲ್ಲಲ್ಲಿ ಬೇರೆ ಬೇರೆ ಪ್ರಾಂತ್ಯಗಳ ಸಾಮಂತರ ಹೆಸರುಗಳು ಸಹ ಕಂಡುಬರುತ್ತವೆ. ಇವರಲ್ಲಿ ಕೆಲವರು ನೇರವಾಗಿ ಸಾಮಂತರಾಗಿದ್ದರೆ. ಮತ್ತೆ ಕೆಲವರು ಬೇರೆ ಅಧಿಕಾರಗಳ ಜೊತೆಗೆ ಸಾಮಂತರಾಗಿ ಕಾರ್ಯ ನಿರ್ವಹಿಸಿರುವುದು ಕಂಡುಬರುತ್ತದೆ.

ಇ. ಗಾವುಂಡರು

ಗ್ರಾಮದ ಆಡಳಿತವನ್ನು ನೋಡಿಕೊಳ್ಳುವವನು ಗಾವುಂಡ. ಕೆಲವು ಗ್ರಾಮಗಳಲ್ಲಿ ಹಲವು ಜನ ಗಾವುಂಡರು ಇರುತ್ತಿರುವುದನ್ನು ಎಂ. ಚಿದಾನಂದಮೂರ್ತಿಯವರು [93] ಗುರುತಿಸಿದ್ದಾರೆ. ಒಂದು ಊರಿನಲ್ಲಿ

[illegible]

[illegible]

[illegible]

[illegible]

[illegible]

ಅನೇಕ ಗಾವುಂಡರಿದ್ದರೂ ಅವರೆಲ್ಲರ ಮೇಲೆ ಒಬ್ಬನೆ ಗಾವುಂಡನಿರುತ್ತಿದ್ದನು. ಎಲ್ಲಾ ಅಧಿಕಾರ ಇವನ ಕೈಯಲ್ಲಿ ಇರುತ್ತಿತ್ತು. ಗ್ರಾಮದ ಆಡಳಿತವನ್ನು ನೋಡಿಕೊಂಡು ಹೋಗುವುದರ ಜೊತೆಗೆ, ಗ್ರಾಮ ರಕ್ಷಣೆ ಮಾಡುವುದು ಪ್ರಮುಖ ಕೆಲಸವಾಗಿತ್ತು. ಸುಂಕ ಸಂಗ್ರಹಣೆ, ಕೆಲಸವೂ ಇವರದಾಗಿತ್ತು. ಇಂತಹ ಅಧಿಕಾರವನ್ನು ಹೊಂದಿದ ಗಾವುಂಡರು ಸೊರಬ ಪ್ರದೇಶದಲ್ಲಿಯೂ ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಅವುಗಳನ್ನು ಇಲ್ಲಿ ಸ್ಥೂಲವಾಗಿ ನೋಡಬಹುದು.

ಕ್ರಿ.ಶ. 800 ರಲ್ಲಿ ಮಾವಲಿ ಗ್ರಾಮವನ್ನು ಪೊಲೆಯಮ್ಮ ಎಂಬ ಗೌಡನು ಆಳ್ವಿಕೆ ನಡೆಸಿದ್ದು ನಂತರ ಆತನ ಮಗ ರಾಜಪುಲಿ ಕುಲಮುದ್ದ[94] ಗಾವುಂಡನಾಗಿರುವುದು ಕಂಡುಬರುತ್ತದೆ. ಕಚ್ಚವಿಕೊಲತಿಲಕ[95] ಎಂಬುವವನು ಕ್ರಿ.ಶ. 955ರಲ್ಲಿ ಕಳ್ಗೊಟ್ಟಿ ಗ್ರಾಮದ ಗೌಡನಾಗಿದ್ದ, ಬೆಟ್ಟದ ಕೂರಲಿಯನ್ನು ಶಶಿಗಳಬೀಡ[96] ಆಳುತ್ತಿದ್ದುದ್ದನ್ನು ಶಾಸನವು "ಶಶಿಗಳಬೀಡ ಉರ್ಗಾವುಂಡಗೆಯ್ಯೆ" ಎಂದು ಉಲ್ಲೇಖಿಸುತ್ತದೆ. ಕ್ರಿ.ಶ. 964ರಲ್ಲಿ ಹುನವಳ್ಳಿಯನ್ನು ಮಾದಗರ ಕಮ್ಮಯ್ಯನ ಮಗ ನರಿವಮ್ಮಗೌಡನು [97], ಅರಿವರ್ಮ [98] ಎಂಬುವವನು ಕ್ರಿ.ಶ.964ರಲ್ಲಿ ಹುನವಳ್ಳಿಯನ್ನು, ಕ್ರಿ.ಶ.972ರಲ್ಲಿ ಕುಪ್ಪಯ್ಯನು [99], ಊರಗೌಡನಾಗಿ ಬೆನ್ನೂರನ್ನು ಆಳುತ್ತಿದ್ದರು. ಅದೇ ಬೆನ್ನೂರು ಗ್ರಾಮವನ್ನು ಕ್ರಿ.ಶ.973ರಲ್ಲಿ ಊರಿನ ರೈತ ಕುಟುಂಬದ ಸದಸ್ಯರು ಆಳುತ್ತಿದ್ದರು ಎಂಬುದನ್ನು ಶಾಸನವು "ಕುಳುವರಂ ಬಿನಕಾಳ್ಳಿ ಊರುಗಾಮುಣ್ಡುಗೆಯ್ಯೆ [100]" ಎಂದು ತಿಳಿಸುತ್ತದೆ.

ಕ್ರಿ.ಶ. 1018ರಲ್ಲಿ ಹಳೇ ಸೊರಬ ಗ್ರಾಮವನ್ನು ತಮ್ಮ ಗೌಡನು [101] ಆಳುತ್ತಿದ್ದನು. ಕ್ರಿ.ಶ. 1081ರಲ್ಲಿ ಕುಣತೆಪ್ಪ ಗ್ರಾಮವನ್ನು ನಾಗಗೌಡನು [102] ಆಳುತ್ತಿದ್ದ ವಿಚಾರ ತಿಳಿದರೆ, ಕ್ರಿ.ಶ. 1116 ರಲ್ಲಿ ಅದೇ ಗ್ರಾಮವನ್ನು ಕಲ್ಲಗೌಡನು [103] ಆಳುತ್ತಿದ್ದ ಮಾಹಿತಿಯನ್ನು ಶಾಸನಗಳು ತಿಳಿಸುತ್ತವೆ. ಕ್ರಿ.ಶ. 1130ರಲ್ಲಿ ಜಿಡ್ಡುಳಿಗೆ 70ಕ್ಕೆ ಸೇರಿದ ಮಾವಲಿ ಗ್ರಾಮವನ್ನು ಏಚಗೌಡನ ಮಗ ಚೆವುಡಗೌಡನು[104], ಕ್ರಿ.ಶ.1139 ರಲ್ಲಿ ಹಿರೇಮಾಗಡಿಯನ್ನು[105] ಬಮ್ಮಗೌಡ ಮತ್ತು ದೊಡ್ಡಗೌಡ ಆಳುತ್ತಿದ್ದರು. ಲಕುಮಗೌಡನ ಮಗನಾದ ಕಾಳಯ್ಯನಿಗೆ ಕನ್ನಸಿರಿನ್ನ ಮಗಳು ಕಾಚಜ್ಜಿಯು ಬಳುವಳಿಯಾಗಿ ಕೊಟ್ಟ ಕಾತವಳ್ಳಿ [106] ಗ್ರಾಮವನ್ನು ಕ್ರಿ.ಶ. 1157ರಲ್ಲಿ ಆಳುತ್ತಿದ್ದುದನ್ನು ಶಾಸನ ಈ ಕೆಳಗಿನಂತೆ ವಿವರಿಸುತ್ತದೆ. "....ಕಾತಿಕವಳ್ಳಿಯ ಲಕುಮ ಗಾವುಂಡನ ಮಗಂ ಕಾಳೆಯಂಗೆ ಕಂನ್ನಸಿರಿನ್ನ ಮಗಳು ಕಾಚಜ್ಜಿಯ್ಯ ಬಳಿವಳಿಯ ಕೊಟ್ಟು ತಾನೂರಂ ಮಾಡುತ್ತಿರಲು"

ಎಂದು ಉಲ್ಲೇಖಿಸುತ್ತದೆ. ಕ್ರಿ.ಶ. 1165ರಲ್ಲಿ ಮಾವಲಿಯನ್ನು ಚೌಡಗೌಡನು, ಬೀರಗೌಡ ಮತ್ತು ಕಾಳಗೌಡ ಕ್ರಿ.ಶ.1193ರಲ್ಲಿ ಸೊರಬವನ್ನು[108], ಕ್ರಿ.ಶ. 1220ರಲ್ಲಿ ಸಾರೆಕೊಪ್ಪವನ್ನು ಬೈರವನಾಯಕನು[109] ಊರಗೌಡರಾಗಿ ಆಳುತ್ತಿದ್ದರು. ಕ್ರಿ.ಶ.1231ರ ಕಾತೂರು [110] ಗ್ರಾಮದ ಶಾಸನವು ಊರಗೌಡ ಎಂದು ಉಲ್ಲೇಖಿಸುತ್ತದೆ. ಶಾಸನ ಹೆಚ್ಚು ತ್ರುಟಿತವಾಗಿರುವುದರಿಂದ ಗೌಡನ ಹೆಸರು ಸಿಗುವುದಿಲ್ಲ. ಕ್ರಿ.ಶ. 1284ರಲ್ಲಿ ಕುಪ್ಪೆ ಗ್ರಾಮವನ್ನು ಏಕ್ಕಲಗೌಡನು [111], ಕ್ರಿ.ಶ. 1289ರಲ್ಲಿ ಚಿಟ್ಟೂರು ಗ್ರಾಮವನ್ನು [112] ಕಾಳಗೌಡ ಮತ್ತು ಹಡವಳ ಮಾಚಯ್ಯ ಆಳುತ್ತಿದ್ದ ವಿಷಯ ಶಾಸಾನಗಳಿಂದ ತಿಳಿದುಬರುತ್ತದೆ.

ಹೀಗೆ ಗ್ರಾಮದ ಅನೇಕ ಮುಖ್ಯ ಜವಾಬ್ದಾರಿಯನ್ನು ಹೊತ್ತ ಗಾವುಂಡರು ಗ್ರಾಮದ ಸಮಗ್ರ ಆಗುಹೋಗುಗಳನ್ನು ನೋಡಿಕೊಂಡು ಹೋಗುತ್ತಿದ್ದರು. ಗ್ರಾಮೀಣ ಜನರಲ್ಲಿ ಶಾಂತಿ, ಸುಭಿಕ್ಷೆಗಳನ್ನುಂಟು ಮಾಡುವಲ್ಲಿ ಇವರ ಪಾತ್ರ ಹೆಚ್ಚು ಗಮನೀಯವಾದದ್ದು.

3.3. ಯುದ್ಧದ ಸ್ವರೂಪ

(i) ಮಹಾಮಂಡಳೇಶ್ವರ, ಸಾಮಂತರ ಮತ್ತು ಸ್ಥಳೀಯರ ನಡುವಿನ ಯುದ್ಧದ ಸ್ವರೂಪ ಮತ್ತು ಸಂಬಂಧ

ಈಗಾಗಲೇ ಸ್ಪಷ್ಟಪಡಿಸಿರುವಂತೆ ಸೊರಬ ಬಯಲು ಪ್ರದೇಶದಿಂದ ಪ್ರತ್ಯೇಕಕೊಂಡು, ಮಲೆನಾಡು ಮತ್ತು ಬಯಲು ಪ್ರದೇಶದ ನಡುವಿನ ಕೊಡುತಾಣ. ಬಹುತೇಕ ರಾಜರ ಆಡಳಿತದ ಕೇಂದ್ರಗಳೆಲ್ಲ ಬಯಲು ಸೀಮೆಯ ವ್ಯಾಪ್ತಿಯಲ್ಲೇ ರೂಪುಗೊಂಡವುಗಳು. ರಾಜರಿಗೂ ಮತ್ತು ಮಲೆನಾಡಿನ ಜನರಿಗೂ ನೇರವಾದ ಸಂಪರ್ಕ ಕಡಿಮೆ. ಇದಕ್ಕೆ ಭೌಗೋಳಿಕ ವಾದ ದುರ್ಗಮ ಪರಿಸ್ಥಿತಿಯೇ ಕಾರಣ. ಮಧ್ಯಕಾಲದ ಸಂದರ್ಭದಿಂದ ಈಚೆಗೆ ರಾಜರ ಸಾಮ್ರಾಜ್ಯ ವಿಸ್ತರಣೆಯ ಮಹತ್ವಕಾಂಕ್ಷೆಯ ಪರಿಣಾಮವಾಗಿ ಮಲೆನಾಡಿಗೂ ಆಡಳಿತದ ಉಪಕೇಂದ್ರಗಳು ವ್ಯಾಪಿಸಿದವು. ಇಂತಹ ಮಹಾಮಂಡಳೇಶ್ವರರು ಮತ್ತು ಸಾಮಂತರು ಮಲೆನಾಡಿಗೆ ಸಮೀಪವಾದ ಬಯಲು ಸೀಮೆಯ ನಗರ ಪಟ್ಟಣಗಳಲ್ಲಿ ತಮ್ಮ ಆಡಳಿತ ಕೇಂದ್ರವನ್ನು ಸ್ಥಾಪಿಸಿಕೊಂಡು ಆಳುತ್ತಿದ್ದರು. ರಾಜನು ತನ್ನ ಆಡಳಿತ ವ್ಯವಸ್ಥೆಯನ್ನು ಮಲೆನಾಡಿಗೂ ವಿಸ್ತರಿಸುವಂತೆ ಪ್ರೋತ್ಸಾಹಿಸಿದುದರ ಫಲವಾಗಿ ಆಗಾಗ ಸಾಮಂತರು ಅಥವಾ ಮಂಡಳೀಕರು ಮಲೆನಾಡು ಭಾಗದ ಊರುಗಳಲ್ಲಿ ಜನರನ್ನು

[illegible]

[illegible]

[illegible]

[illegible]

[illegible]

ಹದ್ದುಬಸ್ತಿನಲ್ಲಿಡಲೂ ಮತ್ತು ಸಂಪನ್ಮೂಲಗಳನ್ನು ದೋಚಿ ಕೇಂದ್ರೀಕರಿಸಲು ಆಕ್ರಮಣಗಳನ್ನು ಅಥವಾ ದಾಳಿಗಳನ್ನು ಮಾಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಮಲೆನಾಡಿನ ಹಳ್ಳಿಗಳ ಭೂ ಮಾಲೀಕರು, ಪುರೋಹಿತಶಾಹಿಗಳು ಮತ್ತು ವರ್ತಕರು ತಮ್ಮ ನೇತೃತ್ವದಲ್ಲಿ ಸ್ಥಳೀಯ ದುಡಿಯುವ ಜನರನ್ನು ಸಂಘಟಿಸಿ ತಾವು ಹೋರಾಡಿ ಆ ಮೂಲಕ ಕೆಳವರ್ಗವನ್ನು ಹೋರಾಟಕ್ಕೆ ಪ್ರಚೋದಿಸುತ್ತಿದ್ದರು. ಹೀಗೆ ಹೋರಾಟಕ್ಕೆ ಪ್ರಚೋದಿಸುತ್ತಿದ್ದದು ಸ್ಥಳೀಯ ಮೇಲ್ವರ್ಗದ ಉದ್ದೇಶ ಸ್ಪಷ್ಟವಾಗಿಯೇ ಇದೆ. ತಮ್ಮ ಹಿತರಕ್ಷಣೆಗಾಗಿ ಈ ತರಹದ ಯುದ್ಧಗಳನ್ನು ಸಂಘಟಿಸುತ್ತಿದ್ದ ಸ್ಥಳೀಯರು ಸಾಮಂತರ ಅಥವಾ ಮಹಾಮಂಡಳೇಶ್ವರರ ವ್ಯವಸ್ಥಿತ ಯುದ್ಧತಂತ್ರದ ಮುಂದೆ ಸೋಲಲೇಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ಸಾವಿಗೋಳಪಟ್ಟ ಸ್ಥಳೀಯರ ವೀರರುಗಳನ್ನು ಸ್ಥಳೀಯ ಮೇಲ್ವರ್ಗದವರು ನೆಡಿಸಿ ಸ್ಫೂರ್ತಿಸುತ್ತಿರುವುದು ಸ್ಪಷ್ಟವೇ ಆಗಿದೆ.

ರಾಜ ವ್ಯವಸ್ಥೆಯ ಶಿಷ್ಟ ಮಾದರಿಯ ಯುದ್ಧದ ಮುಂದೆ ಸ್ಥಳೀಯರ ಗೆರಿಲ್ಲಾ ಮಾದರಿಯ ಯುದ್ಧ ತಂತ್ರಗಳು ಮುಖಾಮುಖಿಯಾಗುತ್ತಿದ್ದವು. ಶಿಷ್ಟ ಮಾದರಿಯ ಯುದ್ಧಗಳಲ್ಲಿ ಬಳಕೆಯಾಗುತ್ತಿದ್ದ ಕತ್ತಿ, ಗುರಾಣಿ, ಭರ್ಜಿ, ಆನೆ, ಕುದುರೆ ಮೊದಲಾದ ತಾಂತ್ರಿಕ ಪರಿಕರಗಳು ಸ್ಥಳೀಯರಿಗೆ ಸಾಧ್ಯವಿರಲ್ಲಿಲ್ಲ. ಅದೇ ವೃತ್ತಿಯಾದ ಯುದ್ಧ ತರಬೇತಿ ಇಂತಹ ಸೈನಿಕರಿಗೆ ಇರುತ್ತಿತ್ತು. ಆದರೆ ಸ್ಥಳೀಯರಿಗೆ ಈ ಯಾವ ಯುದ್ಧ ತರಬೇತಿಗಳಾಗಲಿ ತಾಂತ್ರಿಕ ಉಪಕರಣಗಳಾಗಲಿ ಲಭ್ಯವಿರಲಿಲ್ಲ. ಕಾರಣ ಇವರಿಗೆ ಯುದ್ಧ ಎನ್ನುವುದು ಅನುಷಂಗಿಕವಾದದ್ದು. ಬಿಲ್ಲು, ಬಾಣ, ಕತ್ತಿ ಇಂತಹ ಸಾಮಾನ್ಯ ಉಪಕರಣಗಳನ್ನು ಬಳಸಿ ಪೂರ್ವ ಸಿದ್ಧತೆಗಳಿಲ್ಲದೆ ಯುದ್ಧಕ್ಕೆ ಹೊರಡುವುದರಿಂದ ಸೋಲು ಖಚಿತವಾಗಿದ್ದಿತ್ತು. ಹಾಗಾಗೀ ಸ್ಥಳೀಯ ವೀರರ ಸ್ಮಾರಕಗಳೇ ಈ ಭಾಗದಲ್ಲಿ ಯತೇಚ್ಛವಾಗಿ ರಚನೆಯಾಗಿವೆ.

ಉದಾ:(ಅ) ಕ್ರಿ.ಶ.1116ರ ಶಾಸನವೊಂದು ತಿಳಿಸುವಂತೆ ಕದಂಬ ರಾಜ್ಯದ ಕೀರ್ತಿವರ್ಮನು ನಾಗರ ಖಂಡ ಎಪ್ಪತ್ತರ ಪ್ರದೇಶದಲ್ಲಿರುವ ಕುಣಿತೆಪ್ಪ ಗ್ರಾಮಕ್ಕೆ ಬಂದು ಊರನ್ನು ಕೊಳ್ಳೆ ಹೊಡೆದು ಸ್ತ್ರೀಯರ ಮಾನಭಂಗ ಮಾಡಿ ತುರುಗಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಅದೇ ನಾಗರಖಂಡ ಎಪ್ಪತ್ತರ ಪ್ರಭು ಕುಣಿತೆಪ್ಪದ ಮಲ್ಲಗೌಡನ ಆಳಿಯ ಮಕಳಮಣಿ ಎಂಬುವನು ಹಲವರನ್ನು ಇರಿದು ಸುರಲೋಕ ಪ್ರಾಪ್ತನಾದನು[113].

[illegible]

[illegible]

[illegible]

(ಆ) ಕ್ರಿ.ಶ.1163ರ ಕೊಳಗದ ಶಾಸನವೊಂದರ ಪ್ರಕಾರ ಎಕ್ಕಲರಸ ದೇವನು ಜಗದೇವನ ಮೇಲೆ ಎರಗಿ ಕಾಳ್ಗಗ ಮಾಡಿ ಸ್ತ್ರೀಯರ ಮಾನಭಂಗ ಮಾಡಿ ತುರುಗಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಕಿಳ್ಳ ಎಂಬುವನು ಹೋರಾಡಿ ತುರುಗಳನ್ನು ಹಿಂತಿರುಗಿಸಿ ಸುರಲೋಕ ಪ್ರಾಪ್ತನಾದನು.[114]

(ii) ಗೌಡರ ಮತ್ತು ಬೇಡರ ನಡುವಿನ ಯುದ್ಧದ ಸ್ವರೂಪ ಮತ್ತು ಸಂಬಂಧ

ಗೌಡರ ಮತ್ತು ಬೇಡರ ನಡುವಿನ ಯುದ್ಧದ ಸ್ವರೂಪವು ಸಾಮಂತಶಾಹಿ ಮತ್ತು ಗೌಡರ ನಡುವಿನ ಯುದ್ಧದ ಸ್ವರೂಪ ಮತ್ತು ಸಂಬಂಧಕ್ಕಿಂತ ಸಂಪೂರ್ಣ ವಿಭಿನ್ನ ಸ್ವರೂಪದ್ದು. ಸಾಮಂತಶಾಹಿಗಳ ಯುದ್ಧ ಸಂಬಂಧ ಅಥವಾ ಉದ್ದೇಶ ಸಂಪನ್ಮೂಲಗಳ ಕೇಂದ್ರೀಕರಣ ಮತ್ತು ಸಾಮ್ರಾಜ್ಯ ವಿಸ್ತರಣೆಯದಾಗಿರುತ್ತದೆ. ಬೇಡ ಮತ್ತು ಗೌಡರ ನಡುವಿನ ಯುದ್ಧದ ಸ್ವರೂಪ ಆಹಾರದ ಪ್ರಾಥಮಿಕ ಉತ್ಪಾದನೆ ಮತ್ತು ಹಂಚಿಕೆಗೆ ಸಂಬಂಧಪಟ್ಟಿದ್ದು. ಇಲ್ಲಿ ಬೇಡರು, ಗೌಡರ ಅಥವಾ ಭೂಮಾಲೀಕರ ಗೋವುಗಳನ್ನು ತೆಗೆದುಕೊಂಡು ಹೋಗುವುದು, ಕೃಷಿ ಉತ್ಪಾದನೆಯನ್ನು ಕದಿಯುವುದು ಮೊದಲಾದ ಕಾರಣಕ್ಕೆ ಜಗಳವನ್ನು ಕೈಗೊಳ್ಳುತ್ತಾರೆ. ಇಲ್ಲಿ ಅವರ ಪ್ರಾಥಮಿಕ ಅಗತ್ಯವಾದ ಹಸಿವಿನ ಈಡೇರಿಕೆ ಪ್ರಮುಖ ಉದ್ದೇಶವಾಗಿದೆ. ಇಷ್ಟಕ್ಕೂ ಇದುವರೆಗೆ ಕಳ್ಳತನಕ್ಕೆ ತೊಡಗದೆ ಕೇವಲ ಬೇಟೆಯಿಂದ ಜೀವನವನ್ನು ನಡೆಸುತ್ತಿದ್ದವರು ಈ ವೇಳೆಗೆ ಏಕೆ ಕಳ್ಳತನಕ್ಕೆ ಅದರಲ್ಲೂ ಸ್ಥಳೀಯ ಕೃಷಿಕರ ವಿರುದ್ಧ ತೊಡಗಿಕೊಳ್ಳಲು ಇರುವಂತಹ ಕಾರಣಗಳ ಸ್ವರೂಪಗಳನ್ನು ಗುರುತಿಸುವುದು ಮುಖ್ಯ.

ಈ ವೇಳೆಗಾಗಲೇ ಕೃಷಿಕರು ಹೆಚ್ಚಿನ ಉತ್ಪಾದನೆ ಅವಶ್ಯಕತೆಗಾಗಿ ಮತ್ತು ಸಂಪನ್ಮೂಲಗಳ ಕೇಂದ್ರೀಕರಣ ಉದ್ದಿಶ್ಯವಾಗಿ ಕಾಡನ್ನು ಕಡಿದು ಭೂಮಿಯನ್ನು ಕೃಷಿಗೆ ಅಳವಡಿಸಲು ತೊಡಗಿದರು. ಆದರೆ ಕಾಡಿನ ಉತ್ಪನ್ನಗಳನ್ನೇ ಅವಲಂಬಿಸಿ ಬದುಕುತ್ತಿದ್ದ ಬೇಡರಿಗೆ ವೃತ್ತಿ ಮತ್ತು ಆಹಾರ ಕೊರತೆ ಉಂಟಾಗಿ ಅನಿವಾರ್ಯವಾಗಿ ಕಾಡಿನ ಹೊರಗಿನ ಉತ್ಪಾದನೆಯ ಕಡೆಗೆ ಗಮನಹರಿಸಲೇ ಬೇಕಾಯಿತು. ಈ ತರಹದ ಪರಿಸ್ಥಿತಿಗೆ ಭೂಮಾಲೀಕರ ಕೃಷಿ ವಿಸ್ತರಣೆಯೇ ಪ್ರಮುಖ ಕಾರಣ. ಇವರೇ ಅವರನ್ನು ಕಳ್ಳತನಕ್ಕೆ ಒಂದು ರೀತಿಯಲ್ಲಿ ಪರೋಕ್ಷವಾಗಿ ಒತ್ತಾಯಿಸಿದ್ದಾರೆ. ಕಾಡಿನ ಉತ್ಪಾದನೆ ಇವರ ಜೀವನದ ಅಗತ್ಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕೊರತೆಯನ್ನು ಅನುಭವಿಸಿದಾಗ ಸಹಜವಾಗಿಯೇ ಇವರ ಸಮೀಪ ವರ್ತಿಗಳಾದ ಕೃಷಿಕರ

[illegible]

[illegible]

[illegible]

[illegible]

ಉತ್ಪಾದನೆಯನ್ನು ಅವಲಂಬಿಸಲೇ ಬೇಕಾಯಿತು. ಇಂತಹ ಸಂದರ್ಭದಲ್ಲಿ ಗೋವುಗಳನ್ನು ಕದಿಯುವುದು, ಕೃಷಿ ಉತ್ಪಾದನೆಗಳನ್ನು ಕದಿಯುವುದು ಮೊದಲಾದ ಚಟುವಟಿಕೆಗಳು ಆಗಾಗ ನಡೆಯುತ್ತಲೇ ಇದ್ದವು. ಈ ಬಗೆಯ ಕಳ್ಳತನದಿಂದ ತಮ್ಮ ಹಿತವನ್ನು ಸಂರಕ್ಷಿಸಿಕೊಳ್ಳುವ, ಆ ಮೂಲಕ ಭೂಮಿಯ ಹಕ್ಕನ್ನು ಹೆಚ್ಚು ಗಟ್ಟಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಸ್ಥಳೀಯ ಪ್ರಬಲ ಭೂಮಾಲೀಕರಾದ ಗೌಡರು ಬೇಡರ ವಿರುದ್ಧ ಸಂಘಟಿತರಾಗಿ ಒಂದು ರೀತಿಯ ಜಗಳ ಮಾದರಿಯ ಯುದ್ಧಗಳನ್ನು ವ್ಯವಸ್ಥೆಗೊಳಿಸಿರಬೇಕು. ಈ ಹಿನ್ನೆಲೆಯಲ್ಲಿ ಒಳಗೊಂಡ ಸ್ಮಾರಕ ಶಿಲೆಗಳು ಸೊರಬ ಪರಿಸರದಲ್ಲಿ ವ್ಯಾಪಕವಾಗಿ ಲಭ್ಯವಿರಲು ಕಾರಣವಾಗಿದೆ.

ಉದಾ:1. ಕ್ರಿ.ಶ.1954ರ ಚಿಕ್ಕಚೌಟಿ ಶಾಸನ ತಿಳಿಸುವಂತೆ ಬೇಡ ಕಳ್ಳರು ತಳ್ಳೊದಟ್ಟಿ ಗ್ರಾಮಕ್ಕೆ ಬಂದು ತುರುಗಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಅದೇ ಗ್ರಾಮದ ಗೌಡನಾದ ಕಚ್ಛವಿ ಕೊಲತಿಲಕ ವೀರವೇಶದಿಂದ ಅವರೊಡನೆ ಹೋರಾಡಿ ಮಡಿದ.[115]

2. ಕ್ರಿ.ಶ. 1283ರ ಸಾರೆಕೊಪ್ಪ ಶಾಸನವೊಂದು ತಿಳಿಸುವಂತೆ ಬೀರಯ್ಯ ಮನೆಯ ಪಸಾಯವರ ಮತ್ತು ತರಣರ ಪತ್ತಿ ಗೌಡರ ಬೊಮ್ಮಯ್ಯನು 10 ಕಳ್ಳರ ಜೊತೆ ಕಾದುತ್ತಿರುವಾಗ ಸುರಲೋಕಪ್ರಾಪ್ತನಾದನು.[116]

3. ಕ್ರಿ.ಶ 1453ರ ಹರೂರು ಗ್ರಾಮದ ಶಾಸನವೊಂದರ ಪ್ರಕಾರ ಹರೂರು ಗ್ರಾಮದ ಅರವತ್ತು ಒಕ್ಕಲುಗಳ ಜನರು ಹೊಲದಲ್ಲಿ ಬಿತ್ತುವಾಗ ಕಳ್ಳರು ಬಂದು ದಾಳಿಮಾಡುತ್ತಾರೆ. ಆಗ ಹರೂರು ಗ್ರಾಮದ ಬೊಮ್ಮನಾಯಕನ ಮಗ ಭೈರವ ನಾಯಕನು ಅವರೊಡನೆ ಹೋರಾಡಿ ಸ್ವರ್ಗಕ್ಕೆ ಹೋದನು.[117]

ಸೊರಬ ಪರಿಸರದಲ್ಲಿ ಲಭ್ಯವಿರುವ ಬಹುತೇಕ ಸ್ಮಾರಕ ಶಿಲೆಗಳು ಈ ಎರಡೂ ಮಾದರಿಯ ಯುದ್ಧದ ಸಂಬಂಧ ಮತ್ತು ಸ್ವರೂಪದ ಮೇಲೆ ಸಾಕಷ್ಟು ಒಳನೋಟಗಳನ್ನು ಕೊಡುತ್ತವೆ. ಈ ಪರಿಸರದ ಯುದ್ಧ ಒಟ್ಟು ಚರಿತ್ರೆಯನ್ನು ಕಟ್ಟಿಕೊಡುವ ದಿಸೆಯಲ್ಲಿ ಈ ಸ್ಮಾರಕ ಶಿಲೆಗಳು ಪ್ರಧಾನ ಆಕಾರಗಳಾಗುತ್ತವೆ.

[illegible]

ಅಡಿಟಿಪ್ಪಣಿ

1. ಎ.ಕ.VIII. ಸೊರಬ, 1, ಕ್ರಿ.ಶ. 797, ಮಾವಲಿ
2. ಅದೇ. ಸೊರಬ, 9, ಕ್ರಿ.ಶ. 800, ಮಾವಲಿ
3. ಅದೇ. ಸೊರಬ, 10, ಕ್ರಿ.ಶ. 800, ಮಾವಲಿ
4. ಅದೇ. ಸೊರಬ, 91, ಕ್ರಿ.ಶ. 910, ಕುಂಸಿ
5. ಅದೇ. ಸೊರಬ, 240, ಕ್ರಿ.ಶ. 954, ಚಿಕ್ಕಚೌಟ
6. ಅದೇ. ಸೊರಬ, 202, ಕ್ರಿ.ಶ. 955, ಬೆಟ್ಟದಕೂರಲಿ
7. ಅದೇ. ಸೊರಬ, 326, ಕ್ರಿ.ಶ. 960, ಬಾರಂಗಿ
8. ಎಂ.ಎ.ಆರ್. (1929), ಸೊರಬ, 78, ಕ್ರಿ.ಶ. 964, ಬೆಳಾಗಿ
9. ಎ.ಕ. VIII. ಸೊರಬ, 234, ಕ್ರಿ.ಶ. 999, ಹಿರೇಚೌಟ
10. ಅದೇ. ಸೊರಬ, 471, ಕ್ರಿ.ಶ. 1012, ನೆಲ್ಲೂರು
11. ಅದೇ. ಸೊರಬ, 16, ಕ್ರಿ.ಶ. 1015, ಕೊಡಕಣಿ
12. ಅದೇ. ಸೊರಬ, 46, ಕ್ರಿ.ಶ. 1018, ಹಳೇ ಸೊರಬ
13. ಅದೇ. ಸೊರಬ, 48, ಕ್ರಿ.ಶ. 1018, ಹಳೇ ಸೊರಬ
14. ಅದೇ. ಸೊರಬ, 213, ಕ್ರಿ.ಶ.1029, ಬಸರೂರು
15. ಅದೇ. ಸೊರಬ, 184, ಕ್ರಿ.ಶ.1033, ಕುಪ್ಪೆಗದ್ದೆ
16. ಅದೇ. ಸೊರಬ, 249, ಕ್ರಿ.ಶ.1065, ಕುಬಟೂರು
17. ಅದೇ. ಸೊರಬ, 299, ಕ್ರಿ.ಶ.1074, ತೊರವಂದ
18. ಅದೇ. ದೊರಬ, 314, ಕ್ರಿ.ಶ.1075, ಲಕ್ಕವಳ್ಳಿ
19. ಅದೇ. ಸೊರಬ, 262, ಕ್ರಿ.ಶ.1077, ಕುಬಟೂರು
20. ಅದೇ. ಸೊರಬ, 236, ಕ್ರಿ.ಶ.1084, ಹಿರೇಚೌಟ

[illegible]

[illegible]

21.ಅದೇ ಸೊರಬ, 442, ಕ್ರಿ.ಶ.1100, ತಲಗುಂದ

22.1.ಅದೇ ಸೊರಬ, 564, ಕ್ರಿ.ಶ.1103, ಕಾನಹಳ್ಳಿ

23.2.ಅದೇ ಸೊರಬ, 421, ಕ್ರಿ.ಶ.1104, ಹಿರೇ ಇಡಗೋಡು

22.3.ಅದೇ ಸೊರಬ, 468, ಕ್ರಿ.ಶ.1112, ಕುಂಟಗಳಲೆ

23.ಅದೇ ಸೊರಬ, 327, ಕ್ರಿ.ಶ.1112, ಬಾರಂಗಿ

24.ಅದೇ ಸೊರಬ, 337, ಕ್ರಿ.ಶ.1116, ಕುಣತೆಪ್ಪ

25.ಅದೇ ಸೊರಬ, 170, ಕ್ರಿ.ಶ.1126, ಮೂಡಿ

26.ಎ.ಕ. VIII, ಸೊರಬ, 141, ಕ್ರಿ.ಶ.1127, ಉದ್ರಿ

27.ಅದೇ ಸೊರಬ, 359, ಕ್ರಿ.ಶ.1129, ಬೆನ್ನೂರು

28.ಅದೇ ಸೊರಬ, 80, ಕ್ರಿ.ಶ. 1131, ಚಿತ್ರಟ್ಟೆಹಳ್ಳಿ

29.ಅದೇ ಸೊರಬ, 414, 415, ಕ್ರಿ.ಶ.1139, ಹಿರೇಮಾಗಡಿ

30.ಅದೇ ಸೊರಬ, 335, ಕ್ರಿ.ಶ.1140, ಕುಣತೆಪ್ಪ

31.ಅದೇ ಸೊರಬ, 125, ಕ್ರಿ.ಶ. 1143, ಹಿರೇಆವಲಿ

32.ಅದೇ ಸೊರಬ, 67, ಕ್ರಿ.ಶ.1145, ಯಲಸಿ

33.ಅದೇ ಸೊರಬ, 464, ಕ್ರಿ.ಶ.1151, ಮಂಗಳೂರು

34.ಅದೇ ಸೊರಬ, 510, ಕ್ರಿ.ಶ.1154, ಚಿಟ್ಟೂರು

35.ಅದೇ ಸೊರಬ, 567, ಕ್ರಿ.ಶ.1165, ಬೈರೆಕೊಪ್ಪ

36.ಅದೇ ಸೊರಬ, 325, ಕ್ರಿ.ಶ.1178, ಬಾರಂಗಿ

37.ಅದೇ ಸೊರಬ, 419, ಕ್ರಿ.ಶ.1183, ಹಿರೇ ಇಡಗೋಡು

38.ಅದೇ ಸೊರಬ, 47, ಕ್ರಿ.ಶ.1187, ಹಳೇಸೊರಬ

39.ಅದೇ ಸೊರಬ, 179, ಕ್ರಿ.ಶ.1189, ಕುಪ್ಪೆಗದ್ದೆ

40.ಅದೇ ಸೊರಬ,ಸಸಸ 568, ಕ್ರಿ.ಶ.1162, ಬೈರೆಕುಪ್ಪ

41.ಅದೇ. ಸೊರಬ, 251, ಕ್ರಿ.ಶ.1177, ಕುಬಟೂರು

42.ಅದೇ. ಸೊರಬ, 325, ಕ್ರಿ.ಶ.1178, ಬಾರಂಗಿ

43.ಅದೇ. ಸೊರಬ, 366, ಕ್ರಿ.ಶ.1179, ಬೆನ್ನೂರು

44.1.ಅದೇ.ಸೊರಬ, 171, ಕ್ರಿ.ಶ.1207, ಮೂಡಿ

44.2.ಅದೇ.ಸೊರಬ, 307, ಕ್ರಿ.ಶ.1208, ಹಾಯ

45.1.ಅದೇ.ಸೊರಬ, 188, ಕ್ರಿ.ಶ.1220, ಸಾರೆಕೊಪ್ಪ

45.2.ಅದೇ.ಸೊರಬ, 221, ಕ್ರಿ.ಶ.1231, ಕಾತೂರು

46.ಅದೇ. ಸೊರಬ, 269, ಕ್ರಿ.ಶ.1235, ದೇವಸ್ಥಾನದ ಹಕ್ಕಲು (ಕೋಟಿಪುರ)

47.ಅದೇ.ಸೊರಬ, 285, ಕ್ರಿ.ಶ.1265, ದೇ.ಹಕ್ಕಲು

48.ಅದೇ.ಸೊರಬ, 302, ಕ್ರಿ.ಶ.1270, ಸಿದ್ದಿಹಳ್ಳಿ

49.ಅದೇ.ಸೊರಬ, 297, ಕ್ರಿ.ಶ.1280, ದೇ.ಹಕ್ಕಲು

50.ಅದೇ.ಸೊರಬ, 503, ಕ್ರಿ.ಶ.1289, ನಿಸರಾಣಿ

51.Karnataka Historical Review(Ed-1992, -63)

52.ಎ.ಕ.VIII, ಸೊರಬ, 149, ಕ್ರಿ.ಶ.1129, ಉದ್ರಿ

53.ಎ.ಕ.VIII, ಸೊರಬ, 177, ಕ್ರಿ.ಶ.1163, ಕೊರಕೋಡು

54.ಅದೇ. ಸೊರಬ, 19, ಕ್ರಿ.ಶ.1152, ಕೊಡಕಣಿ

55.ಅದೇ. ಸೊರಬ, 20, ಕ್ರಿ.ಶ.1179, ಕೊಡಕಣಿ

56.ಅದೇ. ಸೊರಬ, 173, ಕ್ರಿ.ಶ.1076, ಮೂಡಿ

57.ಅದೇ. ಸೊರಬ, 369, ಕ್ರಿ.ಶ.1157, ಕಾತವಳ್ಳಿ

58.ಅದೇ. ಸೊರಬ, 255, ಕ್ರಿ.ಶ.1158, ಕಳಸವಳ್ಳಿ

59.ಅದೇ. ಸೊರಬ, 412, ಕ್ರಿ.ಶ.1177, ಹಿರೇಮಾಗಡಿ

60.ಅದೇ. ಸೊರಬ, 269, ಕ್ರಿ.ಶ.1235, ದೇ.ಹಕ್ಕಲು

61.ಅದೇ ಸೊರಬ, 10, ಕ್ರಿ.ಶ.800, ಮಾವಲಿ

62.ಅದೇ ಸೊರಬ, 216, ಕ್ರಿ.ಶ.904, ಕೆರೆಹಳ್ಳಿ

63.ಅದೇ ಸೊರಬ, 240, ಕ್ರಿ.ಶ.954, ಚಿಕ್ಕಚೌಟಿ

64.ಅದೇ ಸೊರಬ, 202, ಕ್ರಿ.ಶ.955, ಬೆಟ್ಟದಕೂರಲಿ

65.ಅದೇ ಸೊರಬ, 326, ಕ್ರಿ.ಶ.960, ಬಾರಂಗಿ

66.ಅದೇ ಸೊರಬ, 531, ಕ್ರಿ.ಶ.967, ಹುನವಳ್ಳಿ

67.ಅದೇ ಸೊರಬ, 530, ಕ್ರಿ.ಶ.979, ಹುನವಳ್ಳಿ

68.ಅದೇ ಸೊರಬ, 479, ಕ್ರಿ.ಶ.991, ಹೆಚ್ಚೆ

69.ಅದೇ ಸೊರಬ, 234, ಕ್ರಿ.ಶ.999, ಹಿರೇಚೌಟಿ

70.ಅದೇ ಸೊರಬ, 234, ಕ್ರಿ.ಶ.999, ಹಿರೇಚೌಟಿ

71.ಅದೇ ಸೊರಬ, 336, ಕ್ರಿ.ಶ.1081, ಕುಣೆತೆಪ್ಪ

72.ಅದೇ ಸೊರಬ, 235, ಕ್ರಿ.ಶ.1084, ಹಿರೇಚೌಟಿ

73.ಅದೇ ಸೊರಬ, 235, ಕ್ರಿ.ಶ.1084, ಹಿರೇಚೌಟಿ

74.ಅದೇ ಸೊರಬ, 327, ಕ್ರಿ.ಶ.1112, ಬಾರಂಗಿ

75.ಅದೇ ಸೊರಬ, 337, ಕ್ರಿ.ಶ.1116, ಕುಣೆತೆಪ್ಪ

76.ಅದೇ ಸೊರಬ, 149, ಕ್ರಿ.ಶ.1129, ಉದ್ರಿ

77.ಅದೇ ಸೊರಬ, 414, ಕ್ರಿ.ಶ.1139, ಹಿರೇಮಾಗಡಿ

78.ಅದೇ ಸೊರಬ, 125, ಕ್ರಿ.ಶ.1143, ಹಿರೇಆವಲಿ

79.ಅದೇ ಸೊರಬ, 525, ಕ್ರಿ.ಶ.1152, ಕವಡಿ

80.ಅದೇ ಸೊರಬ, 510, ಕ್ರಿ.ಶ.1154, ಚಿಟ್ಟೂರು

81.ಅದೇ ಸೊರಬ, 369, ಕ್ರಿ.ಶ.1157, ಕಾತವಳ್ಳಿ

82.ಅದೇ ಸೊರಬ, 568, ಕ್ರಿ.ಶ.1159, ಬೈರೆಕೊಪ್ಪ

83.ಅದೇ. ಸೊರಬ, 177, ಕ್ರಿ.ಶ.1163, ಕೊರಕೋಡು

84.ಅದೇ. ಸೊರಬ, 567, ಕ್ರಿ.ಶ.1165, ಬೈರೆಕೊಪ್ಪ

85.ಅದೇ. ಸೊರಬ, 370, ಕ್ರಿ.ಶ.1171, ಕಾತವಳ್ಳಿ

86.ಅದೇ. ಸೊರಬ, 32, ಕ್ರಿ.ಶ.1176, ಹಿರೇಶಕುನ

87.ಅದೇ. ಸೊರಬ, 325, ಕ್ರಿ.ಶ.1178, ಬಾರಂಗಿ

88.ಅದೇ. ಸೊರಬ, 217, ಕ್ರಿ.ಶ.1243, ಕಾಳಗುಪ್ಪೆ

89.ಅದೇ. ಸೊರಬ, 284, ಕ್ರಿ.ಶ.1265, ದೇ.ಹಕ್ಕಲು

90.ಅದೇ. ಸೊರಬ, 128, ಕ್ರಿ.ಶ.1288, ಹಿರೇಆವಲಿ

91.ಅದೇ. ಸೊರಬ, 503, ಕ್ರಿ.ಶ.1289, ನಿಸರಾಣಿ

92.ಅದೇ. ಸೊರಬ, 502, ಕ್ರಿ.ಶ.1394, ಕೆಳಗಿನ ಕಿರಗುಣಸಿ

93.ಚಿದಾನಂದಮೂರ್ತಿ, ಎಂ.-ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು:356-57

94. ಎ.ಕ.VIII, ಸೊರಬ, 9, ಕ್ರಿ.ಶ.800, ಮಾವಲಿ

95. ಅದೇ. ಸೊರಬ, 240, ಕ್ರಿ.ಶ. 954, ಚಿಕ್ಕಚೌಟಿ

96. ಅದೇ. ಸೊರಬ, 202, ಕ್ರಿ.ಶ. 955, ಬೆಟ್ಟದ ಕೂರಲಿ

97. ಅದೇ. ಸೊರಬ, 532, ಕ್ರಿ.ಶ. 964, ಹುನವಳ್ಳಿ

98. ಅದೇ. ಸೊರಬ, 531, ಕ್ರಿ.ಶ. 964, ಹುನವಳ್ಳಿ

99. ಅದೇ. ಸೊರಬ, 455, ಕ್ರಿ.ಶ. 972, ಬೆನ್ನೂರು

100.ಅದೇ. ಸೊರಬ, 457, ಕ್ರಿ.ಶ. 973, ಬೆನ್ನೂರು

101.ಅದೇ. ಸೊರಬ, 48, ಕ್ರಿ.ಶ.118, ಹಳೇಸೊರಬ

102.ಅದೇ. ಸೊರಬ, 336, ಕ್ರಿ.ಶ.1081, ಕುಣಿತೆಪ್ಪ

103.ಅದೇ. ಸೊರಬ, 337, ಕ್ರಿ.ಶ.1116, ಕುಣಿತೆಪ್ಪ

104.ಅದೇ. ಸೊರಬ, 3, ಕ್ರಿ.ಶ.1130, ಮಾವಲಿ

105.ಅದೇ. ಸೊರಬ, 415, ಕ್ರಿ.ಶ.1139, ಹಿರೇಮಾಗಡಿ

106.ಅದೇ. ಸೊರಬ, 369, ಕ್ರಿ.ಶ.1157, ಕಾತವಳ್ಳಿ

107.ಅದೇ. ಸೊರಬ, 6, ಕ್ರಿ.ಶ.1165, ಮಾವಲಿ

108.ಅದೇ. ಸೊರಬ, 30, ಕ್ರಿ.ಶ.1193, ಸೊರಬ

109.ಅದೇ. ಸೊರಬ, 188, ಕ್ರಿ.ಶ.1220, ಸಾರೆಕೊಪ್ಪ

110.ಅದೇ. ಸೊರಬ, 221, ಕ್ರಿ.ಶ.1231, ಕಾತೂರು

111.ಅದೇ. ಸೊರಬ, 31, ಕ್ರಿ.ಶ.1284, ಸೊರಬ

112.ಅದೇ. ಸೊರಬ, 503, ಕ್ರಿ.ಶ.1289, ನಿಸರಾಣಿ

113.ಅದೇ. ಸೊರಬ, 337, ಕ್ರಿ.ಶ.1116, ಕುಣಿತೆಪ್ಪ

114.ಅದೇ. ಸೊರಬ, 177, ಕ್ರಿ.ಶ.1163, ಕೊರಕೋಡು

115.ಅದೇ. ಸೊರಬ, 240, ಕ್ರಿ.ಶ.954, ಚಿಕ್ಕಚೌಟಿ

116.ಅದೇ. ಸೊರಬ, 189, ಕ್ರಿ.ಶ.1283, ಸಾರೆಕೊಪ್ಪ

117.ಅದೇ. ಸೊರಬ, 169, ಕ್ರಿ.ಶ.1453; ಹರೂರು

ಅಧ್ಯಾಯ:4

ಆರ್ಥಿಕ ವಿವರಗಳು

4.1. ಐತಿಹಾಸಿಕ ಭೂಗೋಳ ಹಾಗೂ ಭೂಲಕ್ಷಣ

4.2. ಸ್ಥಳನಾಮಗಳು

4.3. ಆರ್ಥಿಕ ಭೂಗೋಳ

4.1. ಐತಿಹಾಸಿಕ ಭೂಗೋಳ ಹಾಗೂ ಭೂ-ಲಕ್ಷಣಗಳು

ಸೊರಬವು ಸಹ್ಯಾದ್ರಿ ಪರ್ವತ ಶ್ರೇಣಿಯ ಅಂಚಿನಲ್ಲಿ ಬರುವ ತಾಲೂಕು. ಇದು ಶಿವಮೊಗ್ಗ ಜಿಲ್ಲೆಯ ಉತ್ತರ ಭಾಗದಲ್ಲಿ ದಟ್ಟವಾದ ಅರಣ್ಯದಿಂದ ಕೂಡಿದ ಮಲೆನಾಡಾಗಿದೆ. ಈ ಪ್ರದೇಶವು 1148 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಇದು ಸಹ್ಯಾದ್ರಿಯ ಕೊನೆಯ ಅಂಚಾಗಿರುವುದರಿಂದ ಸಣ್ಣ ಸಣ್ಣ ಬೆಟ್ಟ- ಗುಡ್ಡಗಳು ಅಡ್ಡಗಲಕ್ಕೂ ಹಬ್ಬಿವೆ. ಅಲ್ಲಲ್ಲಿ ವಿಶಾಲವಾದ ಗದ್ದೆ ಬಯಲುಗಳು ಕಂಡುಬರುತ್ತವೆ. ಈ ಪ್ರದೇಶದ ಬಹುಪಾಲು ಭಾಗವು ದಕ್ಷಿಣದಿಂದ ಉತ್ತರದ ಕಡೆಗೆ ಸ್ವಲ್ಪ ಇಳಿಜಾರಾಗಿದೆ. ಇನ್ನೂ ಕೆಲವು ಕಡೆಗೆ ಪೂರ್ವದಿಂದ ಪಶ್ಚಿಮಕ್ಕೆ ಹಗೂ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ತಾಲೂಕಿನ ಪಶ್ಚಿಮದ ಕೊನೆಯ ಅಂಚಿನಲ್ಲಿ ಹರಿಯುವ ವರದಾನದಿ ಹಾಗೂ ಮದ್ಯಭಾಗದಲ್ಲಿ ಹರಿಯುವ ಚಿಕ್ಕದಾದ ದಂಡಾವತಿ ನದಿಗಳು ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತವೆ. ಕೆಲವು ಚಿಕ್ಕ-ಪುಟ್ಟ ಹಳ್ಳಗಳು ಪೂರ್ವದಿಂದ ಪಶ್ಚಿಮಕ್ಕೆ, ಮತ್ತೆ ಕೆಲವು ಪಶ್ಚಿಮದಿಂದ ಪೂರ್ವಕ್ಕೆ ಹರಿದು ಈ ನದಿಗಳನ್ನು ಸೇರುತ್ತವೆ. ವರದಾನದಿಯು ಮುಂದುವರಿದು ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ತಾಲೂಕಿನ ಅಂಚಿನಲ್ಲಿ ಸಾಗುತ್ತದೆ. ನಂತರ ಪುನಃ ತಾಲೂಕಿನ ಉತ್ತರದ ಭಾಗವನ್ನು ಪ್ರವೇಶಿಸಿ ಪಶ್ಚಿಮದಿಂದ ಪೂರ್ವಕ್ಕೆ ಹರಿದು ಧಾರವಾಡ ಜಿಲ್ಲೆಯತ್ತ ಸಾಗುತ್ತದೆ.

ಸೊರಬವು ಉಷ್ಣವಲಯದ ಪ್ರದೇಶವಾಗಿದೆ. ಎಲ್ಲಾ ಋತುಮಾನಗಳು ಕಾಲಾನುಕ್ರಮಕ್ಕೆ ಅನುಗುಣವಾಗಿ ನಡೆಯುವಂತಹ ವಾಯುಗುಣವನ್ನು ಹೊಂದಿದೆ. ಇಲ್ಲಿ ನೈರುತ್ಯ ಮಾನ್ ಸೂನ್ ಮಳೆಯು ಅಧಿಕವಾಗಿದ್ದು, ಅದರ ಪ್ರಮಾಣ ವರ್ಷಕ್ಕೆ 1673.1 ಮಿ.ಮೀ. ಈಶಾನ್ಯ ಮಾರುತಮಳೆಯೂ ಸಹ ಇಲ್ಲಿ ತೃಪ್ತಿಕರವಾಗಿ ಬೀಳುತ್ತದೆ. ತಾಲೂಕಿನ ಪೂರ್ವಕ್ಕೆ ಬರುವ ಎರಡು ಹೋಬಳಿಗಳು ಅರಮಲೆನಾಡಿನಿಂದ ಕೂಡಿದ್ದರೆ, ಉಳಿದ ನಾಲ್ಕು ಹೋಬಳಿಗಳು ಅರಣ್ಯದಿಂದ ಆವೃತವಾಗಿವೆ. ಅಂದರೆ ಸರಿ ಸುಮಾರು 1/3 ಭಾಗದಷ್ಟು ಅರಣ್ಯದಿಂದಲೇ ಕೂಡಿದ ಪ್ರದೇಶ (65 ಸಾವಿರ ಎಕರೆ ಅರಣ್ಯ, 49ಸಾವಿರ ಎಕರೆ ಗೋಮಾಳ). ಒಟ್ಟಾರೆ ಸಹ್ಯಾದ್ರಿ ಪರ್ವತ ಪ್ರದೇಶವೆಲ್ಲ ಹೆಚ್ಚು ಮಳೆ ಮತ್ತು ಅಧಿಕ ಉಷ್ಣಾಂಶ ಹಾಗೂ ಹೆಚ್ಚು ಕಾಲ ಒಣ ಹವೆಯಿಂದ ಕೂಡಿದೆ. ಈ ಎಲ್ಲಾ ಲಕ್ಷಣಗಳೂ ಸಹ ಸೊರಬ ಪ್ರದೇಶಕ್ಕೂ ಅನ್ವಯಿಸುತ್ತವೆ.

[illegible]

[illegible]

[illegible]

ಸಹ್ಯಾದ್ರಿ ಬೆಟ್ಟಗುಡ್ಡಗಳಲ್ಲಿ ಕಂಡುಬರುವಂತೆ ಇಲ್ಲಿಯೂ ಮುರಕಲ್ಲು (ಲ್ಯಾಟ್ ರೈಟ್) ಮಣ್ಣು ಕಂಡುಬಂದಿದ್ದು, ಅದು ಗಡಸುತನದಿಂದ ಕೂಡಿದೆ. ಇಲ್ಲಿ ಹೆಚ್ಚು ಮಳೆ ಮತ್ತು ಅಧಿಕ ಉಷ್ಣಾಂಶ ಹಾಗೂ ಹೆಚ್ಚು ಕಾಲ ಒಣಹವೆ ಇರುವುದೇ ಇದಕ್ಕೆ ಕಾರಣ. ಆದ್ದರಿಂದ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೂ ಬೇಸಿಗೆ ಕಾಲದಲ್ಲಿ ನೀರು ಸಂಪೂರ್ಣವಾಗಿ ಇಂಗಿ ಹೋಗುವಂತಹ ಭೂಲಕ್ಷಣವನ್ನು ಹೊಂದಿದೆ. ಆದರೆ ಅಲ್ಲಲ್ಲಿ ಕಾಣಸಿಗುವ ಬಯಲು ಪ್ರದೇಶದ ಮಣ್ಣನು ಪರೀಕ್ಷಿಸಿದರೆ ಬಹುಪಾಲು ಮಣ್ಣು ಮರಳು ಮಿಶ್ರಿತ ಕಂದುಬಣ್ಣದಿಂದ ಕೂಡಿದ್ದು, ಹೆಚ್ಚು ಫಲವತ್ತಾಗಿದೆ. ಈ ರೀತಿಯ ಮಣ್ಣು ತಾಲೂಕಿನಾದ್ಯಂತ ಹೆಚ್ಚಿನ ಪ್ರಮಾಣದಲ್ಲಿದ್ದು, ಇದು ಬತ್ತ ಮತ್ತು ಕಬ್ಬನ್ನು ಬೆಳೆಯಲು ಯೋಗ್ಯವಾದುದು.

ಇಂತಹ ಭೂಲಕ್ಷಣವನ್ನು ಹೊಂದಿದ ಈ ಪ್ರದೇಶವು ತೇವಾಂಶದಿಂದ ಕೂಡಿದ ಭೂಮಿಯಷ್ಟೇ ಒಣ ಭೂಮಿಯೂ ಇದೆ (65 ಸಾವಿರ ಎಕರೆ ತರಿ ಜಮೀನು, 65 ಸಾವಿರ ಎಕರೆ ಖುಷ್ಕಿ ಜಮೀನು. ಈಗಿನ ಅಂಕಿ-ಅಂಶ). ಆದ್ದರಿಂದ ಪ್ರಾಚೀನ ಕಾಲದ ಶಾಸನಗಳಲ್ಲಿ ಒಣ ಭೂಮಿಯನ್ನು ಮಕ್ಕಿಬಯಲು, ಬೆದ್ದ, ಹಕ್ಕಲು ಎಂದು ಉಲ್ಲೇಖಿಸುತ್ತವೆ. ಭೂ ಸ್ಥಿತಿ ವಾಚಕ ಪದಗಳಾದ, ಮತ್ತು ತೇವಾಂಶದ ತರಿ ಭೂಮಿಯನ್ನು ಸೂಚಿಸುವ ಪದವಾಗಿ 'ಗದ್ದೆ' ಎಂದು ಶಾಸನಗಳು ಕರೆದಿವೆ. ಅಲ್ಲದೆ ನೈಸರ್ಗಿಕವಾಗಿ ಅಂತರ್ ಜಲದಿಂದ ಕೂಡಿದ ಭೂಮಿಯನ್ನು ಸೂಚಿಸುವ ಕಸರುಗುಪ್ಪೆ, ಕೊಡಕಣಿ, ಬೆಳ್ಮಣಿ ಎಂಬ ಸ್ಥಳನಾಮಗಳ ಪ್ರದೇಶಗಳನ್ನು ನೋಡಿದರೆ ಇಂದಿಗೂ ನೈಸರ್ಗಿಕವಾದ ಜಲಸಂಪತ್ತಿನಿಂದ ಕೂಡಿದ ಈ ಭೂಮಿಯಲ್ಲಿ ಕೃಷಿ ಮಾಡುತ್ತಿರುವುದನ್ನು ಕಾಣಬಹುದು.

ಹೀಗೆ ಉಷ್ಣವಲಯದ ಪ್ರದೇಶದಲ್ಲಿ ಅಧಿಕ ತೇವಾಂಶ, ಅಧಿಕ ಉಷ್ಣಾಂಶ ಮತ್ತು ತೇವಾಂಶವನ್ನು ಉಳಿಸಿಕೊಳ್ಳಲು ಸಮರ್ಥವಾದ ಮಣ್ಣು ಈ ಪ್ರದೇಶದಲ್ಲಿ ಇದ್ದುದರಿಂದ ಪ್ರಾಚೀನ ಕಾಲದಿಂದಲೂ ಬತ್ತವನ್ನು ನೀರಾವರಿ ಸೌಲಭ್ಯದಿಂದ ಹೆಚ್ಚು ಬೆಳೆಯಲು ಸಾಧ್ಯವಾಗಿದೆ. ಸಾಮಾನ್ಯ ತಳಿಯ ಬತ್ತವಲ್ಲದೆ, ಉತ್ತಮ ತಳಿಯ ಬತ್ತವನ್ನು ಬೆಳೆದ ವಿಷಯವನ್ನು ಶಾಸನಗಳು ತಿಳಿಸುತ್ತವೆ. ಜೊತೆಗೆ ಕಬ್ಬು, ಅಡಿಕೆ, ಮೆಣಸು, ಹೂವು, ವಿಳ್ಯದೆಲೆ ಮುಂತಾದ ವಾಣಿಜ್ಯ ಬೆಳೆಗಳು ಮತ್ತು ಹಲಸು, ಮಾವು, ದಾಳಿಂಬೆಯಂತಹ ಪ್ರಮುಖ ಹಣ್ಣುಗಳನ್ನು ಬೆಳೆಯುತ್ತಿದ್ದುದು ತಿಳಿದುಬರುವುದು.

ಈ ಪ್ರದೇಶದಿಂದ ಪೂರ್ವಭಾಗಗಳಿಗೆ ಹೋದಂತೆ ಪರಿಣಾಮಕಾರಿಯಾದ ಭೌಗೋಳಿಕ ಬದಲಾವಣೆಯನ್ನು ಕಾಣುತ್ತೇವೆ. ತಾಲ್ಲೂಕಿನ ಗಡಿ ಕೊನೆಗೊಳ್ಳುತ್ತಿದ್ದಂತೆ, ಧಾರವಾಡ ಜಿಲ್ಲೆಯ ಭೂ ಪ್ರದೇಶವು ಪೂರ್ಣ ಬಯಲು ಸೀಮೆಯಿಂದ ಕೂಡಿದ್ದು, ವಿಶಾಲವಾದ ಮತ್ತು ಸಮತಟ್ಟಾದ ಕಪ್ಪು ಎರೆ ಮಣ್ಣಿನ ಭೂಮಿ ಕಾಣಸಿಗುತ್ತದೆ. ಇಂತಹ ಭೂ ಪ್ರದೇಶವು ನಮಗೆ ಎದುರಾಗುವುದರಿಂದ ನಿಗೂಢವಾದ ಮತ್ತು ದುರ್ಗಮವಾದ ಭೂ ಪ್ರದೇಶದಿಂದ ತತ್‌ಕ್ಷಣ ಸಂಪೂರ್ಣ ಬಯಲು ನಾಡಿಗೆ ಬಂದತಾಗುವುದು. ಇದರಿಂದ ಬಯಲು ಮತ್ತು ನಾಡಿನ ಸಂಸ್ಕೃತಿ ಮೈಗೂಡಿಸಿಕೊಂಡ ಪ್ರದೇಶಕ್ಕೆ ಪ್ರವೇಶಿಸಿದ ಹಾಗೆ ಭಾಸವಾಗುತ್ತದೆ.

ಈ ರೀತಿಯ ಭೌಗೋಳಿಕ ಬದಲಾವಣೆಯು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳಲ್ಲಿಯೂ ಸಹ ಗುರುತಿಸಲಾರದಷ್ಟು ವೈರುಧ್ಯಗಳನ್ನು ಹಾಗೂ ಬದಲಾವಣೆಯನ್ನು ತಂದೊಡ್ಡಿರುವುದು ಗಮನಾರ್ಹ. ಸೊರಬ ಪರಿಸರದಲ್ಲಿ ನೀರಾವರಿ ಕೃಷಿ ಮತ್ತು ತೋಟಗಾರಿಕೆಯ ಬೆಳೆಗಳನ್ನು ಬೆಳೆದರೆ, ಬಯಲು ಸೀಮೆಯಲ್ಲಿ ಕೇವಲ ಒಣಭೂಮಿಯಲ್ಲಿ ಬೆಳೆಯಬಹುದಾದ ಧಾನ್ಯಗಳನ್ನು ಬೆಳೆಯುತ್ತಾರೆ. ರಾಜಕೀಯವಾಗಿ ಈ ಪ್ರದೇಶ ಈಗೀಗ ತನ್ನ ಪ್ರವೇಶವನ್ನು ಮಾಡಲು ಪ್ರಯತ್ನಿಸುತ್ತಿದ್ದರೆ. ಬಯಲು ನಾಡಿನಲ್ಲಿ ಈಗಾಗಲೇ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಪಡೆದುಕೊಂಡು ನಾಡಿನ ಎಲ್ಲಾ ಸಂಸ್ಕೃತಿಕ ಆಯಾಮಗಳನ್ನು ಮೈಗೂಡಿಸಿಕೊಂಡಿದೆ. ಸಾಮಾಜಿಕವಾಗಿ ಆಚರಣೆಗಳಲ್ಲಿ ರೂಢಿ, ಸಂಪ್ರದಾಯಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಮಲೆನಾಡಿನಲ್ಲಿರುವ 'ದೀವರು' (ಈಡಿಗ ಜಾತಿಯ ಒಂದು ಉಪಪಂಗಡ) ಎಂಬ ಜಾತಿಯ ಜನರು ಹೆಚ್ಚಿನ ಪ್ರಮಾಣದಲ್ಲಿದ್ದರೆ, ಬಯಲು ಸೀಮೆಗೆ ಪ್ರವೇಶಿಸುತ್ತಿದ್ದಂತೆ ಈ ಜಾತಿಯ ಜನರು ಕಾಣಸಿಗುವುದಿಲ್ಲ. ಹಾಗೆಯೆ ಜನರ ಭಾಷೆಯಲ್ಲಿಯು ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಇನ್ನು ಪಶ್ಚಿಮದ ಕೊನೆಯ ಗಡಿ ದಾಟುತ್ತಿದ್ದಂತೆ ದುರ್ಗಮವಾದ ಕಾಡು ಮತ್ತು ಸಹ್ಯಾದ್ರಿ ಪರ್ವತ ಶ್ರೇಣಿಯ ಎತ್ತರವಾದ ಬೆಟ್ಟ-ಗುಡ್ಡಗಳ ಸಾಲುಗಳು ಆರಂಭವಾಗುತ್ತವೆ. ಇಂಥ ಪ್ರದೇಶದಲ್ಲಿ ಕಣಿವೆಗಳ ಮಧ್ಯದ ಸಣ್ಣ ಪ್ರದೇಶದಲ್ಲಿ ಮಾತ್ರ ಕೃಷಿ ಆರ್ಥಿಕ ಚಟುವಟಿಕೆ ಮಾಡುವುದು ಕಂಡುಬರುತ್ತದೆ. ಜೊತೆಗೆ ತೋಟಗಾರಿಕೆಯನ್ನು ಹೆಚ್ಚು ಕಾಣಲು ಸಾಧ್ಯ.

[illegible]

ಹೀಗೆ ಸೊರಬ ತಾಲೂಕು ಸಂಪೂರ್ಣವಾಗಿ ಬಯಲು ಭೂಮಿಯೂ ಅಲ್ಲದ, ಇತ್ತ ಹೆಚ್ಚು ಎತ್ತರವಾದ ಬೆಟ್ಟಗುಡ್ಡಗಳಿಂದ ಮತ್ತು ದುರ್ಗಮವಾದ ಅರಣ್ಯದಿಂದ ಕೂಡಿರದ ಒಂದು ಮಧ್ಯಂತರ ಭೌಗೋಳಿಕ ಲಕ್ಷಣವನ್ನು ಹೊಂದಿದ ವಿಶಿಷ್ಟ ಪ್ರದೇಶವಾಗಿದೆ. ಈ ಭೌಗೋಳಿಕ ವಿಶಿಷ್ಟತೆಯು ಅಲ್ಲಿ ವಾಸ ಮಾಡುವ ಜನರ ಸಾಂಸ್ಕೃತಿಕ, ರಾಜಕಾರಣ ಮತ್ತಿತರ ವಿಷಯಗಳ ಮೇಲೆ ಮಹತ್ವದ ಪರಿಣಾಮ ಬೀರಿರುವ ಸಾಧ್ಯತೆ ಇದೆ. ಏಕೆಂದರೆ ಸೊರಬದ ಒಂದು ಪಕ್ಕದಲ್ಲಿ ಬಯಲು ಸೀಮೆ ಇದೆ ಇನ್ನೊಂದು ಪಕ್ಕದಲ್ಲಿ ವಿಶೇಷವಾದ ಕಾಡಿದೆ. ನಮಗೆಲ್ಲ ತಿಳಿದಿರುವಂತೆ ಚಾರಿತ್ರಿಕವಾಗಿ ಬಯಲು ಸೀಮೆಯ ಭೌಗೋಳಿಕ ವಾತಾವರಣವು ಕೃಷಿಯೋಗ್ಯ ಕೆಲಸಗಳಿಗೆ ಅನುಕೂಲಕರವಾಗಿದ್ದು ಜನರು ಅಂತಹ ಪ್ರದೇಶದಲ್ಲಿ ಬಾಳಿಬದುಕಿದ್ದಾರೆ. ಮತ್ತು ಬಯಲು ಸೀಮೆಯಲ್ಲಿ ವಿಶಿಷ್ಟವಾದ ಸಂಸ್ಕೃತಿಯೊಂದನ್ನು ಕಟ್ಟಿಕೊಂಡಿದ್ದಾರೆ. ಇದಕ್ಕೆ ವಿರುದ್ಧವಾಗಿ ಕಾಡನ್ನು ಮತ್ತು ಕಾಡಿನ ಉತ್ಪತ್ತಿಗಳನ್ನು ಆಶ್ರಯಿಸಿಕೊಂಡಿದ್ದ ಜನವರ್ಗವು ಬಯಲು ಸೀಮೆಯ ಸಂಸ್ಕೃತಿಗೆ ವಿರುದ್ಧವಾದ ರೀತಿಯಲ್ಲಿ ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಂಡಂತೆ ಕಾಣುತ್ತದೆ. ಮುಖ್ಯವಾಗಿ ಕೃಷಿಗೆ ವಿರುದ್ಧವಾದ ಬೇಟೆ ಸಂಸ್ಕೃತಿಯನ್ನು ಇವರು ರೂಢಿಸಿಕೊಂಡಿರುವುದನ್ನು ನೆನಪಿಸಿಕೊಳ್ಳಬಹುದು. ಹಾಗೆಯೇ ಊರಿನ ಅಂಚಿನಲ್ಲಿ ಅಥವಾ ಕಾಡಿನ ಮಗ್ಗುಲಲ್ಲಿ ಬದುಕುವ ಅಂಚುವಾಸಿಗಳು ಕಾಡೊಳಗೆ ನುಗ್ಗಿ ಕಾಡುತ್ಪತ್ತಿಗಳನ್ನು ಸಂಗ್ರಹಿಸಿ ಅವುಗಳನ್ನು ಊರಿನ ಜನರಿಗೆ ಮಾರುತ್ತಾ ಎರಡೂ ಪ್ರದೇಶಗಳನ್ನು ಅತಿಕ್ರಮಿಸಿಕೊಂಡಿರುತ್ತಾರೆ. ಇಂತಹ ಜನವರ್ಗ ಕಾಡು ಮತ್ತು ನಾಡಿನ ನಡುವೆ ಇರುವುದರಿಂದ ಧಾರ್ಮಿಕವಾಗಿಯೂ ಬಹಳ ಮಹತ್ವದ ಸ್ಥಾನವನ್ನು ನಿರ್ವಹಿಸುತ್ತಾರೆ. ಹೇಗೆಂದರೆ ಒಂದರ್ಥದಲ್ಲಿ ಕಾಡು ನಿಗೂಢವಾದದ್ದು ಅತಿಕ್ರಮಿಸಲು ಕಷ್ಟಸಾಧ್ಯವಾದದ್ದು, ಗಹನವಾದದ್ದು. ಇಂತಹ ಪ್ರದೇಶದ ಒಳಗಡೆ ಹೋಗಬಲ್ಲ ವ್ಯಕ್ತಿಗಳಿಗೆ ಅಷ್ಟೇ ನಿಗೂಢವಾದ ಧಾರ್ಮಿಕ ಲೋಕಕ್ಕೆ ಪ್ರವೇಶ ಮಾಡುವ ಅರ್ಹತೆ ಸಿದ್ಧಿಸುತ್ತದೆ. ಸೊರಬ ಪ್ರದೇಶದಲ್ಲಿ ಇಂತಹ ಧಾರ್ಮಿಕ ಪಾತ್ರವನ್ನು ನಿರ್ವಹಿಸುವ ಜನರು ಹೇರಳವಾಗಿದ್ದಾರೆ ಎಂಬ ಅಂಶಕ್ಕೂ ಅಲ್ಲಿನ ಭೌಗೋಳಿಕ ವಾತಾವರಣಕ್ಕೂ ನಿಕಟವಾದ ಸಂಬಂಧವಿದೆ.

ಆರ್ಥಿಕ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸೊರಬ ತಾಲೂಕು ವಿಶಿಷ್ಟವಾಗಿರುವುದು ಕಂಡುಬರುತ್ತದೆ. ಈಗಾಗಲೆ ಸ್ಪಷ್ಟಪಡಿಸಿದಂತೆ ಕಾಡು ಮತ್ತು ನಾಡಿನ ನಡುವೆ ಇರುವಂತಹ ಚಿಕ್ಕ-ಪುಟ್ಟ ಗುಡ್ಡಗಳಿಂದ ಆವೃತವಾದ ಹುಲ್ಲುಗಾವಲುಗಳು ಚರಿತ್ರೆಯುದ್ದಕ್ಕೂ ಬಹಳ ಪ್ರಧಾನ ಪಾತ್ರನಿರ್ವಹಿಸಿವೆ.

[illegible]

[illegible]

ಇಂತಹ ಪ್ರದೇಶಗಳು ಪಶುಪಾಲಕರ ಪ್ರಿಯವಾದ ಜಾಗಗಳಾಗಿವೆ. ಮತ್ತು ಆರಂಭಿಕ ಕೃಷಿಯು ಇಂತಹ ಜಾಗದಲ್ಲಿಯೇ ಕಾಣಿಸಿಕೊಂಡಿರುವ ಸಾಧ್ಯತೆ ಇದೆ. ಇಂದಿಗೂ ನಾವು ಹಲವು ಕಡೆ ಗುರುತಿಸುವ ಮಿಗತ ಉತ್ಪಾದನೆ ಇಲ್ಲದ "ಕುಮೆರಿ ಬೆಳೆ" ಕೂಡ ಇಂತಹ ಸ್ಥಳದಲ್ಲಿಯೇ ಕಾಣಿಸಿಕೊಂಡಿದೆ. ಕುಮೆರಿ ಬೆಳೆಗೆ ತೊಂದರೆ ನೀಡುವ ಪ್ರಾಣಿಗಳನ್ನು ಬೇಟೆಯಾಡುವ ಕ್ರಮವು ಬೇಟೆ ಸಂಪ್ರದಾಯವನ್ನು ಹೊಸದುಗೊಳಿಸಿದಂತೆ ಬಗೆಬಗೆಯ ಆಚರಣೆಗಳನ್ನು ಹುಟ್ಟುಹಾಕಿದೆ. ಇಂತಹ ಆಚರಣೆಗಳು ಸಾಂಸ್ಕೃತಿಕವಾಗಿ ಹೆಚ್ಚು ಶಕ್ತಿಶಾಲಿಯಾಗಿರುವ ಮತ್ತು ಪರಿಣಾಮಕಾರಿಯಾಗಿರುವ ಕಲಾರೂಪಗಳನ್ನು ಅಸ್ತಿತ್ವಕ್ಕೆ ತಂದಿವೆ. ಹೀಗೆ ಸೊರಬ ಪ್ರದೇಶವು ಭೌಗೋಳಿಕವಾಗಿ ಅತ್ಯಂತ ವಿಶಿಷ್ಟವಾದ ಆಯಕಟ್ಟಿನಲ್ಲಿದ್ದು ಸೊರಬ ಪರಿಸರದ ಸಾಂಸ್ಕೃತಿಕ ವಿಶಿಷ್ಟತೆಗೆ ಕಾರಣವಾಗಿದೆ.

4.2 ಸ್ಥಳನಾಮಗಳು

ಪ್ರಾಚೀನ ಸ್ಥಳನಾಮಗಳಲ್ಲಿ ಬಹುಪಾಲು ಅರ್ಥಗರ್ಭಿತವಾದವುಗಳು. ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರಗಿಡ, ಕೋಟೆ, ದೇವಾಲಯ ಮುಂತಾದವು ಆ ಪ್ರದೇಶದ ಚರಿತ್ರೆಯನ್ನು ಹೇಳಲು ಹೇಗೆ ಸಹಾಯವಾಗುತ್ತವೆಯೋ ಹಾಗೆಯೇ ಅಲ್ಲಿನ ಸ್ಥಳನಾಮಗಳು ಚರಿತ್ರೆಗೆ ಪೂರಕವಾಗುವ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಸ್ಥಳನಾಮಗಳ ಅಧ್ಯಯನದಲ್ಲಿ ಹೆಸರುಗಳ ಐತಿಹಾಸಿಕ ವಿಕಾಸಕ್ಕೂ ಭೌಗೋಳಿಕ ಪರಿಸ್ಥಿತಿ ಸನ್ನಿವೇಶಗಳ ವಿವರಣೆಗೂ ಆದ್ಯಗಮನ ನೀಡಬೇಕಾಗುತ್ತದೆ. ಈ ಸ್ಥಳನಾಮಗಳು ಬಹುಶಃ ಕೃಷಿ ನಾಗರಿಕತೆ ತಲೆಯೆತ್ತುವ ಸಮಯದಲ್ಲಿ ಅಸ್ತಿತ್ವಕ್ಕೆ ಬಂದಿರಬೇಕು. ಜನಸಂಖ್ಯೆ ಬೆಳೆಯುತ್ತಾ ಹೋದಂತೆ ಜನರು ಆರಂಭದಲ್ಲಿ ನೈಸರ್ಗಿಕವಾಗಿ ತಮ್ಮ ನಿತ್ಯ ಜೀವನದ ಅವಶ್ಯಕತೆಗಳನ್ನು ಪೂರೈಸುವಂತಹ ಸ್ಥಳಗಳಲ್ಲಿ ವಾಸಿಸತೊಡಗಿದರು. ಹಾಗೆ ವಾಸಿಸಿದ ಪರಿಸರದಲ್ಲಿ ಪ್ರಾಕೃತಿಕವಾಗಿ ಮುಖ್ಯವೆನಿಸುವ ವಸ್ತುವನ್ನು ಸೇರಿಸಿ ಒಂದು ಸ್ಥಳವನ್ನು ಗುರುತಿಸಿದರು. ಇದು ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಇರುವ ವ್ಯತ್ಯಾಸವನ್ನು ಗುರುತಿಸುವುದಕ್ಕಾಗಿರಬಹುದು. ಕಾಲಾನಂತರದಲ್ಲಿ ಈ ಹೆಸರುಗಳೇ ಮುಂದುವರೆದು ಕೊಂಡು ಬಂದಿದ್ದುದರಿಂದ ಸ್ಥಳನಾಮಗಳು ಒಂದು ಜೀವಂತ ದಾಖಲೆಗಳಾಗಿವೆ.

ಎಲ್ಲಾ ಕಡೆಯೂ ಭೂ ಸ್ಥಿತಿಯನ್ನು ಅನುಸರಿಸಿ ಸ್ಥಳನಾಮಗಳು ಹುಟ್ಟಿಕೊಂಡಂತೆ ಸೊರಬ ಪರಿಸರದಲ್ಲಿಯೂ ಅಲ್ಲಿಯ ಭೌಗೋಳಿಕ ಲಕ್ಷಣದ ಹಿನ್ನೆಲೆಯಲ್ಲಿ ಇವುಗಳು ಹುಟ್ಟಿಕೊಂಡಿರುವುದನ್ನು

[illegible]

[illegible]

[illegible]

[illegible]

ಗಮನಿಸಬಹುದು. ಮಧ್ಯಕಾಲದ ಶಾಸನಗಳಲ್ಲಿ ಕಂಡುಬರುವ ಸ್ಥಳನಾಮಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇಲ್ಲಿ ಕೆಲವೊಂದು ಸ್ಥಳನಾಮಗಳನ್ನು ಚರ್ಚೆಗೆ ಬಳಸಿಕೊಂಡು ಉಳಿದ ಎಲ್ಲಾ ಸ್ಥಳನಾಮಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಜಲವಾಚಕ ಸ್ಥಳನಾಮಗಳು ಸಾಮಾನ್ಯವಾಗಿ ಅಲ್, ಕಣ್, ಮತ್ತು ಬೆಳ್ ಗಳಿಂದ ಕೂಡಿದ್ದು ಇವೆಲ್ಲ ನೀರಿನ ಆಧಿಕ್ಯವನ್ನೂ ಜಲಾನಯನ ಪ್ರದೇಶವನ್ನೂ ಸೂಚಿಸುವ ಅಪ್ಪಟ ದೇಶಿಯ ಪದಗಳು. ಇವು ಅಷ್ಟೆ ಪ್ರಾಚೀನವಾದವು ಕೂಡ ಆಗಿವೆ. ಇವು ಪ್ರಾಚೀನ ಕಾಲದಿಂದಲೂ ಸಾಮಾನ್ಯವಾಗಿ ನೈಸರ್ಗಿಕವಾದ ಜಲದಿಂದ ಕೃಷಿ ಮಾಡಿದ ಸ್ಥಳಗಳೇ ಆಗಿವೆ. ಉದಾ: ಮಾವಲಿ, ಆವಲಿ, ಕೊಡಕಣಿ, ಬೆಳ್ಳಣಿ.

ಭೂ ಸ್ಥಿತಿವಾಚಕ ಸ್ಥಳನಾಮಗಳು ಆ ಪ್ರದೇಶದ ಎತ್ತರ, ತಗ್ಗು, ಮೈದಾನ, ಕಾಡುಗಳನ್ನು ಸೂಚಿಸುತ್ತವೆ. ಈ ಸ್ಥಳನಾಮಗಳು ಸಹ ಪ್ರಾಚೀನಕಾಲದಿಂದಲೇ ಬಂದವುಗಳಾಗಿವೆ. ಇವುಗಳಿಂದ ಪ್ರಾಚೀನ ಕಾಲದ ಸೊರಬ ಪ್ರದೇಶದಲ್ಲಿ ಬೇರ ಬೇರೆ ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಿದ್ದ ಜನವರ್ಗಗಳನ್ನು ತಿಳಿದುಕೊಳ್ಳಲು ಹೆಚ್ಚು ಸಹಾಯಕವಾಗಿವೆ.

ಉದಾ: ಕುಪ್ಪಗದ್ದೆ, ಕುಪ್ಪೆ, ಕಾಸರುಗುಪ್ಪೆ, ಸಾರೆಯಕೊಪ್ಪ, ಕುಂದಗಸೇವೆ, ಬೆಟ್ಟದ ಕೊರಲಿ, ಕೊರಕೋಡು, ಬಳ್ಳಿಬಯಲು, ಮಕ್ಕಿಬಯಲು, ಹಾಲ್ಗಟ್ಟದ ಬಯಲು (ಕೊನೆವೆರಡು ಪ್ರದೇಶ ಸೂಚಕಗಳು).

ಇಲ್ಲಿ ಕುಪ್ಪೆ ಎಂಬ ಶಬ್ದವು ಕಾಡು ಎಂಬ ಅರ್ಥವನ್ನು ಸೂಚಿಸುತ್ತದೆ. ಇದರಿಂದ ಸೊರಬ ಪ್ರದೇಶವು ಹೆಚ್ಚು ಅರಣ್ಯದಿಂದ ಆವೃತವಾಗಿದ್ದಿತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹಾಗೆಯೇ ಬಯಲು ಎಂಬ ಸ್ಥಳ ಸೂಚಕವು ವಿಶಾಲವಾದ ಹುಲ್ಲುಗಾವಲು ಪ್ರದೇಶವನ್ನು ಸೂಚಿಸುತ್ತವೆ. ನಂತರದಲ್ಲಿ ಈ ಬಯಲುಗಳೇ ಗದ್ದೆಗಳಾಗಿದ್ದರಿಂದ ಈಗ ಗದ್ದೆ ಬಯಲಿಗೆ ಈ ಹೆಸರಿನಿಂದಲೇ ಕರೆದಿರಬಹುದು.

ಇಲ್ಲಿ ಹೆಚ್ಚು ಸೆ, ಸಿ, ಸೆ, ಗಿ, ಚೆ, ಕೆ, ಕಾರಗಳಿಂದ ಕೊನೆಗೊಳ್ಳುವ ಸ್ಥಳನಾಮಗಳನ್ನು ಕಾಣುತ್ತೇವೆ. ಇಂತಹ ಸ್ಥಳನಾಮಗಳು ಸಾಮಾನ್ಯವಾಗಿ ಪ್ರಾಚೀನ ಕಾಲದಿಂದಲೂ ಜನವಸತಿ ಇದ್ದು ಅಲ್ಲಿ ಕೃಷಿಯನ್ನು ಮಾಡುತ್ತಿದ್ದ ಸೂಚನೆಯನ್ನು ತಿಳಿಸುತ್ತವೆ. ಇಂತಹ ಸ್ಥಳನಾಮಗಳನ್ನುಕರ್ನಾಟಕದಾದ್ಯಂತ ಕಾಣಬಹುದು.

ಸೊರಬದಲ್ಲಿ ನಮಗೆ 11 ರಿಂದ 12ನೇ ಶತಮಾನದ ಮಧ್ಯಂತರದಲ್ಲಿ ಹೆಚ್ಚು ಶಾಸನಗಳು ಸಿಗುತ್ತವೆ. ಈ ಶಾಸನಗಳನ್ನೇ ಆಧರಿಸಿ ಇಲ್ಲಿಯ ಸ್ಥಳನಾಮಗಳ ಚರ್ಚೆಯನ್ನು ಮಾಡಲಾಗಿದೆ. ಆದ್ದರಿಂದ ಈ ಅವಧಿಯಲ್ಲಿ ಇಂತಹ ಸ್ಥಳನಾಮಗಳು ಹೆಚ್ಚು ಸಿಗುತ್ತವೆ. ಬಹುಶಃ ಈ ಎಲ್ಲಾ ಸ್ಥಳನಾಮಗಳು 10-12 ಶತಮಾನದ ಸೊರಬ ಪ್ರದೇಶದಲ್ಲಿ ಆದ ಕೃಷಿ ವಿಸ್ತರಣೆಯನ್ನು ಸೂಚಿಸಬಹುದು.

ಉದಾ: ಹೆಗ್ಗಿಸೆ, ಹೊಂಬಿಸೆ, ಅಂಡುಗಿ, ಬೆಳಾಗಿ, ಕೂಳಗ, ಹಂಚೆ, ಸಿಕ್ಕ.ಪ್ರಾಚೀನ ಕಾಲದಲ್ಲಿ ಪಶುಪಾಲಕರು ಅಲೆಮಾರಿ ಜೀವನ ನಡೆಸುತ್ತಿದ್ದರು. ಆದ್ದರಿಂದ ಅವರು ತಾತ್ಕಾಲಿಕ ವಸತಿಗಳನ್ನು ಮಾಡಿಕೊಂಡು ಕಾಲಕಳೆಯುತ್ತಿದ್ದಂತೆ, ತಮ್ಮ ಗೋವುಗಳನ್ನು ಸಹ ಇಂತಹ ತಾತ್ಕಾಲಿಕ ವಸತಿಗಳಾದ ಹಟ್ಟಿಯಲ್ಲಿಯೇ ಕೂಡುತ್ತಿದ್ದರು. ಮುಂದೆ ಜನಸಂಖ್ಯೆ ಬೆಳೆದಂತೆ ಕೃಷಿ ವಿಸ್ತರಣೆಯೂ ಆಯಿತು. ಆಗ ಇಂತಹ ಹಟ್ಟಿಗಳು ಒಂದು ಹಳ್ಳಿಯಾಗಿ ಬೆಳೆದವು. ಈ ಬಗೆಯ ಜನರು ಮತ್ತು ವಸತಿಗಳು ಸೊರಬದಲ್ಲಿ ಇದ್ದರೆಂಬುದಕ್ಕೆ ಕೆಲವೊಂದು ಸ್ಥಳನಾಮಗಳನ್ನು ಹೆಸರಿಸಬಹುದು.

ಉದಾ: ತಳ್ಳೊದಟ್ಟಿ, ಬೆದವಟ್ಟಿ, ಕುಳವಾಡಿ

ಹಳ್ಳಿ ಮತ್ತು ಊರು ಎಂಬ ಸಾಮಾನ್ಯ ಘಟಕದಿಂದ ಕೊನೆಗೊಳ್ಳುವ ಸ್ಥಳನಾಮಗಳು ಒಂದು ಪ್ರದೇಶದಲ್ಲಿ ಜನವಸತಿ ಬೆಳೆಯುವುದನ್ನು ಸೂಚಿಸುತ್ತವೆ. ಸೊರಬ ಪ್ರದೇಶದಲ್ಲಿ ಈ ರೀತಿಯಲ್ಲಿ ಕೊನೆಗೊಳ್ಳುವ ಸ್ಥಳನಾಮಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದನ್ನು ಕಾಣಬಹುದು. ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಹೊಸವೂರು ಎಂಬ ಸ್ಥಳನಾಮವೊಂದು ಬಂದಾಗ ಅದಕ್ಕೆ ವಿರುದ್ಧವಾಗಿ ಹಳೆವೂರೊಂದು ಇರಲೇಬೇಕು. ಆಗ ಮಾತ್ರ ಹೊಸವೂರು ಎಂಬ ಸ್ಥಳನಾಮ ಬರಲು ಸಾಧ್ಯ. ಹಾಗೆಯೇ ನಡುಹಳ್ಳಿ ಎಂಬುದು ಸಹ ಹಳ್ಳಿಗಳ ಬೆಳವಣಿಗೆಯನ್ನು ಕುರಿತು ಹೇಳುತ್ತದೆ. ಅಂದರೆ ಈಗಾಗಲೇ ಒಂದು ಹಳ್ಳಿ ಇದೆ, ಅದರ ಪಕ್ಕದಲ್ಲಿ ಇನ್ನೊಂದು ಹಳ್ಳಿ ಹುಟ್ಟಿಕೊಂಡಿದೆ, ಅದರ ಬದಿಯಲ್ಲಿ ಮತ್ತೊಂದು ಹಳ್ಳಿ ಬೆಳೆದಿದೆ ಎಂಬುದನ್ನು ಸೂಚಿಸುತ್ತದೆ. ಆಗ ಮೊದಲನೆಯ ಮತ್ತು ಕೊನೆಯ ಹಳ್ಳಿಗಳ ಮಧ್ಯದಲ್ಲಿದ್ದ ಹಳ್ಳಿಗೆ ಸಾಮಾನ್ಯವಾಗಿ ನಡುಹಳ್ಳಿ

[illegible]

[illegible]

[illegible]

[illegible]

ಎಂದು ಕರೆಯುವುದು ವಾಡಿಕೆ. ಅಲ್ಲದೆ ನಡುಹಳ್ಳಿ ಎಂಬುದು ಸುತ್ತಲೂ ಅರಣ್ಯದಿಂದ ಕೂಡಿದ್ದು ನಡುವೆ ಒಂದು ಊರು ಇದ್ದರೆ, ಅದಕ್ಕೆ ಈ ಹೆಸರನ್ನಿಟ್ಟು ಕರೆದಿರಬಹುದು. ಆದರೆ ಈ ಪ್ರದೇಶಕ್ಕೆ ಅನ್ವಯಿಸಿ ಹೇಳುವುದಾದರೆ ಅದು ಹಳ್ಳಿಗಳ ಬೆಳವಣಿಗೆಯಿಂದಲೇ ಬಂದಿರಬೇಕು. ಒಟ್ಟಾರೆ ಹಳ್ಳಿ ಮತ್ತು ಊರು ಎಂಬ ಎರಡನೆಯ ಘಟಕದ ಸಾಮಾನ್ಯ ಅರ್ಥದ ಸ್ಥಳನಾಮಗಳು ಸೊರಬದಂತಹ ಮಲೆನಾಡಿನ ಪ್ರದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಮತ್ತು ಕೃಷಿ ವಿಸ್ತರಣೆಯಂತಹ ಚಟುವಟಿಕೆಯನ್ನು ಸೂಚಿಸುತ್ತವೆ.

ಇಲ್ಲಿ ನೈಸರ್ಗಿಕ ಜಲದಿಂದ ಕೂಡಿದ ಪ್ರದೇಶ ಹೆಚ್ಚು ಇದೆ. ಇದಕ್ಕೆ ಹೆಚ್ಚು ಮಳೆ ಬರುವುದು ಸಹ ಕಾರಣವಾಗಿರಬಹುದು. ಆದ್ದರಿಂದ ಕೃತಕವಾಗಿ ಕೆರೆಗಳನ್ನು ಕಟ್ಟಿ ಕೃಷಿ ಮಾಡುವ ಪದ್ಧತಿ ಕಡಿಮೆ ಇದ್ದಂತೆ ಕಾಣುತ್ತವೆ. ಈ ಕಾರಣಕ್ಕಾಗಿಯೇ ಇಲ್ಲಿ ಕೆರೆ-ಕಟ್ಟೆ ಎಂಬ ಕೃತಕ ಜಲವಾಚಕ ಘಟಕಗಳನ್ನೊಳಗೊಂಡ ಸ್ಥಳನಾಮಗಳು ಹೆಚ್ಚು ಸಿಗುವುದಿಲ್ಲ. ಆದರೂ ಸಹ ಇಲ್ಲಿ ಒಂದೆರಡು ಅಂತಹ ಸ್ಥಳನಾಮಗಳನ್ನು ಹೆಸರಿಸಲಾಗಿದೆ. ಉದಾ: ಬಿಟ್ಟಗೆರೆ, ಕೆರೆಹಳ್ಳಿ, ಅಣ್ಣಗೇರಿ.

ಸೊರಬ ಪ್ರದೇಶದ ಸ್ಥಳನಾಮಗಳನ್ನು ಮಧ್ಯಕಾಲೀನ ಶಾಸನಗಳ ಆಧಾರದ ಮೇಲೆ ಅವಲೋಕಿಸಿರುವುದರಿಂದ ನಮಗೆ ಆರಂಭದಲ್ಲಿ ಹೆಚ್ಚು ಭೂ ಸ್ಥಿತಿವಾಚಕ ಸ್ಥಳನಾಮಗಳು ಸಿಗುತ್ತವೆ. ಇಲ್ಲಿ ಜನಸಂಖ್ಯೆ ಹೆಚ್ಚಿದಂತೆ ಮತ್ತು ಕೃಷಿ ವಿಸ್ತರಣೆಯಾದಂತೆ ಹಳ್ಳಿ ಮತ್ತು ಊರು ಎಂಬ ದ್ವಿತೀಯ ಘಟಕದ ಸ್ಥಳನಾಮಗಳನ್ನು ಹೆಚ್ಚು ಕಾಣಬಹುದು. ಇಲ್ಲಿ ಪುರ, ಪಟ್ಟಣ ಎಂಬ ಸ್ಥಳನಾಮಗಳೇ ಸಿಗದಿರುವುದು ಒಂದು ಗಮನಾರ್ಹ ವಿಷಯ. ಇದರಿಂದ ಮುಖ್ಯವಾಗಿ ತಿಳಿಯುವುದೆಂದರೆ, ಕೃಷಿಯನ್ನೇ ಹೆಚ್ಚು ಅವಲಂಬಿಸಿ ಬದುಕುತ್ತಿದ್ದ ಹಳ್ಳಿಯ ಜನ ಜೀವನವನ್ನು ಚಿತ್ರಿಸುತ್ತದೆ.

4.3. ಆರ್ಥಿಕ ಭೂಗೋಳ

ಒಂದು ಪ್ರದೇಶದ ಆರ್ಥಿಕ ಭೂಗೋಳವು ಆ ಪ್ರದೇಶದ ಭೌತಿಕ ಭೂಗೋಳವನ್ನೇ ಆಧರಿಸಿರುತ್ತದೆ. ಈ ಹಿನ್ನಲೆಯಲ್ಲಿಯೇ ಅಲ್ಲಿಯ ಅರ್ಥಿಕ ಚಟುವಟಿಕೆ, ವ್ಯಾಪಾರ ವ್ಯವಹಾರ, ಸಾಂಸ್ಕೃತಿಕ ಬೆಳವಣಿಗೆ ಮತ್ತು ಜನ ಜೀವನ ನಿರ್ಧರಿಸಲ್ಪಡುವುದು. ಇಲ್ಲಿಯವರೆಗೆ ವಿವರಿಸಿದ ಭೌಗೋಳಿಕ ಪರಿಸರ ಸ್ಥಳನಾಮಗಳು

[illegible]

ಸೊರಬದಂತಹ ಪ್ರದೇಶದಲ್ಲಿ ಮೂರು ರೀತಿಯ ಆರ್ಥಿಕ ಚಟುವಟಿಕೆ ನಡೆಯಲು ಕಾರಣವಾಗಿವೆ. ಅವುಗಳೆಂದರೆ

i) ಬೇಡರ ಆರ್ಥಿಕ ಚಟುವಟಿಕೆಗಳು

ii) ಕುಮೆರಿ ಬೇಸಾಯ ಮಾಡುತ್ತಿದ್ದ ಪಶುಸಂಗೋಪನಾ ಜನವರ್ಗದ ಆರ್ಥಿಕ ಚಟುವಟಿಕೆಗಳು

iii) ನೀರಾವರಿಯಿಂದ ಕೃಷಿ ಮಾಡುವವರ ಆರ್ಥಿಕ ಚಟುವಟಿಕೆಗಳು

ಈ ಎಲ್ಲಾ ಆರ್ಥಿಕ ಚಟುವಟಿಕೆಗಳಲ್ಲಿ ಮೊದಲಿನ ಎರಡು ಆರ್ಥಿಕ ಚಟುವಟಿಕೆಗಳು ಪ್ರಾಚೀನ ಕಾಲದಿಂದಲೂ ಬಂದವುಗಳಾದರೂ ಸೊರಬದಂತಹ ಪ್ರದೇಶದಲ್ಲಿ ಅವುಗಳ ಸ್ಥಿತಿಗತಿಗಳನ್ನು ತಿಳಿಯುವುದು ಮುಖ್ಯ ವಿಷಯ. ನಂತರ ಮೂರನೇಯ ಆರ್ಥಿಕ ಚಟುವಟಿಕೆಯು ಇತಿಹಾಸ ಆರಂಭ ಕಾಲದಿಂದಲೇ ಮುಂದುವರೆದುಕೊಂಡು ಬಂದಿದ್ದರೂ ಮಲೆನಾಡಿನಂತಹ ಈ ಪ್ರದೇಶದಲ್ಲಿ ರಾಷ್ಟ್ರಕೂಟರ ಆಳ್ವಿಕೆಯ ಕಾಲದಿಂದ ಹೆಚ್ಚಾದಂತೆ ಕಾಣುತ್ತದೆ. ಈ ಸಮಯದಲ್ಲಿ ಮೇಲಿನ ಎರಡು ಚಟುವಟಿಕೆಗಳು ನೀರಾವರಿ ಕೃಷಿಸಮಾಜದ ಜೊತೆಗೆ ನಡೆದುಕೊಂಡ ರೀತಿ ಮತ್ತು ಅವು ಹೇಗೆ ಸ್ಥಿತ್ಯಂತರವಾದವು ಎಂಬುದನ್ನು ತಿಳಿಯಬಹುದು.

ಮಾನವ ಅಲೆಮಾರಿ ಜೀವನದಿಂದಲೇ ಬೇಟೆಯನ್ನು ತನ್ನ ಜೀವನದ ಪ್ರಧಾನ ವೃತ್ತಿಯನ್ನಾಗಿಯೇ ಜೀವನದುದ್ದಕ್ಕೂ ರೂಢಿಸಿಕೊಂಡು ಬಂದಿದ್ದಾನೆ. ತದನಂತರ ಕಾಡಿನಲ್ಲಿ ಜೀವನ ನಡೆಸುತ್ತಾ ಬೇಟೆಯನ್ನೇ ಮೂಲ ವೃತ್ತಿಯನ್ನಾಗಿ ಮಾಡಿಕೊಂಡು ಬದುಕುತ್ತಿದ್ದ ಸಮುದಾಯಗಳು ಪ್ರಾಚೀನ ಕಾಲದ ಶಾಸನಗಳು ಸಹ ಬೇಡರು ಎಂದೇ ಕರೆಯುತ್ತವೆ. ಇವರು ಆಧುನಿಕ ಕಾಲದ ಮಧ್ಯಭಾರತದ ಥಕಾಯಿತ ಜನಾಂಗವನ್ನು, ಅಥವಾ ಅಸ್ಸಾಮಿನ ನಾಗಾ ಜನರನ್ನು ಬಹು ಮಟ್ಟಿಗೆ ಹೋಲುತ್ತಿದ್ದು ಮಲೆನಾಡಿನಂತಹ ಕಾಡಿನ ಅಂಚಿನಲ್ಲಿಯೂ, ಬಯಲು ನಾಡಿನ ಊರುಗಳಲ್ಲಿಯೂ ವಾಸಿಸುತ್ತಿದ್ದುಂಟು.[1] ಇವರು ಸಾಮಾನ್ಯವಾಗಿ ಗುಂಪುಗುಂಪುಗಳಾಗಿ ವಾಸಿಸುತ್ತಿದ್ದು, ತಮ್ಮ ವೃತ್ತಿಯಾದ ಬೇಟೆಗಾರಿಕೆಯನ್ನು ಬೇರೆ ಬೇರೆಯಾಗಿ ಹಂಚಿಕೊಂಡು ಆಯಾ ವೃತ್ತಿಯನ್ನು ಆಯಾ ಗುಂಪಿನವರೇ ಮುಂದುವರೆಸಿಕೊಂಡು ಬಂದಿರಬಹುದು. ಉದಾಹರಣೆಗೆ ನಾಲ್ಕುಕಾಲಿನ ಪ್ರಾಣಿಗಳನ್ನು ಬೇಟೆಯಾಡುವವರು, ಎರಡು ಕಾಲಿನ ಪಕ್ಷಿಗಳನ್ನು ಬೇಟೆಯಾಡುವವರು, ಮೀನು ಹಿಡಿಯುವವರು. ಇಂಥ ಆರ್ಥಿಕ ಚಟುವಟಿಕೆಯ ಹಂಚಿಕೊಳ್ಳುವಿಕೆಯೇ ಒಂದು ಹೊಸ ಸಾಂಸ್ಕೃತಿಕ ಬೆಳವಣಿಗೆಯನ್ನು ತೋರಿಸುತ್ತದೆ.

ಇದು ಬೇರೆ ಬೇರೆ ಭೌಗೋಳಿಕ ಪರಿಸರವನ್ನು ಆಧರಿಸಿ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಬಹುದು. ಆದರೆ ಸೊರಬದಂತಹ ಪ್ರದೇಶ ಈ ಎಲ್ಲಾ ಆರ್ಥಿಕ ಚಟುವಟಿಕೆಗಳಿಗೂ ಸಹ ಆಶ್ರಯವನ್ನು ಕೊಟ್ಟ ಪರಿಸರವೆಂದೇ ಹೇಳಬೇಕು.

ಈ ಹಿನ್ನಲೆಯಲ್ಲಿ ಸೊರಬ ಪ್ರದೇಶದಲ್ಲಿ ಬದುಕುತ್ತಿದ್ದ ಬೇಡರ ಜೀವನ ಕ್ರಮ ಮತ್ತು ಅವರ ಆರ್ಥಿಕ ಚಟುವಟಿಕೆಯ ಬಗ್ಗೆ ಆಲೋಚಿಸಿದಾಗ, ಇವರು ತಮ್ಮ ಜೀವನವನ್ನು ಕಾಡಿನ ಕಾಡುತ್ಪತ್ತಿಗಳನ್ನು (ಜೇನು, ಗಿಡಮೂಲಿಕೆ, ಹಲಸು ಮುಂತಾದ ಹಣ್ಣುಗಳು, ಸುಗಂಧ ಭರಿತ ಸುರಿಗೆ ಹೂವು.ಇವು ಈಗಲೂ ಕಾಡಿನಲ್ಲಿ ಹೆಚ್ಚು ಸಿಗುತ್ತವೆ) ನಾಡಿಗೆ ತಂದು ಮಾರುವುದರ ಮೂಲಕ ಮತ್ತು ಕಾಡಿನ ಪ್ರಾಣಿಗಳನ್ನು ಬೇಟೆಯಾಡುವುದರಿಂದ ನಡೆಸಿರಬಹುದು. ಇವರು ರಾಜ್ಯದ ಯಾವುದೇ ಸಾಂಸ್ಕೃತಿಕ ಆಯಾಮಗಳಿಗೂ ಒಳಗಾಗದೆ ತಮ್ಮದೇ ಆದ ಜೀವನ ಕ್ರಮವನ್ನು ನಡೆಸುತ್ತಾ ಸ್ವತಂತ್ರವಾಗಿ ಬದುಕುತ್ತಿದ್ದರು. ಮತ್ತು ಕೆಲವು ನಿರ್ದಿಷ್ಟ ಸಂಗತಿಗಳಿಗೆ ಸಂಬಂಧಿಸಿದಂತೆ, ಊರಿನ ಜನರ ಸಾಂಸ್ಕೃತಿಕ ಬದುಕಿನೊಂದಿಗೆ ಬೆರೆಯುತ್ತಿದ್ದರು.

ಪಶು ಸಂಗೋಪನೆಯನ್ನೆ ಮೂಲ ವೃತ್ತಿಯನ್ನಾಗಿ ಮಾಡಿಕೊಂಡು ಬದುಕುತ್ತಿದ್ದ ಮಲೆಪರನ್ನು ಶಾಸನವೊಂದು ಉಲ್ಲೇಖಿಸುತ್ತದೆ.[2] ಇವರು ಸಾಮಾನ್ಯವಾಗಿ ದುರ್ಗಿ ಮತ್ತು ಭೂತಗಳನ್ನು ಪೂಜಿಸುವಂತಹ ಜನಗಳಾಗಿದ್ದು (ಈ ಪ್ರದೇಶದಲ್ಲಿ ಈಗಲೂ ಇಂಥ ದೇವರುಗಳುನ್ನು ಆರಾಧಿಸುತ್ತಾರೆ) ಅಂಚು ವಾಸಿಗಳಾಗಿದ್ದರೆಂದು ಚಿದಾನಂದ ಮೂರ್ತಿ ಯವರು ಅಭಿಪ್ರಾಯ ಪಡುತ್ತಾರೆ.[3] ಇವರು ಸಂಘಟಿತ ಗುಂಪುಗಳಾಗಿದ್ದು ಗುಡ್ಡ-ಬೆಟ್ಟಗಳಲ್ಲಿ ಗೋವುಗಳನ್ನು ಮೇಯಿಸುತ್ತಾ ವಲಸೆಗಾರ ಜೀವನವನ್ನು ನಡೆಸುತ್ತಿದ್ದರು. ಈ ಸಂಘಟನೆಯಿಂದಲೇ ದೊಡ್ಡ-ದೊಡ್ಡ ರಾಜರನ್ನು ಎದುರಿಸಿ ಆಗಾಗ್ಗೆ ನಾಡಿನ ಮೇಲೆ ದಾಳಿಯಿಟ್ಟು ಬರುತ್ತಿದ್ದವರು ಈ ಮಲೆಪರು. ಇವರು ದುರ್ಗಮವಾದ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಾ ಒಂದು ರೀತಿಯಲ್ಲಿ ನಾಗರಿಕತೆಯಿಂದ ದೂರವಾಗಿ ಸ್ವತಂತ್ರ ಪ್ರಿಯರಾಗಿ ಬಾಳುತ್ತಿದ್ದರು.[4] ಇಂತಹ ಪ್ರಬಲರಾದ ಮಲೆಪರನ್ನು ಅಂದಿನ ರಾಜರು, ಮಾಂಡಳಿಕರು ತಮ್ಮ ಕೈವಶದಲ್ಲಿಟ್ಟು ಕೊಳ್ಳಲು ಪ್ರಯತ್ನಿಸಿ ಸಫಲರಾದಾಗ "ಮಲೆಪರೊಳಗೊಂಡ" ಎಂಬ ಬಿರುದು ಧರಿಸಿದುದ್ದನ್ನು ಕಾಣುತ್ತೇವೆ.

ಹೆಚ್ಚಿನ ಪ್ರಮಾಣದಲ್ಲಿ ಗೋವುಗಳನ್ನು ಸಾಕುತ್ತಿದ್ದ ಮಲೆಪರಿಗೆ ಮುಖ್ಯವಾದ ಆರ್ಥಿಕ ಚಟುವಟಿಕೆಯೇ ಇದಾಗಿದ್ದಿತು. ಅಲೆಮಾರಿ ಜೀವನವನ್ನು ನಡೆಸುತ್ತಿದ್ದರೂ, ವರ್ಷದ ಬೇರೆ ಬೇರೆ ಕಾಲಾವಧಿಗಳಲ್ಲಿ ಬೇರೆ ಬೇರೆ ಪ್ರದೇಶದಲ್ಲಿ ವಾಸಿಸುತ್ತಿರ ಬಹುದು. ಆ ಸಮಯದಲ್ಲಿ ತಾವು ಬೀಡು ಬಿಟ್ಟ ಸ್ಥಳಕ್ಕೆ ಮತ್ತು ತಮ್ಮ ಗೋವುಗಳನ್ನು ಕೂಡುತ್ತಿದ್ದ ಮನೆಗೆ 'ಹಟ್ಟಿ' ಎಂದು ಕರೆಯಲಾಗುತ್ತಿತ್ತು. ಇಂಥ ಸ್ಥಳನಾಮಗಳಿಗೆ ಶಾಸನಗಳಲ್ಲಿ ತಳ್ಳೊಟ್ಟಿ[5], ಬೆದವಟ್ಟೆ[6], ಕುಳವಾಡಿ[7] ಎಂದು ಕರೆಯಲಾಗಿದೆ. ಇವು ಶಾಶ್ವತವಾದ ಊರುಗಳಾಗಿರದೆ ಆಗಾಗ ಬಂದು ನೆಲಸಿ ಹೋದ ಒಂದು ನಿಗಧಿತ ಪ್ರದೇಶವಾಗಿದ್ದು ತದನಂತರದಲ್ಲಿ ಅವುಗಳೇ ಒಂದು ಹಳ್ಳಿಯಾಗಿ ಅದೇ ಹೆಸರನ್ನು ಮುಂದುವರೆಸಿಕೊಂಡು ಬಂದಿರುವುದಕ್ಕೆ 'ಹಟ್ಟಿ' ಎಂಬ ಪದವೇ ಸಾಕ್ಷಿ. ಇದೇ ಮಾತನ್ನು ಶಂಭಾಜೋಷಿಯವರು ಅಭಿಪ್ರಾಯ ಪಡುತ್ತಾರೆ.[8] ಇವರು ಗೋವುಗಳಿಂದ ಬಂದ ಹಾಲು, ಮೊಸರು, ಬೆಣ್ಣೆ, ತುಪ್ಪ ಮತ್ತು ಚರ್ಮದಂತಹ ಆರ್ಥಿಕ ಉತ್ಪನ್ನಗಳನ್ನು ನಾಡಿಗೆ ಮಾರಿ ಆದಾಯ ಪಡೆಯುತ್ತಿದ್ದರು. ಅಲ್ಲದೆ ಇವರು ರಾಜನಿಂದ ಮನ್ನಿಸಲ್ಪಟ್ಟವರಾದ್ದರಿಂದ ಹೆಚ್ಚುವರಿ ಉತ್ಪಾದನೆಯಾದ ತುಪ್ಪವನ್ನು ರಾಜ್ಯಕ್ಕೆ ತೆರಿಗೆ[9] (ತುಪ್ಪದೆರೆ)ಯಾಗಿ ಕೊಡುತ್ತಿದ್ದರು. ಹೀಗೆ ಪಶುಪಾಲಕರಿಂದ ಹೆಚ್ಚು ಹೆಚ್ಚು ತುಪ್ಪವನ್ನು ಸಂಗ್ರಹಿಸಿದ ರಾಜರು ತಮ್ಮ ಸೈನಿಕರು ಯುದ್ಧದಲ್ಲಿ ಹೋರಾಡಿ ಗಾಯಗೊಂಡಾಗ ಅಂಥ ಗಾಯಗಳನ್ನು ಗುಣಪಡಿಸಲು ಗೋವುಗಳ ತುಪ್ಪ ಮತ್ತು ಗಿಡಮೂಲಿಕೆಗಳನ್ನು ಬಳಸುತ್ತಿದ್ದರು.[10]

ಹೀಗೆ ಪಶು ಸಂಗೋಪನಯನ್ನು ಮಾಡಿಕೊಂಡಿದ್ದ ಮಲೆಪರು ಜೀವನೋಪಾಯಕ್ಕಾಗಿ ಕುಮೆರಿ ಬೇಸಾಯವನ್ನು ಮಾಡುತ್ತಿದ್ದಂತೆ ಕಾಣುತ್ತದೆ. ಇದಕ್ಕೆ ಕಾರಣ ಸೊರಬ ಪ್ರದೇಶದ ಭೌಗೋಳಿಕ ಲಕ್ಷಣ ಹಾಗೂ ವಾಯುಗುಣ ಪ್ರಮುಖ ವಾದುದಾಗಿರಬಹುದು. ಈ ಪ್ರದೇಶದಲ್ಲಿ ಒಣ ಬೇಸಾಯ ಮಾಡಿರಬಹುದಾದ ಫಲವತ್ತಾದ ಭೂಮಿಯ ಹೆಸರುಗಳು ಶಾಸನಗಳಿಂದ ತಿಳಿದು ಬರುವುದರಿಂದಲೂ ಸಹ ಇದನ್ನು ಖಚಿತಪಡಿಸಿಕೊಳ್ಳಬಹುದು.

ಕುಮೆರಿ ಬೇಸಾಯ ಎನ್ನುವ ಪದ ಬಹಳ ಅಸ್ಪಷ್ಟವಾದ ಶಬ್ದ. ಇದು ಬಹಳ ಪ್ರಾಚೀನ ಕಾಲದ ಕೃಷಿ ಪದ್ಧತಿಯೂ ಕೂಡ ಹೌದು. ಈ ಬಗೆಯ ಬೇಸಾಯದ ಚಟುವಟಿಕೆ ಆರಂಭವಾಗುವುದು ಹೀಗೆ: ದಟ್ಟವಾದ ಅರಣ್ಯವನ್ನು ಬೆಂಕಿಯಿಂದ ಸುಟ್ಟು ಆ ಭೂಮಿಯಲ್ಲಿ ನೇಗಿಲಿನ ಸಹಾಯವಿಲ್ಲದೆ ಆಹಾರ ಧಾನ್ಯ (ಬೀಜ)ಗಳನ್ನು

[illegible]

[illegible]

[illegible]

ಚೆಲ್ಲಿ ಬಂದ ಬೆಳೆಯನ್ನು ತೆಗೆದುಕೊಂಡು ಪುನ: ಬೇರೆ ಪ್ರದೇಶದಲ್ಲಿ ಇಂಥ ಚಟುವಟಿಕೆಯನ್ನು ಮಾಡುವ ಒಂದು ಬೇಸಾಯ ಪದ್ಧತಿ. ಈ ಬಗೆಯ ಬೇಸಾಯಕ್ಕೆ ನಾವು ಕುಮೆರಿ ಬೇಸಾಯ (Shifting culrivation) ಎಂದು ಕರೆಯುತ್ತೇವೆ. ಈ ಬೇಸಾಯ ಪದ್ಧತಿಯನ್ನು ನಾವು ವೇದಗಳ ಕಾಲದಲ್ಲಿ ಗಂಗಾ ನದಿ ಬಯಲು ಪ್ರದೇಶದಲ್ಲಿ ಆರ್ಯರು ಪಶುಪಾಲನೆಯನ್ನು ಮಾಡುವುದರ ಜೊತೆಗೆ ಕುಮೆರಿ ಬೇಸಾಯವನ್ನು ಮಾಡುತ್ತಿದ್ದ ಒಂದು ಆರ್ಥಿಕ ಚಟುವಟಿಕೆಯನ್ನು ಕಾಣುತ್ತೇವೆ.

ಸೊರಬ ಪ್ರದೇಶ ಕುಮೆರಿ ಬೇಸಾಯಕ್ಕೆ ಯೋಗ್ಯವಾದ ಜಾಗ. ಈ ಪ್ರದೇಶದಲ್ಲಿ ಕುಮೆರಿ ಬೇಸಾಯ ಮಾಡಿದ ಶಕ್ಯತೆ ಬಹಳಷ್ಟಿದೆ.[11] ಕಾರಣ ಇಲ್ಲಿ ಚಿಕ್ಕ-ಪುಟ್ಟ ಬೆಟ್ಟ-ಗುಡ್ಡಗಳಿವೆ ಮತ್ತು ಅರಣ್ಯದಿಂದ ಕೂಡದ ವಿಶಾಲವಾದ ಫಲವತ್ತಾದ ಬಯಲು ಪ್ರದೇಶಗಳೂ ಇವೆ. ಜೊತೆಗೆ ಮಳೆಯೂ ಸಹ ಸಾಕಷ್ಟು ಬರುತ್ತದೆ. ಭೂಮಿಯನ್ನು ಹಸನು ಮಾಡಿದರೆ ಅಲ್ಲಿ ಮಳೆ ಆಶ್ರಿತ ಒಣ ಬೇಸಾಯವನ್ನಾದರೂ ಮಾಡಬಹುದು.ಇಂಥ ಮಳೆ ಆಶ್ರಿತ ಬೆಳೆ ಬೆಳೆಯುವ ಫಲವತ್ತಾದ ಎತ್ತರದ ಭೂ ಪ್ರದೇಶಕ್ಕೆ ಮಕ್ಕಿ ಬಯಲು, [12] ಹಕ್ಕಲು [13]ಬೆದ್ದಲು,[14] ಕುಮೆರಿ [15] ಎಂದು ಶಾಸನದಲ್ಲಿ ಕರೆಯಲಾಗಿದೆ. ನಂತರದ ಕಾಲಾವಧಿಯಲ್ಲಿ ಕಾಡುಕಡಿದು ಹುಲ್ಲು ಬೆಳೆಸುವುದೂ ಸಹ ಒಂದು ರೀತಿಯ ಕುಮೆರಿ ಬೇಸಾಯದ ಪದ್ಧತಿಯೇ ಆಯಿತು. ಅದಕ್ಕೆ ಕ್ರಿ.ಶ. 1553 ರ ಶಾಸನವೊಂದು ತಿಳಿಸುವಂತೆ, 'ಕುಮೆರಿ ಕಾಡಾರಂಬ' ಎಂಬ ಶಬ್ದ ಮುಖ್ಯ ಆಧಾರವಾಗಿದೆ. ಕಾರಣ ನೀರಾವರಿ ಕೃಷಿ ಬಂದನಂತರ ಸಮತಟ್ಟಾದ ಹುಲ್ಲುಗಾವಲಿನ ಬಯಲು ಭೂಮಿಯೆಲ್ಲ ವ್ಯವಸಾಯಕ್ಕೆ ಸ್ಥಿತ್ಯಂತರವಾಗಿದ್ದರಿಂದ ತಮ್ಮ ಕೃಷಿ ಕೆಲಸಕ್ಕೆ ಬೇಕಾದ ಎತ್ತುಗಳನ್ನು ಮತ್ತು ಗೋವುಗಳನ್ನು ಮೇಯಿಸಲು ಬೆಟ್ಟಗುಡ್ಡಗಳ ಅಂಚಿನಲ್ಲಿರುವ ಕುರುಚಲು ಕಾಡನ್ನು ಸವರಿ ಹುಲ್ಲನ್ನು ಬೆಳೆಸುವುದು ಕುಮೆರಿ ಆಯಿತು. ಈ ಪ್ರದೇಶದಲ್ಲಿ ಈಗಲೂ ಗದ್ದೆಗಳ ಮೇಲೆ ಕುರುಚಲು ಕಾಡಿನಿಂದ ಕೂಡಿದ್ದು ಹೆಚ್ಚು ಹುಲ್ಲು ಬೆಳೆಯುವ ಭೂಮಿಗೆ ಕುಮೆರಿ ಎಂದೇ ಕರೆಯುತ್ತಾರೆ. ಇಂಥ ಹುಲ್ಲುಗಾವಲು ಪ್ರದೇಶಗಳಿಗೆ ಶಾಸನಗಳು ಮಕ್ಕಿ ಬಯಲು [16], ಹಸಟೆಯ ಬಯಲು [17], ಬಳ್ಳಿ ಬಯಲು[18], ಹಾಲ್ಗಟ್ಟದ ಬಯಲು[19] ಎಂದು ಹೆಸರಿಸುತ್ತೇವೆ. ಇವೆಲ್ಲ ಗೋಮಾಳ ಎಂದು ತಿಳಿದುಕೊಳ್ಳಲು ಕ್ರಿ.ಶ. 1139 ರ ಶಾಸನವೊಂದು ಸವಣನ ಬಿಳಿಲಲ್ಲಿ [20] ಗೋವುಗಳು ಮೆಯ್ಯುವುದಕ್ಕಾಗಿ ಭೂಮಿಯನ್ನು ದಾನ ಕೊಟ್ಟ ವಿಚಾರ ತಿಳಿಸುತ್ತದೆ. ಇದರಿಂದ ಈ ಬಯಲುಗಳೆಲ್ಲ ಹುಲ್ಲುಗಾವಲು ಪ್ರದೇಶಗಳೇ ಎಂದು

ಹೇಳಬಹುದು. ಒಟ್ಟಾರೆ ಅಡವಿಯನ್ನು ಕಡಿದು ಮನುಷ್ಯರು ಅಥವಾ ಪ್ರಾಣಿಗಳು ತಿನ್ನುವ ಆಹಾರವನ್ನು ಬೆಳೆಯುವ ಜಾಗವೆಲ್ಲ ಕುಮರಿಯೇ ಆಗಿದೆ.

ಇಂಥ ವಿಶಿಷ್ಟ ಬುಡಕಟ್ಟು ಮತ್ತು ಪಶುಪಾಲಕ ಸಮುದಾಯಗಳ ಬಗೆಗೆ ನಮಗೆ ಕ್ರಿ.ಶ. 10ನೇ ಶತಮಾನದ ಉತ್ತರಾರ್ಧದವರೆಗೂ ಯಾವುದೇ ಮಾಹಿತಿ ತಿಳಿಯುವುದಿಲ್ಲ. ಕಾರಣ ಇಲ್ಲಿಯವರೆಗೂ ಈ ಪ್ರದೇಶ ರಾಜ್ಯದ ರಾಜಕೀಯ ಚಟುವಟಿಕೆಯಿಂದಲೂ ಮತ್ತು ನಾಡಿನ ಸಂಸ್ಕೃತಿಯಿಂದಲೂ ದೂರವಿದ್ದಿರುವುದೇ ಆಗಿರಬಹುದು. ಆದರೆ ರಾಷ್ಟ್ರಕೂಟರ ಆಳ್ವಿಕೆಯಿಂದ ರಾಜ್ಯ ತನ್ನ ಆರ್ಥಿಕ ಚಟುವಟಿಕೆಯನ್ನು ಕಾಡಿನೊಳಕ್ಕೆ ಪ್ರಯೋಗಮಾಡುತ್ತಾ, ಆ ಮೂಲಕ ನಾಡಿನ ಸಂಸ್ಕೃತಿಯನ್ನು ಹರಡಲು ಪ್ರಯತ್ನಿಸಿದಂತೆ ಕಾಣುತ್ತದೆ. ಆದ್ದರಿಂದ ರಾಷ್ಟ್ರಕೂಟರ ಆಳ್ವಿಕೆಯ ಕೊನೆಯ ಹಂತದಲ್ಲಿ ರಚಿಸಲ್ಪಟ್ಟು ನಂತರ ಸಂಪೂರ್ಣವಾಗಿ ಕಣ್ಮರೆಯಾದ ಸ್ಮಾರಕ ಶಿಲೆಗಳಾದ ಗೋಸಾಸ ಕಲ್ಲುಗಳಲ್ಲಿ ಮತ್ತು ಅವರ ಕಾಲದ ವೀರಗಲ್ಲುಗಳಲ್ಲಿ ವಿಶೇಷವಾಗಿ ನೇಗಿಲಿನ ಚಿತ್ರ ಕಂಡು ಬರುತ್ತದೆ. ಅಲ್ಲದೆ ಒಬ್ಬ ರೈತ ಎರಡು ಎತ್ತುಗಳಿಗೆ ನೊಗವನ್ನು ಹೂಡಿ ನೇಗಿಲಿನಿಂದ ಬೇಸಾಯ ಮಾಡುತ್ತಿರುವುದನ್ನು ಕಾಣುತ್ತೇವೆ. ಇದರಿಂದ ನಮಗೆ ಸ್ಪಷ್ಟವಾಗಿ ತಿಳಿಯುವುದೆಂದರೆ ದಟ್ಟವಾದ ಮಲೆನಾಡಿನ ಪ್ರದೇಶದಲ್ಲಿ ಕೃಷಿ ವಿಸ್ತರಣೆಗಾಗಿ ಮಹಾನ್ ತಂತ್ರಜ್ಞಾನವಾದ ನೇಗಿಲನ್ನು (ರಾಷ್ಟ್ರಕೂಟರ ಕಾಲದ ಈ ಗೋಸಾಸ ಕಲ್ಲುಗಳು ಎಲ್ಲೆಲ್ಲಿ ಸಿಗುತ್ತವೆಯೋ ಅಲ್ಲೆಲ್ಲಾ ನೇಗಿಲಿನ ಚಿತ್ರ ಕಾಣ ಬರುತ್ತದೆ) ಹೆಚ್ಚಿನ ಪ್ರಮಾಣದಲ್ಲಿ ಬಳಸಿ ಫಲವತ್ತಾದ ಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಿದಂತೆ ಕಾಣುತ್ತದೆ.

ಹೀಗೆ ಕಾಡು ಬೇರೆ ಬೇರೆ ಕಾರಣಗಳಿಗಾಗಿ ಅಂದರೆ ಹುಲ್ಲುಗಾವಲು ಪ್ರದೇಶವಾಗಿ, ಕುಮರಿ ಬೇಸಾಯದ ಭೂಮಿಯಾಗಿ ಮತ್ತು ನೀರಾವರಿ ಕೃಷಿಭೂಮಿಯಾಗಿ ಪರಿವರ್ತನೆಯಾಗುತ್ತಾ ಹೋದಂತೆ ಕಾಡಿನಲ್ಲಿ ಬೇಟೆಯಾಡುತ್ತಾ ಜೀವನ ಸಾಗಿಸುತ್ತಿದ್ದ ಬೇಡರ ಗುಂಪುಗಳಿಗೆ ಹೆಚ್ಚು ತೊಂದರೆಯಾಗುತ್ತಾ ಹೋಯಿತು. ಆಗ ಅವರು ಪಶುಪಾಲಕ ಮತ್ತು ಕೃಷಿಕ ವರ್ಗದವರ ವಿರುದ್ಧ ಪ್ರತಿಭಟಿಸಲು ಆರಂಭಿಸಿದರು. ಆ ಪ್ರತಿಭಟನೆಯು ಪಶುಪಾಲಕರ ಮತ್ತು ಕೃಷಿಕರ ಉತ್ಪಾದನೆಗಳನ್ನು ಕದಿಯುವುದರ ಮೂಲಕ ವ್ಯಕ್ತಪಡಿಸಿರುವುದು ತಿಳಿದು ಬರುವ ಸಂಗತಿ. ಈ ಕಾಲಾವಧಿಯಲ್ಲಿ ಕುಮರಿ ಬೇಸಾಯವಿದ್ದು ಮಿಗತ ಉತ್ಪಾದನೆ ಸಾಧ್ಯವಾಗದೆ ಇದ್ದುದರಿಂದ ಗೋವುಗಳ ಸಾಕಾಣಿಕೆಯೇ ಹೆಚ್ಚಾಗಿದ್ದ ಸಂದರ್ಭದಲ್ಲಿ ಈ ಬೇಡರು ಸಾಮಾನ್ಯವಾಗಿ ಗೋವುಗಳನ್ನೇ ಕದಿಯ

ಬೇಕಾಯಿತು. ಆದ್ದರಿಂದ ಅವರು ಗೋವುಗಳನ್ನು ಕೂಡಿಹಾಕುತ್ತಿದ್ದ ತಳ್ಗೊಟ್ಟ ಗ್ರಾಮಕ್ಕೆ ಬಂದು ತುರುಗಳನ್ನು ತೆಗೆದುಕೊಂಡು ಹೋದರು [21] ಎಂದು ಶಾಸನ ತಿಳಿಸುತ್ತದೆ. ಅದೇ ರೀತಿ ಬೆಟ್ಟದ ಕೂರಲಿ ಗ್ರಾಮಕ್ಕೆ ಬಂದು ತುರುಗಳನ್ನು ತೆಗೆದುಕೊಂಡು ಹೋಗುವ [22] ಮಾಹಿತಿಯನ್ನು ಇನ್ನೊಂದು ಶಾಸನ ತಿಳಿಸುತ್ತದೆ. ಬೇಡ ಕಳ್ಳರು ಮತ್ತು ಬೇಡರು ಎಂದೇ ಶಾಸನಗಳು ಸ್ಪಷ್ಟವಾಗಿ ತಿಳಿಸುವುದರಿಂದ ಇವರು ಬೇಡರೇ ಎಂದು ತಿಳಿಯುತ್ತದೆ. ಕಾಡಿನ ನಾಶವಾದಾಗ ಇವರಿಗೆ ಬೇಟೆಯಾಡಲು ಜಾಗದ ತೊಂದರೆ ಆಯಿತು. ಆಗ ತಮ್ಮ ಸಾಂಸ್ಕೃತಿಕ ಅನನ್ಯತೆಗೆ[23] ನಾಡಿನ ಸಂಸ್ಕೃತಿಯಿಂದ ಆಗುತ್ತಿದ್ದ ತೊಂದರೆಯನ್ನು ಸಹಿಸದೆ ಈ ರೀತಿಯ ಕಾರ್ಯಕ್ಕಿಳಿದಿರಬಹುದು.

ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಮತ್ತು ತದನಂತರದಲ್ಲಿ ಹೆಚ್ಚಿನ ಭೂಮಿ ಕೃಷಿಗೆ ಒಳಗಾಗಿ ಹೆಚ್ಚು ಹೆಚ್ಚು ಹಳ್ಳಿಗಳು ಬೆಳೆದಂತೆ ಕಾಣುತ್ತದೆ. ಕಾರಣ ಸೊರಬ ಪ್ರದೇಶದಲ್ಲಿ ಈ ವೇಳೆಗೆ ಆರ್ಥಿಕ ಸ್ಥಿತ್ಯಂತರಗಳು ನಡೆದು ಕೆಲವು ಅಂಚು ವಾಸಿಗಳಾದ ಮಲೆಪರು ತಮ್ಮ ಪಶುಪಾಲನೆಯಂತಹ ಆರ್ಥಿಕ ಚಟುವಟಿಕೆಯಿಂದ ಬದಲಾವಣೆ ಹೊಂದಿ ಕೆರೆಗಳಿಂದ ನೀರಾವರಿ ಕೃಷಿ ಮಾಡಲು ಆರಂಭಿಸಿದರು. ಹಾಗೆಯೇ ಇನ್ನೂ ಕೆಲವು ಅಂಚುವಾಸಿಗಳು ಆರ್ಥಿಕವಾಗಿ ಪ್ರಬಲ ವರ್ಗದ ಆಳುಗಳಾಗಿ ಅವರ ಆಸ್ತಿ-ಅಂತಸ್ತು ಮತ್ತು ರಾಜ್ಯ ರಕ್ಷಣೆ ಮಾಡಿದಂತೆ ತೋರುತ್ತದೆ. ಇಲ್ಲಿಂದ ಮುಂದೆ ಆರ್ಥಿಕ ತಾರತಮ್ಯ ಉಂಟಾಗಿ, ಆರ್ಥಿಕವಾಗಿ ಕೆಳ ಹಂತದಲ್ಲಿದ್ದ ಉಪೇಕ್ಷಿತ ವರ್ಗಗಳು ಸುಲಭವಾಗಿ ಮೇಲ್ವರ್ಗದವರ ಅಡಿಯಾಳಾಗಲು ಆರಂಭಿಸಿದರು. ಹೀಗೆ ಮೇಲ್ವರ್ಗಗಳು ಮೇಲ್ವರ್ಗಗಳಾಗಿಯೇ ಮುಂದುವರೆದರೆ, ಕೆಳವರ್ಗಗಳು ಕೆಳವರ್ಗಗಳಾಗಿಯೇ ಇದ್ದುದನ್ನು ಗುರುತಿಸಬಹುದು.

ಪಶುಪಾಲಕರಾಗಿದ್ದ ಮಲೆಪರ ಬಗ್ಗೆ ಚಿದಾನಂದ ಮೂರ್ತಿಯವರು [24] ಈ ರೀತಿ ಅಭಿಪ್ರಾಯ ಪಡುತ್ತಾರೆ. "ಶಿವಮೊಗ್ಗ ಜಿಲ್ಲೆಯ ಉತ್ತರದ ಶಿಕಾರಿಪುರ, ಸೊರಬ ತಾಲೂಕುಗಳಲ್ಲಿರುವ "ಮಲಪರು" ಎಂಬ ವೀರಶೈವ ಧರ್ಮಾನುಯಾಯಿಗಳು ಮೂಲತ: "ಮಲೆಪ" ರಾಗಿದ್ದರೆಂಬುದಕ್ಕೆ "ಮಲಪ" ಎಂಬ ರೂಪವೇ ಆಧಾರವಾಗಿದೆ.ಇವರನ್ನು 'ಮಲೆಯ ಗೌಡರು' ಎಂದೂ ಕರೆಯುವುದುಂಟು ಎಂದು ತಿಳಿಸುತ್ತಾರೆ. ಇವರ ವಾದದ ಪ್ರಕಾರ ಈ ಪ್ರದೇಶದಲ್ಲಿ ಈಗಲೂ ಪ್ರತಿಯೊಂದು ಊರುಗಳಲ್ಲಿಯೂ ಮಲೆಪರು ಕಂಡು

[illegible]

[illegible]

[illegible]

ಬರುವರು. ಅಷ್ಟೇ ಅಲ್ಲ ಇವರು ಈಗಲೂ ಹೆಚ್ಚಿನ ಗೋವುಗಳನ್ನು ಸಾಕುತ್ತಾರೆ ಮತ್ತು ಊರಿನ ಭೂಮಿಯಲ್ಲಿ ಬಹುಪಾಲು ಭಾಗವನ್ನು ಇವರೇ ಹೊಂದಿದ್ದಾರೆ.

ಪಶುಪಾಲಕರಾದ ಮಲೆಪರ ಬಗ್ಗೆ ಈ ಮೇಲಿನ ಅಂಶಗಳು ಈಗಲೂ ಕಣ್ಣಿಗೆ ಕಟ್ಟುವಂತೆ ಸೊರಬ ಪ್ರದೇಶದಲ್ಲಿ ಕಂಡು ಬರುತ್ತದೆ. ಇವರು ಆರ್ಥಿಕ ಸ್ಥಿತ್ಯಂತರದಿಂದಾಗಿ ಬದಲಾವಣೆ ಹೊಂದಿದರೂ, ಏಕಾಗಿ ಗೋವುಗಳನ್ನು ಹೆಚ್ಚಾಗಿ ಸಾಕುತ್ತಾರೆ? ಹಾಗೆಯೇ ಹೆಚ್ಚಿನ ಭೂಮಿಯು ಇವರ ಕೈವಶದಲ್ಲಿರಲು ಕಾರಣವೇನು? ಎಂಬುದಕ್ಕೆ ಕೆಲವೊಂದು ಅಂಶಗಳಿಂದ ಸ್ಪಷ್ಟ ಪಡಿಸಿಕೊಳ್ಳಬಹುದು. ಪಶುಪಾಲನೆಯೇ ಮುಖ್ಯ ಆರ್ಥಿಕ ಚಟುವಟಿಕೆಯನ್ನಾಗಿ ಮಾಡಿಕೊಂಡಿದ್ದ ಮಲೆಪರು ಅಥವಾ ಮಲೆಯ ಗೌಡರು ಗೋವುಗಳನ್ನು ಹೆಚ್ಚು ಸಾಕುತ್ತಿದ್ದರು. ಗೋವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಕಿದಾಗ ಅವುಗಳ ಆಹಾರಕ್ಕಾಗಿ ವಿಶಾಲವಾದ ಹುಲ್ಲುಗಾವಲು ಪ್ರದೇಶಗಳು ಬೇಕಾಯಿತು. ಅವರು ಈ ಪ್ರದೇಶದಲ್ಲಿನ ನೈಸರ್ಗಿಕವಾದ ಹುಲ್ಲುಗಾವಲುಗಳಿಗೆ ಅಟ್ಟಿಕೊಂಡು ಹೋಗಿ ಮೇಯಿಸ ತೊಡಗಿದರು. ಈ ಕ್ರಿಯೆ ನಿರಂತರವಾಗಿ ಈ ಪ್ರದೇಶದಲ್ಲಿ ನಡೆದಿರಬೇಕು. ಇದರ ಜೊತೆಗೆ ಜೀವನೋಪಾಯಕ್ಕಾಗಿ ಕುಮೆರಿ ಬೇಸಾಯವನ್ನು ಇವರು ಮಾಡಿರಬಹುದು. ಕುಮೆರಿ ಬೇಸಾಯವೂ ಸಹ ಒಂದೇ ಪ್ರದೇಶದಲ್ಲಿ ನಿರಂತರವಾಗಿ ನಡೆಯದೆ ಸ್ಥಳದಿಂದ ಸ್ಥಳಕ್ಕೆ ಬದಲಿಸುತ್ತಾ ಹೋಗುವುದರಿಂದ ಮೊದಲು ಕುಮೆರಿ ಬೇಸಾಯ ಮಾಡಿದ ಭೂಮಿಯನ್ನು ಹುಲ್ಲುಗಾವಲು ಪ್ರದೇಶವಾಗಿ ಪರಿವರ್ತನೆ ಮಾಡಿರುವ ಸಾಧ್ಯತೆಗಳಿವೆ. ಆದರೆ ಈ ಹುಲ್ಲುಗಾವಲು ಪ್ರದೇಶಗಳು ಒಬ್ಬರ ಒಡೆತನಕ್ಕೆ ಸೇರಿರದೆ ಎಲ್ಲಾ ಪಶುಪಾಲಕರು ಸಹ ತಮ್ಮ-ತಮ್ಮ ಗೋವುಗಳನ್ನು ಎಲ್ಲಾ ಹುಲ್ಲುಗಾವಲುಗಳಲ್ಲಿಯೂ ಮೇಯಿಸಿಕೊಂಡು ವಲಸೆ ಹೋಗುವವರಾಗಿದ್ದರು.

ಕ್ರಿ.ಶ. 11ನೇ ಶತಮಾನದ ಕೊನೆ ಮತ್ತು 12ನೇ ಶತಮಾನದ ಆರಂಭದಲ್ಲಿ ಕರ್ನಾಟಕಕ್ಕೆ ಯಾವಾಗ ಕೆರೆ ನೀರಾವರಿಯಿಂದ ಕೃಷಿ ಮಾಡುವ ಪದ್ಧತಿ ಬಂದಿತೋ, ಅಂದಿನಿಂದ ಮಲೆಪರು ತಮ್ಮ ಗೋವುಗಳನ್ನು ಮೇಯಿಸುತ್ತಿದ್ದ ಸಮತಟ್ಟಾದ ಹುಲ್ಲುಗಾವಲು ಪ್ರದೇಶಗಳನ್ನೆಲ್ಲ ಕೃಷಿ ಭೂಮಿಯನ್ನಾಗಿ ಮಾಡಿಕೊಂಡು ಮಿಗತ ಉತ್ಪಾದನೆ ಮಾಡಲು ಆರಂಭಿಸಿದರು. ಆದ್ದರಿಂದ ಈ ಪ್ರದೇಶದಲ್ಲಿದ್ದ ಮಲೆಯ ಗೌಡರು ಹೆಚ್ಚು ನೀರಾವರಿ ಭೂಮಿಯನ್ನು ತಮ್ಮ ಕೈಯಲ್ಲಿಯೇ ಇಟ್ಟುಕೊಂಡಿದ್ದಾರೆ. ಕೃಷಿ ಕೆಲಸಕ್ಕೆ ಮತ್ತು ತಮಗೆ ಹಾಲು

[illegible]

ಹೈನಿಗಾಗಿ ತಾವು ಮಾಡಿಕೊಂಡು ಬಂದ ಮೂಲ ವೃತ್ತಿಯಾದ ಪಶುಪಾಲನೆಯನ್ನು ಸ್ವಲ್ಪ ಕಡಿಮೆ ಪ್ರಮಾಣದಲ್ಲಾದರೂ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಸಾಕಿದ ಗೋವುಗಳಿಗೆ ಮೇಯಲು ಹುಲ್ಲುಗಾವಲು ಭೂಮಿಬೇಕಾಯಿತು. ಆಗ ಅವರು ತಮ್ಮ ಗದ್ದೆಗಳ ಮೇಲೆ ಮತ್ತು ಮಳೆ ಆಶ್ರಿತ ಭೂಮಿಯನ್ನು ಸಂಪೂರ್ಣವಾಗಿ ಕುಮರಿ (ಬೆಟ್ಟ) ಭೂಮಿಯನ್ನಾಗಿ ಮಾಡಿಕೊಂಡರು. ಈ ಕಾರಣದಿಂದಾಗಿ ಇಲ್ಲಿಯ ಮಲ್ಲಗೌಡರಿಗೆ ನೀರಾವರಿ ಕೃಷಿ ಭೂಮಿಯಷ್ಟೇ ಪ್ರಮಾಣದಲ್ಲಿ ಹುಲ್ಲುಗಾವಲು ಭೂಮಿಯಿದೆ. ಇಷ್ಟೆಲ್ಲ ಭೂಮಿಯನ್ನು ಹೊಂದಿದ ಇವರು "ಶ್ರೀಮಂತರೂ ಉದಾರಿಗಳೂ ಆಗಿರುವ ಇವರಲ್ಲಿ ಹಲವರು ಹಿಂದಿನ ದರ್ಪ, ಅಧಿಕಾರಗಳನ್ನು ಅನಧಿಕೃತವಾಗಿ ಉಳಿಸಿಕೊಂಡಿರುವುದು ಇವರೇ ಹಿಂದಿನ ಮಲಪರ ಉತ್ತರಾಧಿಕಾರಿಗಳೆಂಬುದನ್ನು ಸಮರ್ಥಿಸುತ್ತದೆ. [25]

ಮಧ್ಯಕಾಲಕ್ಕಾಗಲೇ ಸೊರಬ ಪ್ರದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಇಷ್ಟೆಲ್ಲಾ ಬದಲಾವಣೆಗಳಾದರೂ ಸಹ ಸಾಂಸ್ಕೃತಿಕ ಅನನ್ಯತೆಗಾಗಿ ಹೋರಾಡುತ್ತಾ ತಮ್ಮ ಜೀವನವನ್ನು ಕಾಡಿನಲ್ಲಿಯೇ ನಡೆಸುತ್ತಿದ್ದ ಬೇಡರು ಈ ವೇಳೆಗೆ ತಮ್ಮ ಕಾರ್ಯವನ್ನು ಬೇರೆ ರೀತಿಯಲ್ಲಿ ಆರಂಭಿಸಿರುವುದನ್ನು ಕಾಣುತ್ತೇವೆ. ಅಂದರೆ ಪಶುಪಾಲನೆಯೇ ಹೆಚ್ಚಾಗಿದ್ದ ಈ ಪ್ರದೇಶದಲ್ಲಿ ಬೇಡರು ಆರಂಭದಲ್ಲಿ ಗೋವುಗಳನ್ನು ಕದಿಯುತ್ತಿದ್ದರು. ಆದರೆ ಕ್ರಿ.ಶ. 1158 ರ ವೇಳೆಗೆ ಅವರು ಗೋವುಗಳನ್ನು ಕದಿ ಯುವುದನ್ನು ಬಿಟ್ಟು ವ್ಯವಸಾಯೋತ್ಪನ್ನಗಳನ್ನು ಕದಿಯಲು ಆರಂಭಿಸಿದರು. ಆದ್ದರಿಂದ ದಾರಿಯಲ್ಲಿ ಅಡ್ಡಗಟ್ಟಿ ಅವರ ಮೇಲೆ ಎರಗಿ ಲೂಟಿಮಾಡುತ್ತಿದ್ದರು. ಇದನ್ನು ನಯಸೇನನು ಬಟ್ಟೆಗಟ್ಟೆ ಬಡಿವ ಬೇಡರ್ [26] ಎಂದು ಹೇಳುತ್ತಾನೆ. ಘಟ್ಟ ಪ್ರದೇಶದಲ್ಲಿ ಕಳ್ಳರು ಹೆಚ್ಚಾಗಿ ದಾರಿಗಟ್ಟಿ ಲೂಟಿ ಮಾಡುತ್ತಿದ್ದರೆಂದು ಶೇಷಶಾಸ್ತ್ರಿಯವರು [27] ತಿಳಿಸುತ್ತಾರೆ. ಈ ಎಲ್ಲಾ ಹಿನ್ನಲೆಯಲ್ಲಿ ನೋಡಿದಾಗ ಮಲೆನಾಡಿನಿಂದ ಕೂಡಿದ ಪ್ರದೇಶದಲ್ಲಿ ಬೇಡರು ಹೆಚ್ಚು ವಾಸಿಸುತ್ತಿದ್ದರೆಂಬುದಂತೂ ಸ್ಪಷ್ಟ. ಮಲೆನಾಡು ದುರ್ಗಮವಾದ ಕಾಡು ಮತ್ತು ಬೆಟ್ಟಗುಡ್ಡಗಳು ಕಳ್ಳತನ ಮಾಡಲು ಅನುವಾಗುವ ಆಯಾಕಟ್ಟಿನ ಜಾಗವೆಂಬುದು ನಿಜ. ತದನಂತರ ಬೇಡರ ಬೇಟೆಗಾರಿಕೆಗೆ ಬೇಕಾದ ಕಾಡೆಲ್ಲಾ ನಾಶವಾದಾಗ ಜೀವನೋಪಾಯಕ್ಕಾಗಿ ಕಳ್ಳತನ ಮಾಡುವ ಅನಿವಾರ್ಯತೆ ಉಂಟಾಗಿರಬಹುದು.

[illegible]

[illegible]

ಈ ಎಲ್ಲಾ ಅಂಶಗಳ ಹಿನ್ನಲೆಯಿಂದ ಕಳ್ಳರು ಎಂದರೆ ಬೇಡರೆಂಬುದಾಗಿ ಗುರುತಿಸಬಹುದು. ಹಾಗೆಯೇ ಅವರ ಗುಂಪಿನಲ್ಲಿನ ಸಂಖ್ಯೆ ಮತ್ತು ಅವರು ಬಳಸುವ ಆಯುಧಗಳೂ ಸಹ ಅಷ್ಟೇ ಪ್ರಮುಖ. ಬೇಡಕಳ್ಳರು ಎರಗುವ ಸ್ಥಳದ ಬಗ್ಗೆ ನೋಡಿದಾಗ ಬಂದಳೆಯ ಹಳ್ಳದ ಹತ್ತಿರ ಕಳ್ಳರು ಬಂದು ಎದುರಾಗಿ ಎರಗಿದಾಗ,[28] "ಬಟ್ಟೆಯಲ್ಲಿ ಬರುವಾಗ [29], ಎಂದು ತಿಳಿಯುತ್ತದೆ. ನಂತರ ಅವರ ಸಂಖ್ಯೆಯನ್ನು ಹೇಳುತ್ತಾ ಅವರು ಗುಂಪು ಗಳಾಗಿದ್ದರು ಎಂಬುದಕ್ಕೆ '10 ಕಳ್ಳರ ಜೊತೆ ಕಾದುತ್ತಿರುವಾಗ' [30] ಎಂದು ಉಲ್ಲೇಖವಾಗಿದ್ದರೆ, ಅವರ ಆಯುಧಗಳ ಬಗ್ಗೆ ಶಾಸನಗಳು 'ಕಳ್ಳರೊಡನೆ ಹೋರಾಡಿ ಅವರ ಬಾಣಗಳಿಂದ ಗಾಸಿಗೊಂಡು [31] ಎಂದು ಹೇಳುತ್ತದೆ. ಈ ಎಲ್ಲಾ ಮಾಹಿತಿಗಳಿಂದ ನಮಗೆ ಬೇಡರೇ ಕಳ್ಳತನ ಮಾಡಲು ಆರಂಭಿಸಿರಬೇಕು ಎಂದು ತಿಳಿಯುತ್ತದೆ. ಇದಕ್ಕೆ ಪುಷ್ಟಿ ನೀಡುವ ಇನ್ನೊಂದು ವೀರಗಲ್ಲಿನ ಶಾಸನ ತಿಳಿಸುವಂತೆ ಗದ್ದೆಯಲ್ಲಿ ಬಿತ್ತನೆ ಮಾಡುವಾಗ ಕಳ್ಳರು ಬಂದು ದಾಳಿ ಮಾಡಿ ಬಿತ್ತುವ ಬೀಜವನ್ನೇ ಕದ್ದುಕೊಂಡು ಹೋಗುತ್ತಾರೆ.[32] ಇದು ಕಾಡು ಕೃಷಿಭೂಮಿಯಾಗಿ ಪರಿವರ್ತನೆ ಹೊಂದುವುದರ ವಿರುದ್ಧ ಪ್ರತಿಭಟನೆ ಬೇಡರದೆಂಬುದು ಸ್ಪಷ್ಟ. ನಾಡಿನ ಜನರು ತಮ್ಮ ಕ್ಷೇತ್ರದಲ್ಲಿ ಕೃಷಿ ಭೂಮಿಯನ್ನು ಮಾಡುವುದರ ಮೂಲಕ ನಾಡಿನ ಸಂಸ್ಕೃತಿಯನ್ನು ಹರಡಲು ಪ್ರಯತ್ನಿಸುತ್ತಿರುವರೆಂಬ ಅರಿವು ಅವರಿ ಗಾಗಿದ್ದರಿಂದ ಈ ಕಾರ್ಯವನ್ನು ಮಾಡಿದಂತೆ ಕಾಣುತ್ತದೆ. ನಾಡಿನ ಜನರು ಕಾಡಿನತ್ತ ಪ್ರವೇಶಿಸುವುದನ್ನು ಬೇಡರು ಒಂದು ಸಂಸ್ಕೃತಿಯ ವಿಸ್ತರಣೆ ಎಂದು ತಿಳಿದು ತಾವು ಅದಕ್ಕೆ ಪರಿವರ್ತನೆಯಾಗುವುದನ್ನು ಬಿಟ್ಟು ಕಳ್ಳರಾಗಿ ವ್ಯವಸಾಯೋತ್ಪನ್ನಗಳನ್ನು ಕದಿಯುವುದರಿಂದ ಮಾತ್ರ ತೃಪ್ತರಾದಂತೆ ಕಾಣುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚು ಪಶುಪಾಲನೆಯನ್ನೇ ಮಾಡಿರುವುದರಿಂದ ಕೆರೆ ಕಟ್ಟಿ ನೀರಾವರಿ ಕೃಷಿ ಮಾಡುವ ಪದ್ಧತಿ ಕಡಿಮೆ ಪ್ರಮಾಣದಲ್ಲಿದ್ದಂತೆ ಕಂಡು ಬರುವುದು. ಆದ್ದರಿಂದ ಈ ಸಮಯದಲ್ಲಿ ಆರ್ಥಿಕವಾಗಿ ಮುಂದುವರೆದಿದ್ದ ಮೇಲ್ವರ್ಗವು ದಾನ ಕೊಡುವ ಸಮಯ ಬಂದಾಗ ಹೆಚ್ಚಾಗಿ ಗೋವುಗಳನ್ನೇ ದಾನ ಕೊಡುತ್ತಿದ್ದರು ಜೊತೆಗೆ ಬಾವಿಗಳನ್ನು ಕಟ್ಟಿಸುತ್ತಿದ್ದರು[33]. ಈ ಬಾವಿಯ ಸಾರ್ವಜನಿಕರಿಗೆ, ಪ್ರಾಣಿಗಳಿಗೆ ಮತ್ತು ದೇವಾಲಯಕ್ಕೆ ಬೇಕಾದ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವಷ್ಟು ಮಾತ್ರ ದೊಡ್ಡದಾಗಿರುತ್ತಿತ್ತು. ಆದ್ದರಿಂದ ಸೊರಬ ತಾಲ್ಲೂಕಿನಾದ್ಯಂತ ಪ್ರಾಚೀನ ಕಾಲದ ಹಳ್ಳಿಗಳಿದ್ದಲ್ಲಿ ದೊಡ್ಡ-ದೊಡ್ಡ ಬಾವಿಗಳು ಹೆಚ್ಚು ಸಂಖ್ಯೆಯಲ್ಲಿ ಕಂಡು ಬರುತ್ತವೆ.

[illegible]

[illegible]

ಕ್ರಿ.ಶ. 11 ಮತ್ತು 12ನೇ ಶತಮಾನದ ನಂತರ ಕೃಷಿ ನೀರಾವರಿಗಾಗಿಯೇ ಕೆರೆಗಳನ್ನು ಕಟ್ಟಿಸುವುದನ್ನು ಮತ್ತು ದುರಸ್ತಿ ಮಾಡುತ್ತಿದ್ದುದನ್ನು[34] ಶಾಸನಗಳಲ್ಲಿ ಉಲ್ಲೇಖವಾಗಿದೆ. ಕೃಷಿ ಅಭಿವೃದ್ಧಿ ಹೊಂದುತ್ತಿದ್ದಂತೆ ಹೆಚ್ಚುವರಿ ಉತ್ಪಾದನೆ ಮಾಡುವುದಕ್ಕಾಗಿ ಗೋವುಗಳ ಸಗಣಿಯನ್ನು ಗೊಬ್ಬರಕ್ಕೆ[35] ಬಳಸುವುದಕ್ಕಾಗಿ ಬೀದಿಯಲ್ಲಿ ಸಗಣಿ ಹಿಡಿಯುತ್ತಿದ್ದುದನ್ನು ಶಾಸನವೊಂದು ತಿಳಿಸುತ್ತದೆ. ಈ ಒಂದು ಆರ್ಥಿಕ ಚಟುವಟಿಕೆ ಆರಂಭವಾಗುತ್ತಿದ್ದಂತೆ ಫಲವತ್ತಾದ ಮತ್ತು ಕೃಷಿಯೋಗ್ಯ ಒಣ ಭೂಮಿಗೆ ನೆರೆಯ ಊರಿನಿಂದ ಕಾಲುವೆಯ ಮೂಲಕ ನೀರನ್ನು ತೆಗೆದುಕೊಂಡು ಬಂದು ನೀರನ್ನು ಹಾಯಿಸ ತೊಡಗಿದರು.[36] ಇದು ಈಗಾಗಲೇ ಮಳೆ ಆಶ್ರಿತ ಬೆಳೆ ಬೆಳೆಯುವ ಭೂಮಿಯೋ ಅಥವಾ ಹುಲ್ಲುಗಾವಲು ಪ್ರದೇಶವೋ ಆಗಿರಬಹುದು. ಆದರೆ ತದನಂತರದಲ್ಲಿ ಕೃಷಿಗೆ ಯೋಗ್ಯವಾದ ಭೂಮಿ ಆಗಿದ್ದರೂ ಅದು ಕಾಡಿನಿಂದ ಕೂಡಿದಾಗ ಅಂಥ ಭೂಮಿಯನ್ನು ನೀರಾವರಿ ಕೃಷಿ ಭೂಮಿಯನ್ನಾಗಿ ಮಾಡುವ ಉದ್ದೇಶದಿಂದ ಮೊದಲು ಕೆರೆಯನ್ನು ಕಟ್ಟಿಸಿ ಅದರ ಕೆಳಗಿನ ಕಾಡನ್ನು ಸಂಪೂರ್ಣವಾಗಿ ಕಡಿದು ಹಸನು ಮಾಡಿ ಹೊಸದಾಗಿ ಉಳುಮೆ ಮಾಡಿ ಬೀಜವನ್ನು ಬಿತ್ತಿ ಬೆಳೆಯನ್ನು ತೆಗೆಯುವುದನ್ನು ಶಾಸನಗಳಿಂದ ತಿಳಿದು ಬರುತ್ತದೆ.[37]

ಹೀಗೆ ಫಲವತ್ತಾದ ಭೂಮಿಯು ಕೃಷಿ ಆರ್ಥಿಕ ಚಟುವಟಿಕೆಯ ಪರಿವರ್ತನೆಗೆ ಕಾರಣವಾಯಿತು. ಮಧ್ಯಕಾಲದ ಅವಧಿಯಲ್ಲಿ ಬೆಳೆಯುತ್ತಿದ್ದ ಬೆಳೆಗಳನ್ನೇ ಬಹುಶ: ಈಗಲೂ ಈ ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ. ಗದ್ದೆಗಳಲ್ಲಿ ಮುಖ್ಯವಾಗಿ ಬತ್ತ[38] ಮತ್ತು ಕಬ್ಬನ್ನು[39] ಬೆಳೆಯುತ್ತಿದ್ದರು. ಬತ್ತ ಬೆಳೆಯಲು ತುಂಬ ಪ್ರಸಿದ್ಧವಾದ ಈ ಪ್ರದೇಶದಲ್ಲಿ ಅಂದು ಕರ್ನಾಟಕದಾದ್ಯಂತ ಬೆಳೆಯುತ್ತಿದ್ದು ವಿಶೇಷವಾದ ಗಂಧಸಾಲಿ[40] (ವಾಸನೆ ಬತ್ತ) ಎಂಬ ಬತ್ತ ಬೆಳೆಯುತ್ತಿದ್ದುದನ್ನು ಶಾಸನಗಳು ತಿಳಿಸುತ್ತವೆ. ಕೆರೆಗಳ ನೀರಿನ ಆಶ್ರಯದಿಂದಲೂ, ಬಾವಿಯ ನೀರಿನ ಆಶ್ರಯದಿಂದಲೂ ಬದುಕುತ್ತಿದ್ದ ತೋಟಗಳಲ್ಲಿ ಅಡಿಕೆ[41], ವಿಳ್ಯದೆಲೆ[42]ಗಳನ್ನು ಬೆಳೆಯುತ್ತಿದ್ದರು. ಅಲ್ಲದೆ ಈ ಪ್ರದೇಶದಲ್ಲಿ ಹೂದೋಟಗಳನ್ನು ಕೂಡ ಶಾಸನಗಳು ಹೆಸರಿಸುತ್ತವೆ.[43]

ಕೆರೆ ನೀರಾವರಿಯಿಂದ ಸೊರಬ ಪ್ರದೇಶದ ಫಲವತ್ತಾದ ಹೆಚ್ಚಿನ ಹುಲ್ಲುಗಾವಲುಗಳು ಬತ್ತದ ಭೂಮಿಗಳಾಗಿ ಪರಿವರ್ತನೆಗೊಂಡವು. ಆದರೆ ಕೃಷಿ ಕೆಲಸ ಹೆಚ್ಚಿನ ಶ್ರಮದಿಂದ ಕೂಡಿದ ಆರ್ಥಿಕ ಚಟುವಟಿಕೆಯಾಗಿದ್ದು, ಅಂತಹ ಕೆಲಸವನ್ನು ಮಾಡಲು ಎತ್ತುಗಳು ಬೇಕಾಯಿತು. ಜೊತೆಗೆ ಕೃಷಿಯಲ್ಲಿ ಹೆಚ್ಚಿನ

[illegible]

[illegible]

[illegible]

[illegible]

ಇಳುವರಿ ತೆಗೆಯಲು ಸಗಣಿಗೊಬ್ಬರದ ಅವಶ್ಯ ಕತೆಯೂ ಇದ್ದುದರಿಂದ ಎಲ್ಲಾ ಕೃಷಿಕ ಕುಟುಂಬಿಗಳು ಗೋವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿಯೇ ಸಾಕ ತೊಡಗಿದರು. ಈ ಅವಶ್ಯಕತೆಯನ್ನು ನೀಗಿಸಲು ಗೋಮಾಳಗಳನ್ನು ದಾನ ಕೊಡುವುದನ್ನು ಶಾಸನವೊಂದು ತಿಳಿಸುತ್ತದೆ.[44].ಆದ್ದರಿಂದ ಪ್ರತಿಯೊಂದು ಹಳ್ಳಿಗಳು ಸಾರ್ವತ್ರಿಕವಾದ ಹುಲ್ಲುಗಾವಲುಗಳನ್ನು ಹೊಂದಿದ್ದವು.[45] ಇದೇ ಮಾತನ್ನು ವಿಜ್ಞಾನೇಶ್ವರ ಹೇಳಿರುವುದನ್ನು ಚಿದಾನಂದ ಮೂರ್ತಿಯವರು[46] ಗುರುತಿಸಿದ್ದಾರೆ. (ಈಗಲೂ ಈ ಪ್ರದೇಶದಲ್ಲಿ ಸುಮಾರು 49 ಸಾವಿರ ಎಕರೆ ಗೋಮಾಳವಿದೆ).

ಮೇಲೆ ತಿಳಿಸಿದಂತೆ ಬತ್ತದ ಕೃಷಿಯು ಹೆಚ್ಚಿನ ಶ್ರಮದ ಕೆಲಸವಾದ್ದರಿಂದ ಹೆಚ್ಚಿನ ಮಾನವ ಶಕ್ತಿಯೂ ಬೇಕಾಯಿತು. ಸಾಮಾನ್ಯವಾಗಿ ಇಂತಹ ಕೆಲಸವನ್ನು ಮಾಡಲು ಅಂದು ಇದ್ದಂತಹ ಕೆಳವರ್ಗದ ಜನರು ಮೇಲ್ವರ್ಗಗಳ ಕೃಷಿ ಆರ್ಥಿಕ ಚಟುವಟಿಕೆಯ ಕಾರ್ಮಿಕರಾಗಿ ಕೆಲಸ ನಿರ್ವಹಿಸ ತೊಡಗಿದರು. ಇದನ್ನು ನಾವು ವೀರಗಲ್ಲುಗಳಲ್ಲಿ ಬರುವ "ಆಳು"[47] ಮತ್ತು "ಗಾಯಿಗ"[48] ಎಂಬ ವೃತ್ತಿ ಸೂಚಕ ಪದಗಳಿಂದ ಗುರುತಿಸಬಹುದು. ಇಲ್ಲಿಂದ ಆರ್ಥಿಕ ತಾರತಮ್ಯ ವುಂಟಾಗಿ ಆರ್ಥಿಕವಾಗಿ ಮೇಲ್ವರ್ಗದಲ್ಲಿದ್ದವರು ತಮ್ಮ ಕೃಷಿ ಭೂಮಿಯಲ್ಲಿ ಕೆಲಸ ಮಾಡುವುದಕ್ಕಾಗಿ ಕೆಳವರ್ಗವನ್ನು ಅವಲಂಬಿಸಿದರೆ, ತಮ್ಮ ಜೀವನೋಪಾಯಕ್ಕಾಗಿ ಕೆಳವರ್ಗಗಳು ಮೇಲ್ವರ್ಗವನ್ನು ಅವಲಂಬಿಸುವುದು ಅನಿವಾರ್ಯ ವಾಯಿತು. ಇನ್ನೂ ಕೆಲವರು ಮೇಲ್ವರ್ಗದವರ ಭೂಮಿಯನ್ನು ಗೇಣಿಗಾಗಿ ಮಾಡಿರಲೂಬಹುದು. ಹೀಗೆ ಬೇರೆ ಬೇರೆ ಕಾರಣಗಳಿಗಾಗಿ ಕೆಳವರ್ಗಗಳು ಮೇಲ್ವರ್ಗದವರ ಅಡಿಯಾಳುಗಳಾದಾಗ ಅವರನ್ನು ತಮ್ಮ ಎಲ್ಲಾ ಕೆಲಸ ಕಾರ್ಯಗಳಿಗೂ ಬಳಸಿಕೊಂಡರು. ಆದ್ದರಿಂದ ಕೆರೆ ನೀರಾವರಿ ಕೃಷಿ ವ್ಯವಸ್ಥೆ ಈ ಪ್ರದೇಶದಲ್ಲಿ ಹೆಚ್ಚುತ್ತಿದ್ದಂತೆಯೇ ವೀರಗಲ್ಲುಗಳ ಸಂಖ್ಯೆಯೂ ಸಹ ಹೆಚ್ಚಿದಂತೆ ಕಂಡು ಬರುತ್ತದೆ. ಇದಕ್ಕೆ ಕಾರಣ ಬಹುಶ: ಹೆಚ್ಚಿನ ಖಾಸಗಿ ಆಸ್ತಿಯ ಒಡೆತನ ಮತ್ತು ಹೆಚ್ಚುವರಿ ಉತ್ಪಾದನೆ ಮಾಡುವ ಉದ್ದೇಶವನ್ನು ಹೊಂದಿದ ಮೇಲ್ವರ್ಗವು ಕಾರ್ಮಿಕರನ್ನು ತಮ್ಮ ಆಸ್ತಿಯ ರಕ್ಷಣೆಯಂತಹ ಕೆಲಸಕ್ಕೆ ಬಳಸಿಕೊಂಡಿರುವದೇ ಆಗಿರಬೇಕು.

ಹೀಗೆ ಸೊರಬ ಪ್ರದೇಶದಲ್ಲಿ ಆದ ಆರ್ಥಿಕ ಸ್ಥಿತ್ಯಂತರದಿಂದಾಗಿ ಖಾಸಗಿ ಆಸ್ತಿಯ ಮತ್ತು ಹೆಚ್ಚುವರಿ ಉತ್ಪಾದನೆ ಮಾಡುವ ಕಲ್ಪನೆಯು ಬಂದಿತು. ಆದ್ದರಿಂದ ಮಧ್ಯಕಾಲದಲ್ಲಿ ಈ ಸಂಪತ್ತನ್ನು ದೋಚುವ ಕ್ರಿಯೆ

[illegible]

ಹೆಚ್ಚು ಆರಂಭವಾಯಿತು.ಸಂಪತ್ತಿನ ರಕ್ಷಣೆಗಾಗಿ ನಡೆದ ಕಾಳಗದಿಂದಾಗಿ ಹೆಚ್ಚು ವೀರಗಲ್ಲುಗಳು ಬರಲು ಸಹ ಕಾರಣವಾಗಿದೆ.

ಅಡಿಟಿಪ್ಪಣಿಗಳು

1. ಚಿದಾನಂದ ಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-295.
2. ಎ.ಕ. VIII., ಸೊರಬ, 184, ಕ್ರಿ.ಶ.1033, ಕುಪ್ಪಗದ್ದೆ
3. ಚಿದಾನಂದ ಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-295.
4. ಅದೇ ಪುಟ -296.
5. Ec Vol VIII; ಸೊರಬ 240,954 ಚಿಕ್ಕಚೌಟ.
6. ಅದೇ, ಸೊರಬ 10, 800 ಮಾವಲಿ.
7. ಅದೇ, ಸೊರಬ 167,1445 ಹಾರೂರು.
8. ಶಂಬಾಜೋಷಿ, 1970, ಹಾಲುಮತದರ್ಶನ
9. Ec VIII ಸೊರಬ 83, 941 A.D.
10. ಈ ವಿಷಯವನ್ನು ಶ್ರೀ ಎಸ್. ರಾಜೇಂದ್ರಪ್ಪನವರು ತಿಳಿಸಿದ್ದಾರೆ.
11. ಈ ವಿಷಯವನ್ನು ಡಾ. ರಾಜಾರಾಮ ಹೆಗಡೆ ತಿಳಿಸಿದ್ದಾರೆ.
12. Ec VIII ಸೊರಬ 359,1129 ಲಕ್ಕವಳ್ಳಿ.
13. ಅದೇ; ಸೊರಬ 299, 1074 ತೊರವಾರ .
14. ಅದೇ; ಸೊರಬ 549, 1091 ಶಿಗ್ಗ.
15. ಅದೇ; ಸೊರಬ 379, 1533 ಹುರಳಿಗ್ರಾಮ.
16. Ec VIIIಸೊರಬ 359, 1129 ಲಕ್ಕವಳ್ಳಿ.
17. ಅದೇ; ಸೊರಬ 289,1138 ದೇವಸ್ಥಾನದ ಹಕ್ಕಲು.
18. ಅದೇ; ಸೊರಬ 6, 1165 ಮಾವಲಿ.

19. ಅದೇ; ಸೊರಬ 503, 1289 ನಿಸರಾಣಿ.

20. EC VIII, ಸೊರಬ 233, 1139 ಉದ್ರಿ.

21. ಅದೇ; ಸೊರಬ 240, 954 ಚಿಕ್ಕಚೌಟ.

22. ಅದೇ; ಸೊರಬ 202 955 ಬೆಟ್ಟದ ಕೂರಲಿ.

23. ಅಂಬಳಿಕೆ ಹಿರಿಯಣ್ಣ ಸೈದ್ಧಾಂತಿಕ ಜಾನಪದಗಳು ಪುಟಗಳು-1-46.

24. ಚಿದಾನಂದ ಮೂರ್ತಿ,.ಎಂ., 1969 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-297.

25. ಅದೇ; ಪುಟ. 297

26. ಅದೇ; ಪುಟ-295.

27. ಶೇಷಶಾಸ್ತ್ರಿ, ಕರ್ನಾಟಕದ ವೀರಗಲ್ಲುಗಳು, -116.

28. EC VIII; ಸೊರಬ 224, ಕ್ರಿ.ಶ. 1219 ಗೆಂಡ್ಲ.

29. ಅದೇ; ಸೊರಬ 228, 1220 ದ್ಯಾವನಹಳ್ಳಿ.

30. ಅದೇ; ಸೊರಬ 189; 1283 ಸಾರೇಕೊಪ್ಪ.

31. ಅದೇ; ಸೊರಬ 168 1416 ಹಾರೂರು.

32. ಅದೇ; ಸೊರಬ 169 1453 ಹಾರೂರು.

33. M.A.R.1929 ಸೊರಬ 78,ಕ್ರಿ.ಶ. 964 ಬೆಳಾಗಿ

34. ಎ.ಕ. VIII ಸೊರಬ 468, ಕ್ರಿ.ಶ. 1112 ಕುಂಟಗಳಲೆ.

35. ಎ.ಕ. VIII ಸೊರಬ. 249 ಕ್ರಿ.ಶ. 1065 ಕುಬಟೂರು.

36. ಅದೇ, ಸೊರಬ 359 ಕ್ರಿ.ಶ. 1129 ಬೆನ್ನೂರು (ಆನವಟ್ಟಿ ಹೊ).

37. ಅದೇ, ಸೊರಬ 317, ಕ್ರಿ.ಶ. 1071 ಲಕ್ಕವಳ್ಳಿ.

38. ಅದೇ, ಸೊರಬ 5, ಕ್ರಿ.ಶ. 1130 ಮಾವಲಿ, 30 ಕ್ರಿ.ಶ. 1193, ಸೊರಬ, 32, ಕ್ರಿ.ಶ.1176. ಹಿರೇಶಕುನ, 160 ಕ್ರಿ.ಶ. 1282ಬಿದಿರಗೇರೆ, 192, ಕ್ರಿ.ಶ.1290, ಸಾರೆಕೊಪ್ಪ.

39. ಎ.ಕ. VIII ಸೊರಬ 175, ಕ್ರಿ.ಶ.1156, ಕೊರಕೊಡು; 527, ಕ್ರಿ.ಶ.1475, ಕಾಸರಗುಪ್ಪೆ.

40. ಎ.ಕ. VIII ಸೊರಬ 138, ಕ್ರಿ.ಶ.1145, ಉದ್ರಿ; 249 ಕ್ರಿ.ಶ.1065, ಕುಬಟೂರು,262, ಕ್ರಿ.ಶ.1077, ಕುಬಟೂರು.

41. ಎ.ಕ. VIII ಸೊರಬ 325, ಕ್ರಿ.ಶ.1178, ಬಾರಂಗಿ..

42. Kuppuswamy. G.R.- Economic Conditions in Karnatak- -63.

43. ಎ.ಕ. VIII ಸೊರಬ 321, ಕ್ರಿ.ಶ. 1242 ತುಡನೀರು ಗ್ರಾಮ.

44. ಅದೇ; ಸೊರಬ 233, ಕ್ರಿ.ಶ. 1139, ಉದ್ರಿ.

45. ಲಕ್ಷ್ಮಣ ತೆಲಗಾವಿ (ಸಂ) ಹರತಿಸಿರಿ; ಪು.432.

46. ಚಿದಾನಂದ ಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. 367.

47. ಎ.ಕ. VIIIಸೊರಬ 30, ಕ್ರಿ.ಶ. 1193 ಸೊರಬ 221 ಕ್ರಿ.ಶ. 1231, ಕಾತೂರು 568, ಕ್ರಿ.ಶ. 1162, ಬೈರೇಕೊಪ್ಪ

48. ಎ.ಕ. VIIIಸೊರಬ 531, ಕ್ರಿ.ಶ. 967, ಹುನವಳ್ಳಿ; 454, ಕ್ರಿ.ಶ. ಬೆನ್ನೂರು (ಆನವಟ್ಟಿ ಹೊ).

ಅಧ್ಯಾಯ:5

ಸಾಮಾಜಿಕ ವಿವರಗಳು

5.1. ವ್ಯಕ್ತಿ ನಾಮಗಳು

5.2. ಜಾತಿ ಮತ್ತು ವೃತ್ತಿ

5.3. ವೀರ ಹಾಗೂ ಮಹಾಸತಿ ಕಲ್ಲುಗಳು ಮತ್ತು ಪಾರಲೌಕಿಕ ಕಲ್ಪನೆ :
ಸಾಮಾಜಿಕ ಸಂದರ್ಭದ ವಿಶ್ಲೇಷಣೆ

ಒಂದು ಸಮಾಜದ ರಚನೆ ಅಲ್ಲಿಯ ಆರ್ಥಿಕ ಚಟುವಟಿಕೆಯ ಹಿನ್ನಲೆಯಲ್ಲಿ ರಚಿತವಾಗಿರುತ್ತದೆ. ಅದರ ಜೊತೆಗೆ ಅಲ್ಲಿಯ ಧಾರ್ಮಿಕ ಆಚರಣೆಗಳೂ ಸಹ ಪ್ರಮುಖ ಪಾತ್ರವಹಿಸುತ್ತವೆ. ಇವುಗಳೆರಡರ ಆಧಾರದ ಮೇಲೆ ಸಮಾಜದವೊಂದು ರಚನೆಗೊಳ್ಳುತ್ತದೆ. ಆರಂಭದಲ್ಲಿ ವೃತ್ತಿ ಮತ್ತು ಉಪ-ವೃತ್ತಿಗಳು ಬೆಳೆಯುತ್ತವೆ. ತದನಂತರದಲ್ಲಿ ಆಯಾವೃತ್ತಿ ಮಾಡುವವರು ಆಯಾ ಜಾತಿಗಳಾಗಿ ಪರಿವರ್ತನೆಯಾಗುವುದನ್ನು ಗುರುತಿಸಬಹುದು. ಹೀಗೆ ಬೆಳೆದ ಒಂದು ಸಮಾಜದಲ್ಲಿ ವರ್ಣಾಶ್ರಮ ಧರ್ಮದ ಪರಿಕಲ್ಪನೆ ಇದ್ದು ಅದನ್ನು ಆರಂಭದ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಣುತ್ತವೆ. ಅದನ್ನು ರಾಜ್ಯದ ರಾಜನಾದವನು ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರಬೇಕಾಗಿದ್ದಿತು. ಇದರ ಜೊತೆಗೆ ಊರಿನ ಪಕ್ಕದಲ್ಲಿ ಅಥವಾ ಕಾಡಿನ ಅಂಚಿನಲ್ಲಿ ವಾಸಿಸುವ ಬುಡಕಟ್ಟು ಜನರ ವೃತ್ತಿಗಳ ಆಧಾರದ ಮೇಲೆ ಅವರ ಜಾತಿಗಳು ಸೃಷ್ಟಿಯಾಗುತ್ತವೆ.

ಪ್ರಾಚೀನ ಕಾಲದಲ್ಲಿದ್ದ ವರ್ಗ ವ್ಯವಸ್ಥೆಯನ್ನೇ ಬಿಗಿಗೊಳಿಸಿ ವರ್ಣ ವ್ಯವಸ್ಥೆ ಎಂದು ಗುರುತಿಸಲಾಗಿತ್ತು. ಆದರೆ ಯಾವುದೋ ಜಾತಿಯ ಜನರು ಯಾವುದೋ ವೃತ್ತಿಯನ್ನು ಮಾಡಲು ಯಾವಾಗ ಆರಂಭಿಸಿದರೋ ಆಗ ಸಮಾಜದಲ್ಲಿ ಸಂಕೀರ್ಣ ವ್ಯವಸ್ಥೆ ಉಂಟಾಯಿತು. ಹೀಗಿರುವಾಗ ಒಂದು ಸಮಾಜದ ರಚನೆಯನ್ನು ಹೀಗೆಯೇ ಎಂದು ಹೇಳುವುದು ಕಷ್ಟ ಸಾಧ್ಯವಾಯಿತು.

5.1. ವ್ಯಕ್ತಿನಾಮಗಳು

ಒಂದು ಪ್ರದೇಶದಲ್ಲಿ ಬರುವ ವ್ಯಕ್ತಿನಾಮಗಳು ಆಯಾ ಪ್ರದೇಶದ ಆರ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ರಚನೆಯಿಂದ ಬಂದಿರುತ್ತವೆ. ಮತ್ತು ಆ ಪ್ರದೇಶದಲ್ಲಿ ನಡೆಯುತ್ತಿದ್ದ ಧಾರ್ಮಿಕ ದೈವಾಚರಣೆಯನ್ನು ಸಹ ಅವಲಂಬಿಸಿರುತ್ತದೆ. ಕೃಷಿ, ಪಶುಸಂಗೋಪನೆ ಮತ್ತು ಬುಡಕಟ್ಟು ಜನರ ಬೇಟೆಯಂತಹ ಆರ್ಥಿಕ ಚಟುವಟಿಕೆ ಹೆಚ್ಚು ನಡೆಯುತ್ತಿದ್ದಂತಹ ಪ್ರದೇಶದಲ್ಲಿ ಸಾಮಾನ್ಯವಾಗಿ ಶೂದ್ರದೇವತೆಗಳ ಆರಾಧನೆ ಹೆಚ್ಚಾಗಿ ಕಂಡುಬರುತ್ತದೆ. ಕೃಷಿ ಮಾಡುವವರು ಕಾಳಿಗಳಂತಹ ಹೆಣ್ಣುದೇವತೆಗಳನ್ನು ಪೂಜಿಸಲ್ಪಟ್ಟರೆ, ಪಶುಸಂಗೋಪನಾ ಸಮಾಜದವರು ದುರ್ಗಿ ಮತ್ತು ಭೂತಗಳನ್ನು, ಬೇಡ ಜನಾಂಗದವರು ಬನಶಂಕರಿ ಮತ್ತು ಬಿಲ್ಲೇಶ್ವರ ಎಂಬ ದೇವತೆಗಳನ್ನು ಆರಾಧಿಸುತ್ತಾರೆ. ಮಧ್ಯಕಾಲೀನ ಸೊರಬ ಪ್ರದೇಶದ ಹೆಸರುಗಳನ್ನು ನೋಡಿದರೆ ಇಂತಹ ದೇವತೆಗಳ ಹೆಸರನ್ನೇ ಹೋಲುವಂತಹ ವ್ಯಕ್ತಿನಾಮಗಳು ಕಂಡುಬರುತ್ತವೆ. ಕೃಷಿ, ಪಶುಪಾಲನೆ ಮತ್ತು

[illegible]

[illegible]

[illegible]

[illegible]

[illegible]

ಬೇಟೆಗಾರಿಕೆಯಂತಹ ಆರ್ಥಿಕ ಚಟುವಟಿಕೆಯನ್ನು ಮಾಡುತ್ತಿದ್ದಂತಹ ಜನ ಸಮೂಹ ಈ ಪ್ರದೇಶದಲ್ಲಿ ಇದ್ದಿರಬಹುದು. ಇಲ್ಲಿ ಎಲ್ಲಾ ವ್ಯಕ್ತಿನಾಮಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅಸಾಧ್ಯ. ಕಾರಣ ಮಧ್ಯಕಾಲೀನ ಸಮಾಜದಲ್ಲಿ ಜಾತಿ ವ್ಯವಸ್ಥೆ ಸಂಪೂರ್ಣ ಕುಸಿದು ಸಂಕೀರ್ಣವಾದ ಸಮಾಜ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಂತೆ ಕಾಣುತ್ತದೆ. ಆದ್ದರಿಂದ ಸೊರಬ ಪ್ರದೇಶದಲ್ಲಿ ಕಾಣಸಿಗುವ ಎಲ್ಲಾ ವ್ಯಕ್ತಿನಾಮಗಳನ್ನು ಚರ್ಚಿಸಲು ಸಾಧ್ಯವಿಲ್ಲ. ಅನುಬಂಧ ಎರಡರಲ್ಲಿ ಮಧ್ಯಕಾಲೀನ ಎಲ್ಲಾ ವ್ಯಕ್ತಿನಾಮಗಳನ್ನು ಕೊಡಲಾಗಿದೆ.

ಮಧ್ಯಕಾಲೀನ ಸೊರಬ ಪ್ರದೇಶದಲ್ಲಿ ಸಂಸ್ಕೃತೀಕರಣಗೊಳ್ಳದ ಶುದ್ಧ ದ್ರಾವಿಡ ವ್ಯಕ್ತಿನಾಮಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇಂತಹ ಹೆಸರುಗಳನ್ನು ಅಂದು ಇದೇ ವರ್ಗದ ಜನರು ಇಟ್ಟುಕೊಳ್ಳಬೇಕು ಎಂಬ ನಿಯಮ ಇದ್ದಂತೆ ಕಾಣುವುದಿಲ್ಲ. ಅದರ ಬದಲಿಗೆ ಒಂದು ಮೂಲ ಹೆಸರಿನೊಂದಿಗೆ ಅಧಿಕಾರ ಮತ್ತು ವೃತ್ತಿಗಳ ಆಧಾರದ ಮೇಲೆ ಗುರುತಿಸುವುದನ್ನು ಕಾಣಬಹುದು. ಆ ಹೆಸರುಗಳೆಲ್ಲಾ ಸಾಮಾನ್ಯವಾಗಿ ಅಪ್ಪಟ ದ್ರಾವಿಡ ಹೆಸರುಗಳಾಗಿದ್ದು, ಶೂದ್ರ ದೇವತೆಗಳ ಹೆಸರುಗಳನ್ನು ಬಹುಮಟ್ಟಿಗೆ ಹೋಲುತ್ತಿದ್ದಂತೆ ಕಂಡುಬರುತ್ತದೆ.

ಉದಾ:

ಕಾಳಿಗ > ಕಾಳಗೌಡ > ಕಾಳಯ್ಯ > ಕಾಳರಸ

ಬೀರ > ಬೀರಗೌಡ > ಬಿಲ್ಲೋಜ > ಬೀರರಸ

ಮಾರ > ಮಾರಗೌಡ

ಬೀಚ > ಬೀಚಸೆಟ್ಟಿ

ಮಧ್ಯಕಾಲದಲ್ಲಿ ಅತ್ಯಂತ ಕೆಳ ಜಾತಿಗೆ ಸೇರಿದ ವ್ಯಕ್ತಿಗಳು ಎಂತಹ ಉತ್ತಮ ಹೆಸರನ್ನು ಇಟ್ಟುಕೊಂಡಿದ್ದರೂ ಸಹ ಮೇಲ್ವರ್ಗದ ಜನರು ಅವರ ಹೆಸರನ್ನು ಕರೆಯುವಾಗ ಪೂರ್ಣ ಹೆಸರನ್ನು ಉಚ್ಚರಿಸಿ ಕರೆಯದೆ ಹೆಸರಿನ ಕೊನೆಯಲ್ಲಿ 'ಗ' ಕಾರ ಎಂಬ ಶಬ್ದ ಉಚ್ಚಾರದಿಂದ ಕರೆಯುತ್ತಿದ್ದರು. ಅಂದರೆ ಏಕವಚನದಿಂದ ಕರೆದು ಅವರನ್ನು ಗುರುತಿಸುತ್ತಿದ್ದರು. ಇಂತಹ ಕೆಳವರ್ಗದ ವ್ಯಕ್ತಿಗಳು ಮೇಲ್ವರ್ಗದವರ ಆಸ್ತಿ ಕಾಪಾಡುವಲ್ಲಿ ಹೋರಾಡಿ ಸತ್ತರೆ. ಆಗ ಆತನ ಹೆಸರನ್ನು ಮೇಲ್ವರ್ಗದವರ ಹೆಸರಿನಿಂದ ಬೇರ್ಪಡಿಸಿ

[illegible]

[illegible]

[illegible]

[illegible]

ಗುರುತಿಸುವುದಕ್ಕಾಗಿ ಅವರ ಹೆಸರುಗಳನ್ನು ಶಾಸನದಲ್ಲಿಯೂ ಅದೇ ರೀತಿಯಲ್ಲಿ ಕೆತ್ತಿರುವುದನ್ನು ಕಾಣುತ್ತೇವೆ. ಇಂತಹ ಹೆಸರುಗಳು ಸೊರಬದಂತಹ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಉದಾ:

ಕೇಶಿಗ, ಕಾಳಿಗ, ಹಳ್ಳಿಗ, ಬೈಚಿಗ

'ಕಾಳ' ಎಂಬ ಹೆಸರು 'ಕಾಳಿ' ಎಂಬ ಶೂದ್ರ ದೇವತೆಯ ಹೆಸರಿನಿಂದ ಬಂದಿರಬೇಕು. ಅಂದರೆ ಈ ಪ್ರದೇಶದಲ್ಲಿ ಕಾಳಿಕಾದೇವಿಯ ಆರಾಧನೆ ಹೆಚ್ಚಿನ ಪ್ರಮಾಣದಲ್ಲಿದ್ದು, ಆ ದೇವತೆಯ ಪ್ರಭಾವ ಹೆಚ್ಚಾಗಿರಲೂಬಹುದು. ಒಂದು ದೇವತೆಯ ಮೇಲಿನ ಭಯ, ಭಕ್ತಿ ಮತ್ತು ಶಕ್ತಿ ಪ್ರಭಾವಗಳು ಹೆಚ್ಚಾಗಿದ್ದಾಗ, ಆ ಪ್ರದೇಶದ ಆಳುವ ವರ್ಗದಿಂದ ಹಿಡಿದು ಕೆಳ ಜಾತಿಯ ಜನರವರೆಗೆ ಈ ಹೆಸರನ್ನು ಇಟ್ಟುಕೊಳ್ಳುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ಕಾಳಿಗ ಎಂಬ ಹೆಸರು ಅತ್ಯಂತ ಕೆಳಜಾತಿಗೆ ಸೇರಿದ ವ್ಯಕ್ತಿಯ ಹೆಸರಿರಬಹುದು. ಉದಾ: ಕಾತವಳ್ಳಿ[1] ಗ್ರಾಮದ ಬೆಸವಗ ಕೇಶಿಗ ಎಂಬುದು ಕುಬಟೂರಿನ[2] ಪ್ರೀತಿಯ ಪುತ್ರರಾದ ಮಾರ ಮತ್ತು ಅನುವಳ್ಳಿಯ ಕಾಮು, ಕಾಮುಗೌಡನ ಆಳು ಬೈಚಿಗ,[3] ಇವೆಲ್ಲ ಹೆಸರುಗಳು ಕೆಳಜಾತಿಯವರ ಹೆಸರುಗಳಾಗಿರಬಹುದು. ಕಾರಣ ಒಂದು ಊರಿನ ಪುತ್ರ ಎಂದರೆ ಆ ಊರಿನ ಕೆಲಸ ಮಾಡುವ ಆಳು ಎಂದೂ ಸಹ ಗುರುತಿಸಬಹುದು. ಆಳು ಆದವನು ಸಾಮಾನ್ಯವಾಗಿ ಆತ ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯಂತ ಕೆಳವರ್ಗಕ್ಕೆ ಸೇರಿದವನಿರಬಹುದು. ಹಾಗೆಯೇ ಹಟ್ಟಿಕಾರ ಬೀಚ[4] ಮತ್ತು ಕುಳುವರ ಗಾಯಿಗ, ಹೊರವಯ್ಯ[5] ಎಂಬ ವ್ಯಕ್ತಿನಾಮಗಳು ಇದಕ್ಕೆ ಇನ್ನಷ್ಟು ಪುಷ್ಟಿಕೊಡಬಹುದು. 'ಕಾಳಗೌಡ' ಎಂಬುದು ಒಂದು ಹಳ್ಳಿ ಅಥವಾ ಗ್ರಾಮವನ್ನು ಆಳುವ ವ್ಯಕ್ತಿಯ ಹೆಸರಾಗಿರುವುದರಿಂದ ಆತನ ಹೆಸರಿನ ಜೊತೆಗೆ ಅಧಿಕಾರದ ಸೂಚಕವೂ ಸಹ ಸೇರಿ ಬಂದಿರುತ್ತದೆ. ಒಂದು ಪ್ರಾಂತ್ಯದ ಅರಸನಾಗಿದ್ದವನು ಇದೇ ಹೆಸರನ್ನು ಇಟ್ಟುಕೊಂಡಿದ್ದರೆ ಆತ 'ಕಾಳರಸ'ನಾಗಿ ಕಾಣಿಸಿಕೊಳ್ಳುತ್ತಾನೆ.

ಇದೇ 'ಕಾಳ' ಎಂಬ ಹೆಸರನ್ನು ಸುಸಂಸ್ಕೃತ ಮೇಲ್ವರ್ಗದವರು ಹೆಚ್ಚು ಬಳಸುತ್ತಾ ಹೋದಾಗ ಅದು ತನ್ನ ಮೂಲ ರೂಪವನ್ನು ಕಳೆದು ಕೊಳ್ಳುತ್ತದೆ. ಒಂದು ಮಂಡಲದ ಮಹಾಮಂಡಳೇಶ್ವರನು ಇದೆ ಹೆಸರನ್ನು ಇಟ್ಟುಕೊಳ್ಳಬಹುದು. ಆದರೆ ಇಲ್ಲಿ ಈ ಹೆಸರು ತನ್ನ ಮೂಲ ರೂಪದಿಂದ ಸಂಪೂರ್ಣವಾಗಿ ಸ್ಥಿತ್ಯಂತರ

ಹೊಂದಿ ಸಂಸ್ಕೃತೀಕರಣಗೊಂಡಿರುತ್ತದೆ. ಆದ್ದರಿಂದ ಗುರುತಿಸಲಾರದಷ್ಟು ಬದಲಾವಣೆಯನ್ನು ಹೊಂದಿ ಬಳಕೆಯಾಗುವುದನ್ನು ಕಾಣಬಹುದು.

ಉದಾ: ಕೀರ್ತಿದೇವ

ವ್ಯಕ್ತಿನಾಮಗಳು ಬರುವುದು ಒಂದು ಪ್ರದೇಶದ ಬೇರೆ ಬೇರೆ ವರ್ಗಗಳ ಆರ್ಥಿಕ ಚಟುವಟಿಕೆಯನ್ನು ಅವಲಂಬಿಸಿರುತ್ತದೆ. ಜೊತೆಗೆ ಆಯಾ ವರ್ಗದ ದೈವಗಳ ಆರಾಧನೆಯೂ ಸಹ ಪ್ರಮುಖ ಪಾತ್ರವಹಿಸಿ ವ್ಯಕ್ತಿಗಳ ಹೆಸರುಗಳು ಹುಟ್ಟಲು ಕಾರಣವಾಗಿರುವುದು. ಹೀಗೆ ಬಳಕೆಗೊಂಡ ವ್ಯಕ್ತಿನಾಮಗಳು ಅಧಿಕಾರ, ವೃತ್ತಿ ಮತ್ತು ವರ್ಗದ ಆಧಾರದ ಮೇಲೆ ತನ್ನ ಮೂಲ ಸ್ವರೂಪವನ್ನು ಬದಲಿಸಿಕೊಳ್ಳುತ್ತಾ ಬಳಕೆಯಾಗುವುದನ್ನು ಕಾಣುತ್ತೇವೆ.

5.2. ಜಾತಿ ಮತ್ತು ವೃತ್ತಿ

ಮಧ್ಯಕಾಲೀನ ಕರ್ನಾಟಕದ ಕೆಲವು ಒಂದೆರಡು ಶಾಸನಗಳಲ್ಲಿ ವರ್ಣವ್ಯವಸ್ಥೆಯ ಬಗೆಗೆ ವಿವರಗಳು ಬಂದಿವೆ. ರಾಜನಾದವನು ವರ್ಣಾಶ್ರಮ ಧರ್ಮವನ್ನು ತನ್ನ ರಾಜ್ಯದಲ್ಲಿ ಕಟ್ಟುನಿಟ್ಟಿನಿಂದ ಪಾಲಿಸುವುದು ಆತನ ಕರ್ತವ್ಯಗಳಲ್ಲಿ ಒಂದಾಗಿದ್ದಿತು. ಆದರೆ ಅವು ಹಿಂದಿನ ಪದ್ಧತಿಯನ್ನನುಸರಿಸಿ ಬಂದ ಮಾತುಗಳೇ ಹೊರತು ಜೀವಂತ ಸಂಪ್ರದಾಯವನ್ನು ಅವು ಸೂಚಿಸುವುದಿಲ್ಲ. ಕರ್ನಾಟಕದಲ್ಲಿ ವರ್ಣ ಪದ್ಧತಿಯು ಬಹುಮಟ್ಟಿಗೆ ಕುಸಿದು ಹೋಗಿತ್ತೆಂದು ಹೇಳಬಹುದು.

ಋಗ್ವೇದದ ಪುರುಷ ಸೂಕ್ತವು ವರ್ಣವ್ಯವಸ್ಥೆಯ ಶ್ರೇಣೀಕರಣವನ್ನೇ ಕೊಡುತ್ತದೆ. ಆದರೆ ಋಗ್ವೇದದ ಉಳಿದ ಅನೇಕ ಶ್ಲೋಕಗಳಲ್ಲಿ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವೆಂದು ವಿಭಾಗಿಸಿರುವುದು ಕಂಡುಬರುತ್ತದೆ. ಇಲ್ಲಿ ಗಮನಿಸ ಬೇಕಾದ ಅಂಶವೆಂದರೆ ಈ ವರ್ಗ ವ್ಯವಸ್ಥೆಯಲ್ಲಿ ಅಂತಹ ಕಠೋರ ನಿಯಮಗಳೇನೂ ಇರಲಿಲ್ಲ. ಶೂದ್ರರನ್ನು ಬಿಟ್ಟರೆ ಯಾರು ಯಾವ ವರ್ಗವನ್ನು ಬೇಕಾದರೂ ಸೇರುವ ಸೌಲಭ್ಯವಿದ್ದಿತು. ಈ ವರ್ಗ ವಿಭಜನೆಯು ಜನ್ಮಕ್ಕಿಂತ ಹೆಚ್ಚಾಗಿ ವೃತ್ತಿಯನ್ನವಲಂಬಿಸಿ ಮೂಡಿತು. ಬ್ರಾಹ್ಮಣಕಗಳ ಕಾಲದಲ್ಲಿ ವರ್ಗ ವ್ಯವಸ್ಥೆಯನ್ನೇ ವರ್ಣ ವ್ಯವಸ್ಥೆಯೆಂದು ಕರೆದು ಅದನ್ನು

[illegible]

ಬಿಗಿಗೊಳಿಸಲಾಯಿತು. ಆದ್ದರಿಂದ ಬ್ರಾಹ್ಮಣಕಗಳ ಕಾಲದಲ್ಲಿ ವ್ಯಕ್ತಿಯ ವರ್ಣವನ್ನು ನಿರ್ಣಯಿಸುತ್ತಿದ್ದುದು, ಅವನ ಹುಟ್ಟೆ ಹೊರತು ವೃತ್ತಿಯಲ್ಲ. [7]

ವರ್ಣ ವ್ಯವಸ್ಥೆಯನ್ನು ಅದರ ಶುದ್ಧ ರೂಪದಲ್ಲಿ ಉಳಿಸುವುದು ಕ್ರಮೇಣ ಕಷ್ಟವಾಗುತ್ತ ಬಂದಿರಬೇಕು. ಬೇರೆ ಬೇರೆ ವರ್ಗಗಳವರು ಬೇರೆ ಬೇರೆಯವರ ವೃತ್ತಿಗಳನ್ನವಲಂಬಿಸಿದರು. ಬೇರೆ ಬೇರೆ ವರ್ಣಗಳ ಸ್ತ್ರೀಯರ ಸಂಪರ್ಕವನ್ನು ಪಡೆದರು. ಇದರಿಂದ ವರ್ಣಸಂಕರವುಂಟಾಯಿತು. ಇದರ ಫಲವಾಗಿ ಬೇರೆ ಬೇರೆ 'ಜಾತಿ'ಗಳು ಹುಟ್ಟಿದವು ಎಂದು ಮನುವು ಅಭಿಪ್ರಾಯ ಪಡುತ್ತಾನೆ. ಋಗ್ವೇದದಲ್ಲಿಯೇ ಕಮ್ಮಾರ, ನಾವಿದ, ರಥಕಾರ ಮುಂತಾದ ವೃತ್ತಿಕಾರರ ಹೆಸರುಗಳಿವೆ. ಇವರನ್ನು ಯಾವವರ್ಗಗಳಿಗೆ ಸೇರಿಸ ಬೇಕೋ ತಿಳಿಯದು. ಹೀಗೆ ಜಾತಿ ವ್ಯವಸ್ಥೆಯ ಮೂಲ ಬಹಳ ಪ್ರಾಚೀನವಾದುದು. ಯಾವಾಗ ಒಂದು ವರ್ಣದವರು ಇನ್ನೊಂದು ವರ್ಣದವರ ವೃತ್ತಿಗಳನ್ನು ಕೈಗೊಂಡರೋ ಆಗಲೇ ವರ್ಣವ್ಯವಸ್ಥೆಯು ಕುಸಿಯಿತೆಂದು ಹೇಳಬಹುದು. ಜಾತಿ ಪದ್ಧತಿಯು ಹೇಗೆ ಉದಯವಾಗಿರಬಹುದೆಂಬುದರ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಪರಂಪರೆಯಿಂದ ಬಂದು ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಾ, ಆ ವೃತ್ತಿಗಳ ರಹಸ್ಯಗಳನ್ನು ಕಾಪಾಡಲು ಮಾಡಿದ ಪ್ರಯತ್ನದಲ್ಲಿ ತನ್ನ ಗುಂಪಿನಲ್ಲಲ್ಲದೆ ಬೇರೆ ಗುಂಪಿನಲ್ಲಿ ಮದುವೆಯಾಗಲು ಇಷ್ಟಪಡದ ಮನುಷ್ಯಸ್ವಭಾವದಲ್ಲಿ ಜಾತಿ ಪದ್ಧತಿಗೆ ಮೂಲವನ್ನು ಹುಡುಕಬೇಕಾಗುತ್ತದೆ. [8]

ಚರಿತ್ರೆಯ ವಿಕಾಸದ ಹಂತಗಳಲ್ಲಿ ವರ್ಣಾಶ್ರಮ ವ್ಯವಸ್ಥೆಯು ಪಡೆದುಕೊಂಡ ಬಹುಮುಖಿ ಆಯಾಮಗಳೇ ಇಂದಿನ ಜಟಿಲ ಜಾತಿಗಳ ಅವಸ್ಥೆಯನ್ನು ಪಡೆದುಕೊಂಡಿದೆ. ಮಧ್ಯಕಾಲೀನ ಸಂದರ್ಭವು ಜಾತಿಯ ಜಟಿಲತೆಯ ಕಡೆಗೆ ಪಲ್ಲಟವಾಗುವ ಸ್ಥಿತ್ಯಂತರದ ಸಂದರ್ಭವಾಗಿದೆ. ಈ ತರಹದ ಸರಳ ಅರ್ಥದ ವೃತ್ತಿ ಸಂಬಂಧವಾದಂತಹ ಜಾತಿಯ ಬೇರುಗಳು ಸ್ಥಿತ್ಯಂತರವನ್ನು ಪಡೆದುಕೊಳ್ಳುವ ಆ ಮೂಲಕ ಅವು ಹೆಚ್ಚು ಗಟ್ಟಿಯಾಗಿ ಬೇರೂರಲು ಹವಣಿಸುವ ಅನಿವಾರ್ಯತೆ ಯಾವ ರೀತಿಯದ್ದು ಎನ್ನುವುದನ್ನು ಗುರುತಿಸುವ ಸಮಸ್ಯೆ ಈ ಅಧ್ಯಯನದ್ದಾಗಿದೆ.

ಮಧ್ಯಕಾಲೀನ ಸಂದರ್ಭದಲ್ಲಿ ಜಾತಿ ಹೆಚ್ಚು ಜಟಿಲವಾಗಿರಲಿಲ್ಲ ಎನ್ನುವುದು ಸ್ಪಷ್ಟ. ಏಕೆಂದರೆ ಅದು ಚಾರಿತ್ರಿಕ ಮಿತಿ ಕೂಡ. ಈ ಅವಸ್ಥೆಯೊಳಗಡೆ ಸೊರಬದಂತಹ ದಟ್ಟಮಲೆನಾಡಿನ ಪರಿಸರದಲ್ಲಿ ಜಾತಿಯ

[illegible]

[illegible]

[illegible]

[illegible]

[illegible]

ಬೇರುಗಳು ತೀರ ಜಟಿಲವಾಗಿ ಇಳಿದುಕೊಂಡಿರಲಿಲ್ಲ. ಅಂದರೆ ಹಳ್ಳಿಯ ವ್ಯವಸ್ಥೆಯನ್ನು ನಿಯಂತ್ರಿಸುವ ಆ ಮೂಲಕ ಅದರ ಸಂಪೂರ್ಣ ಜವಾಬ್ದಾರಿಗಳನ್ನು ನಿಬಾಯಿಸುವಂತಹ ಹೊಣೆಗಾರಿಕೆ ಯಾವುದೇ ಒಬ್ಬ ವ್ಯಕ್ತಿಯಾದ್ದಾಗಿರಲಿಲ್ಲ. ಬದಲಾಗಿ ಒಂದು ಸಮೂಹದ್ದಾಗಿದಿತ್ತು. ಇದರ ಅರ್ಥ ಅಂದು ಬಹುಮಟ್ಟಿಗೆ ಸಾಮೂಹಿಕ ಉತ್ಪಾದನಾ ವ್ಯವಸ್ಥೆ ಇತ್ತೆಂಬುದಾಗಿದೆ. ಇಂಥ ಸಾಮೂಹಿಕ ಉತ್ಪಾದನೆ ವ್ಯವಸ್ಥೆಯೊಳಗಡೆ ಜಾತಿಗಳು ಸಂಕೀರ್ಣ ಅವಸ್ಥೆಯನ್ನು ಇಂದಿನಂತೆ ವ್ಯಕ್ತಿ ನೆಲೆಯಲ್ಲಿ ವ್ಯಕ್ತಿ ನೆಲೆಯಲ್ಲಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಅಂದರೆ ಹಳ್ಳಿಯು ಒಂದು ಸಮೂಹ ಕೇಂದ್ರ. ಇದರ ಜವಾಬ್ದಾರಿಯನ್ನು ಹಳ್ಳಿಯ ಜನರೆಲ್ಲರೂ ಹೊರಬೇಕು. ಇಲ್ಲಿ ಜಾತಿಯ ಪ್ರಶ್ನೆ ಮುಖ್ಯವಾಗುವುದಿಲ್ಲ. ಹಾಗಾಗಿ ಆ ಹಳ್ಳಿಯ ಯಾವುದೇ ಕೆಲಸವನ್ನು ಅವರಲ್ಲಿ ಆಯಾಯ ವೃತ್ತಿ ಪರಿಣಿತರಾದ ವ್ಯಕ್ತಿಗಳು ನಿರ್ವಹಿಸಬಹುದ್ದಿತು. ಇಂತಹ ಅವಸ್ಥೆಯನ್ನು ಸೊರಬ ಪರಿಸರವು ಅಂದು ಪಡೆದುಕೊಂಡಿತ್ತು ಎನ್ನುವುದಕ್ಕೆ ಶಾಸನದ ದಾಖಲೆಗಳಿವೆ. ಉದಾ: ಇಂದಿನ ಮಾದಿಗನ ಕೆಲಸ ಮೆಟ್ಟು ಹೊಲಿಯುವುದು ಮಾತ್ರ ಎಂದು ತಿಳಿಯಲಾಗಿದೆ. ನಾಯಿಯಿಂದ ಎನ್ನುವುದು ಕ್ಷೌರಿಕ ಕೆಲಸ, ಬಡಗಿ ಎನ್ನುವುದು ಮರದ ಕೆಲಸಯೆನ್ನುವ ಕಲ್ಪನೆ ಅಸ್ಥಿತ್ವದಲ್ಲಿದೆ. ಆದರೆ ಈ ಕಲ್ಪನೆ ಈಗ ನಾವು ತಿಳಿದುಕೊಂಡಿರುವಷ್ಟು ಜಟಿಲವಾಗಿ ಮಧ್ಯಕಾಲೀನ ಸಂದರ್ಭದಲ್ಲಿ ಬೇರೂರಿರಲಿಲ್ಲ. ಉದಾ: ಮಾದಿಗರ ಕಮ್ಮಯ್ಯನ ಮಗ ನರಿವನ್ನಗೌಡನು ಹೂನ್ನವಳ್ಳಿಯ ಗೌಡನಾಗಿ ಕೆಲಸ ನಿರ್ವಹಿಸುತ್ತಿದ್ದನು. ಕ್ರಿ.ಶ.೯64ರ ಶಾಸನವೊಂದು ತಿಳಿಸುತ್ತದೆ. ಈ ಶಾಸನವು ಉಲ್ಲೇಖಿಸುವಂತೆ "..... ಹುನವ್ವಳ್ಳಿಯ ಮಾದಗರ ಕಮ್ಮಯ್ಯನಂ ಮಗಂ ನರಿವನ್ನಗಾವುಣ್ಣುಗೆಯ್ಯೆ...."[9]

ಈ ಶಾಸನದ ಪ್ರಕಾರ ಮಾದಿಗನೊಬ್ಬನು ಊರಿನ ಪ್ರಮುಖ ಜವಾಬ್ದಾರಿಯನ್ನು ಹೊತ್ತಿದ್ದಾನೆ. ಆದರೆ 19-20ನೇ ಶತಮಾನದಂತೆ ಮಾದಿಗ ಕೇವಲ ಮೆಟ್ಟು ಹೊಲಿಯುವ ಕೀಳುಜಾತಿಯ ಮಾತ್ರನಾಗಿದ್ದಾನೆ. ಊರಿನ ಇತರೆ ಮೇಲುಜಾತಿಯವರೊಡನೆ ಅವನು ಯಾವುದೇ ರೀತಿಯ ಸಂಬಂಧಗಳನ್ನು ಹೊಂದುವಂತಿಲ್ಲ ಎನ್ನುವ ಕ್ರೂರ ಹಟವಿಲ್ಲ. ಇಡೀ ಹಳ್ಳಿಯ ಜವಾಬ್ದಾರಿಯನ್ನು ಅವನಿಗೆ ಕೊಡುವ ಒಂದು ಮನಸ್ಥಿತಿಯು ಆ ಹಳ್ಳಿಯ ಜನರದ್ದಾಗಿದೆ. ಅಂದರೆ ಸಾಮೂಹಿಕ ಉತ್ಪಾದನಾ ಮಾದರಿ ಈ ತರಹದ ಭಾವನಾತ್ಮಕವಾದ ಸಮಾನತತ್ವದ ಸಮಾಜದ ರಚನೆಯ ಪರಿಕಲ್ಪನೆಯನ್ನು ಒಳಗೊಂಡಿರುತ್ತದೆ. ಈ ಪರಿಕಲ್ಪನೆಯನ್ನು ದುಡಿಯುವ ವರ್ಗದಿಂದ ಹತ್ತಿಕ್ಕಲು ಇನ್ನೆಂದೂ ಸಾಧ್ಯವಿಲ್ಲ.

ವಸಾಹತುಶಾಹಿಕಾಲದ ನಂತರ ಆಧುನೀಕರಣ ಪ್ರವೇಶ ಮಾಡಿತು. ಇದರ ಅರ್ಥ ಬ್ರಿಟಿಷ್ ಸಂಸ್ಕೃತಿಯ ಪ್ರವೇಶ ಮಾತ್ರವಲ್ಲ, ಉತ್ಪಾದನಾ ವಿಧಾನದಲ್ಲಾದ ಬದಲಾವಣೆಯು ಬಹುಮುಖ್ಯವಾದದ್ದು ಎನ್ನುವುದಾಗಿದೆ. ಕೈಗಾರೀಕರಣದ ಪ್ರಭಾವ ಆ ಮೂಲಕ ಬಂಡವಾಳಶಾಹಿ ಉತ್ಪಾದನ ವ್ಯವಸ್ಥೆಯು ಅಸ್ತಿತ್ವ ಸಾಮೂಹಿಕ ಉತ್ಪಾದನಾ ಮಾದರಿಯ ರಚನೆಯನ್ನು ಒಡೆಯಿತು. ಅಂದರೆ ಸಮೂಹವನ್ನೇ ಒಡೆದು ಛಿದ್ರಗೊಳಿಸಿತು. ಹೀಗೆ ಛಿದ್ರಗೊಳ್ಳುವ ಜನರ ಅಸ್ತಿತ್ವದ ಪ್ರಶ್ನೆ ಮುಖ್ಯವಾಗಿ ಕಾಡಿದೆ. ಇಂತಹ ಅಸ್ಥಿತ್ವವನ್ನು ಗಟ್ಟಿಗೊಳಿಸಿಕೊಳ್ಳುವ ಒತ್ತಡದ ಪರಿಣಾಮವೇ ಜಾತಿಯನ್ನು ಜಟಿಲಗೊಳಿಸಿರುವುದಾಗಿದೆ.

ಮಧ್ಯಕಾಲದಲ್ಲಿ ಜಾತಿಯೂ ಜಟಿಲವಾಗಿರದೇ ಯಾವುದೇ ಸಮಾಜ ವ್ಯವಸ್ಥೆಯಲ್ಲಿ ಎಲ್ಲಾ ವಿಧದ ಅಂತರ್ ಚಲನೆಗೆ ಅವಕಾಶವಿತ್ತು ಎನ್ನುವುದಕ್ಕೆ ಸೊರಬ ಪ್ರದೇಶದಲ್ಲಿ ಸಾಕಷ್ಟು ಶಾಸನಗಳ ದಾಖಲೆಗಳನ್ನು ಕಾಣಬಹುದು.

ಉದಾ:

1. ಕ್ರಿ.ಶ.1116ರ ಶಾಸನವೊಂದು ತಿಳಿಸುವಂತೆ ಬಾವಗೌಡನೆಂಬುವ ಗೌಡ ವೃತ್ತಿಯವನ್ನು ಶಿಲ್ಪಿಯಾಗಿದ್ದಾನೆ[10].
2. ಕ್ರಿ.ಶ.1138ರ ಶಾಸನವೊಂದರಲ್ಲಿ ಜೋಮಗೌಡನೆಂಬುವನು ಲಿಪಿಕಾರನಾಗಿ ಕೆಲಸ ಮಾಡಿದ್ದಾನೆ [11].
3. ಕ್ರಿ.ಶ.1152ರ ಶಾಸನವೊಂದು ತಿಳಿಸುವಂತೆ ಶಂಕರಭಟ್ಟನೆಂಬುವನು ವೀರಗಲ್ಲಿನ ಶಾಸನವೊಂದನ್ನು ಬರೆದಿರುವುದು ತಿಳಿಯುತ್ತದೆ [12].

ಈ ಮೇಲಿನ ಶಾಸನಗಳ ಪ್ರಕಾರ ಹಿಂದೆ ಬೇರೆ ವೃತ್ತಿಯನ್ನು ಅವಲಂಬಿಸಿದ ಜಾತಿಯವರು ಈ ಸಂದರ್ಭದಲ್ಲಿ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಆದರೂ ಹಿಂದಿನ ವೃತ್ತಿ ಸೂಚಕವಾದ ಹೆಸರೆ ಜಾತಿ ಸೂಚಕವಾಗಿ ವ್ಯಕ್ತವಾಗಿರುವುದು ಕಂಡುಬರುತ್ತದೆ.

5.3. ವೀರ ಹಾಗೂ ಮಹಾಸತಿ ಕಲ್ಲುಗಳು ಮತ್ತು ಪಾರಲೌಕಿಕ ಕಲ್ಪನೆ : ಸಾಮಾಜಿಕ ಸಂದರ್ಭದ ವಿಶ್ಲೇಷಣೆ

ಪಾರಲೌಕಿಕ ಕಲ್ಪನೆಯನ್ನು ಕುರಿತು ಚರ್ಚಿಸಲು ದೊರೆಯುಬಹುದಾದ ಮಾಹಿತಿಗಳು ಧಾರ್ಮಿಕವಾದಂತಹ ಸಂಪ್ರದಾಯ ಮತ್ತು ಆಚರಣೆಗಳಾಗಿವೆ. ಸೊರಬ ಪರಿಸರದಲ್ಲಿ ಸಂಪ್ರದಾಯಗಳಿಗೆ ಸಂಬಂಧಪಟ್ಟಂತೆ ಪ್ರಧಾನ ಸಾಮಗ್ರಿಗಳಾಗಿ ಕೆಳಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಗಳು ಸಿಗುತ್ತವೆ.

1. ಸತಿಸಹಗಮನ ಪದ್ಧತಿ
2. ದಾನಕೊಡುವ ಸಂಪ್ರದಾಯ
3. ಸ್ಥಳೀಯ ವೀರರನ್ನು ಸ್ತುತಿಸಿ ಗೌರವಿಸುವ ಸಂಪ್ರದಾಯ

ಭಾರತೀಯ ತತ್ವಶಾಸ್ತ್ರದಲ್ಲಿ ಪಾರಲೌಕಿಕತೆಗೆ ಪ್ರಮುಖಸ್ಥಾನವನ್ನು ಕೊಡಲಾಗಿದೆ. ಈ ತತ್ವಶಾಸ್ತ್ರದ ಪ್ರಮುಖ ವಿಚಾರ ಪಾಶ್ಚಾತ್ಯರ ಭಾವನಾವಾದದ ದಾಟಿಯನ್ನೆ ಹೊಂದಿದೆ. ಪ್ರಾಚೀನ ಭಾರತದಲ್ಲಿ ಎರಡು ಬಗೆಯ ತತ್ವಶಾಸ್ತ್ರಗಳು ಅಸ್ತಿತ್ವದಲ್ಲಿದ್ದವು. (ಅ) ಚಾರುವಾಕ ಪಂಥದವರು ಪ್ರತಿಪಾದಿಸುವ ವಸ್ತು ಮೂಲವಾದ, (ಆ) ವೈಧಿಕರು ಪ್ರತಿಪಾದಿಸುವ ಚೇತನ ಮೂಲವಾದ. ವಸ್ತು ಮೂಲವಾದವು ಭೌತಪ್ರಧಾನವಾದ ವಿಚಾರವಾಗಿದೆ. ಈ ಪಂಥ ಪ್ರತಿಪಾದಿಸುವ ವಿಚಾರ ಚೇತನ ಮೂಲವಾದಿಗಳಿಗೆ ಪ್ರತಿರೋಧವಾಗಿದೆ. ವಸ್ತುವಿನ ಅಸ್ತಿತ್ವವನ್ನು ಮೀರಿ ಆಲೋಚಿಸುವ ಸ್ಥಿತಿಯನ್ನು ಒತ್ತಾಯಿಸುವ ಪರಿಸ್ಥಿತಿ ಎಂಥಾದ್ದು ಎನ್ನುವ ಪ್ರಶ್ನೆ ಚರ್ಚಾರ್ಹ. ಭೌತವಾದಿಗಳ ವಿಚಾರ ಚೇತನ ಮೂಲವಾದಿಗಳ ವಿಚಾರಕ್ಕೆ ಪ್ರತಿರೋಧವಾಗಿ ಅಭಿವ್ಯಕ್ತವಾಗಿದ್ದು ಏಕೆ? ಎನ್ನುವ ಪ್ರಶ್ನೆಯನ್ನು ಬಿಡಿಸಿ ಚರ್ಚಿಸಿದಾಗ ಚೇತನವಾದಿಗಳ ಉದ್ದೇಶ ಮತ್ತು ವಿಚಾರಗಳು ಏನೆಂಬುದು ಸ್ಪಷ್ಟವಾಗುತ್ತದೆ. ಈ ತತ್ವ ಶಾಸ್ತ್ರದ ಚರ್ಚೆಯ ನೆಲೆಗಳು ಏನೇ ಇರಲಿ ಭಾರತೀಯ ಪಾರಲೌಕಿಕ ತತ್ವದ ಮೂಲ ಬೇರು ಚೇತನ ಮೂಲವಾದಿಗಳ ವಿಚಾರವೇ ಆಗಿದೆ.

ಲೌಕಿಕ ನೆಲೆಯಿಂದ ವಿಮುಖಗೊಳಿಸಿ ಅಸ್ತಿತ್ವದಲ್ಲಿಲ್ಲದ ಅಗೋಚರವಾದ ಜೀವನವೊಂದರ ಬಗ್ಗೆ ದುಡಿಯುವ ಸಮುದಾಯದ ಆಸಕ್ತಿಯನ್ನು ಕೆರಳಿಸಿ ಪ್ರಚೋದಿಸುವ ಉದ್ದೇಶವಾಗಿಯೇ ಪ್ರಾರಂಭದಲ್ಲಿ

ಪಾರಲೌಕಿಕ ವಿಚಾರವು ಅಸ್ತಿತ್ವಕ್ಕೆ ಬಂದಿದೆ. ಲೌಕಿಕ ಜೀವನದಿಂದ ದುಡಿಯುವ ಜನರನ್ನು ವಿಮುಖಗೊಳಿಸುವ ಅವಶ್ಯಕತೆ ಏನಿತ್ತು? ಯಾರಿಗಿತ್ತು? ಎನ್ನುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡರೇ ಪಾರಲೌಕಿಕತೆಯ ಉದ್ದೇಶ ಸ್ಪಷ್ಟವಾಗುತ್ತದೆ. ಪಾರಲೌಕಿಕತೆಯನ್ನು ಭಾರತೀಯ ದುಡಿಯುವ ಜನವರ್ಗಕ್ಕೆ ಧಾರ್ಮಿಕ ಆಚರಣೆಗಳ ಮೂಲಕ ಹೇರುತ್ತಿದ್ದ ವರ್ಗ ಯಾವುದು ಎನ್ನುವುದು ಮೊದಲು ಖಚಿತವಾಗಬೇಕು.

1. ಪುರೋಹಿತ ವರ್ಗ
2. ರಾಜರು
3. ವರ್ತಕರು

ಈ ಮೂರು ಬಗೆಯ ಜನವರ್ಗದವರು ದುಡಿಯುವ ವರ್ಗದ ಎಲ್ಲಾ ಜಾತಿಯ ಜನರ ಮೇಲೆ ಧಾರ್ಮಿಕ ಆಚರಣೆಗಳ ಮೂಲಕ ಪಾರಲೌಕಿಕ ಕಲ್ಪನೆಯನ್ನು ಹೇರುತ್ತಾ ಬಂದಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಮೇಲಿನ ಮೂರು ಗುಂಪಿನ ಹಿತಾಸಕ್ತಿಗಳಿಗೆ ಪೂರಕವಾಗಿ ದುಡಿಯುವ ವರ್ಗವನ್ನು ರೂಪಿಸಿಕೊಳ್ಳುವ ವ್ಯೂಹ ತಂತ್ರಗಳಾಗಿ ಪಾರಲೌಕಿಕ ಕಲ್ಪನೆಯ ತತ್ವಗಳು ಮತ್ತು ಆಚರಣೆಗಳು ರೂಪುಗೊಂಡಿವೆ.

ಸೊರಬ ಪರಿಸರದಲ್ಲಿ ಮಧ್ಯಕಾಲೀನ ಸಂದರ್ಭಕ್ಕೆ ಸಿಗುವ ವೀರಗಲ್ಲುಗಳು, ಮಾಸ್ತಿಕಲ್ಲುಗಳು ಮತ್ತು ದಾನ ಶಾಸನಗಳು ಯಾವ ಕಾರಣಕ್ಕೆ, ಯಾವ ವಿಚಾರವನ್ನು ಪ್ರತಿಪಾದಿಸುತ್ತವೆ ಎನ್ನುವುದು ಈ ಅಧ್ಯಯನದ ಪ್ರಮುಖ ಚರ್ಚೆಯಾಗಿದೆ. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಹೆಸರೇ ಸೂಚಿಸುವಂತೆ ವೀರತ್ವ ಮತ್ತು ಸತಿತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ಸ್ಮಾರಕ ಶಿಲೆಗಳಾಗಿವೆ. ವೀರತ್ವದ ಮೌಲ್ಯವು ಮಧ್ಯಕಾಲೀನ ಸಂದರ್ಭದಲ್ಲಿ ಚಾರಿತ್ರಿಕ ಕಾರಣಕ್ಕಾಗಿ ಅತ್ಯಂತ ಶ್ರೇಷ್ಠ ಮೌಲ್ಯವಾಗಿದೆ. ಹೀಗೆ ಈ ಮೌಲ್ಯ ಶ್ರೇಷ್ಠತ್ವವನ್ನು ಪಡೆದುಕೊಳ್ಳುವ ಅನಿವಾರ್ಯತೆಯನ್ನು ಕುರಿತು ಈಗಾಗಲೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಇಂದಿಗೂ ಪ್ರಮುಖವಾಗಿ ಚರ್ಚೆಗೆ ಒಳಪಡುತ್ತಿವೆ. ಇದರ ಚಾರಿತ್ರಿಕ ನೆಲೆಗಳು ಏನೇ ಇರಲಿ ಸೊರಬ ಪರಿಸರಕ್ಕೆ ಸಂಬಂಧಪಟ್ಟಂತೆ ದೊರೆಯುವ ವೀರಗಲ್ಲುಗಳು ಸ್ಥಳೀಯ ವ್ಯಕ್ತಿಗಳನ್ನು ಅವರ ಸಾಹಸದ ಹೋರಾಟದ ವೈಭವೀಕರಣವನ್ನು ಪ್ರತಿಪಾದಿಸುತ್ತವೆ. ಇಂತಹ ಸ್ಥಳೀಯ ವೀರರು ಯಾರು? ಎಂತವರು? ಯಾರಿಂದ

[illegible]

[illegible]

[illegible]

[illegible]

ಸ್ತುತಿಸಲ್ಪಟ್ಟಿದ್ದಾರೆ? ಏಕಾಗಿ ಸ್ತುತಿಸಲ್ಪಟ್ಟಿದ್ದಾರೆ? ಎನ್ನುವ ಸಮಸ್ಯೆಗಳನ್ನು ಬಿಡಿಸಿಕೊಳ್ಳುವುದು ಸೂಕ್ತ. ಉದಾ: ಕೆಳಕಂಡ ಶಾಸನಗಳನ್ನು ನೋಡೋಣ.

ಕ್ರಿ.ಶ.1218ರ ಶಾಸನವೊಂದು ತಿಳಿಸುವಂತೆ ಕುಬಟೂರು ಗ್ರಾಮದ ಮೇಲೆ ವೀರಬಿಜ್ಜಣ ನಾಯಕ, ಜಗದೇವ, ಮತ್ತು ಸಾಯಣ್ಣ, ಅನ್ಯಾಯದಿಂದ ಬ್ರಾಹ್ಮಣರನ್ನು ಸೆರೆಹಿಡಿದು ಹಿಂಸೆ ಕೊಡುತ್ತಿರುವಾಗ ಆ ಊರಿನ ಪ್ರಿಯ ಪುತ್ರನಾದ ಮೊತ್ತಕಾರ ದೋಸಮ ಹಲವಾರು ಕುದುರೆಗಳನ್ನು ಮತ್ತು ವೀರರನ್ನು ಕೊಂದು ಬ್ರಾಹ್ಮಣರನ್ನು ಬಿಡಿಸಿ ಸುರಲೋಕ ಪ್ರಾಪ್ತನಾದನು.[13] ಕ್ರಿ.ಶ.1132ರ ಶಾಸನವೊಂದರ ಪ್ರಕಾರ ಎಕ್ಕಲರಸ ದೇವ ಸಾಂತಳಿಗೆ ಸಾವಿರಕ್ಕೆ ಹೋಗಿ ಕಾಳಾಗ ಮಾಡುತ್ತಿದ್ದಾಗ ಗೋವುಗಳನ್ನು ಕಾಯುವ ಆಳು ಬೀಚ (ಹಟ್ಟಿಕಾರ ಬೀಚ) ಹಲವರನ್ನು ಕೊಂದು ಮೆರೆದು ಸ್ವರ್ಗಸ್ಥನಾದನು.[14]

ಈ ಶಾಸನೋಕ್ತ ವೀರರು ದುಡಿವ ಜನ. ಮೊದಲನೇ ಶಾಸನದಲ್ಲಿ ಬ್ರಾಹ್ಮಣರನ್ನು ರಕ್ಷಿಸಲಿಕ್ಕಾಗಿ ಹೋರಾಡಿದ್ದಾನೆ. ಎರಡನೇ ಶಾಸನದಲ್ಲಿ ದನಕಾಯುವ ಆಳು ಒಡೆಯನ ರಕ್ಷಣೆಗೆ ಹೋರಾಡುತ್ತಿದ್ದಾನೆ. ಈ ಎರಡು ಶಾಸನಗಳಲ್ಲಿ ಒಂದು ಪ್ರಬಲ ವರ್ಗದ ರಕ್ಷಣೆಗಾಗಿ ಹೊರಾಡುತ್ತಿರುವ ಸ್ಥಳಿಯ ವೀರರೇ ಉಕ್ತರಾಗಿದ್ದಾರೆ.

ಅಂದರೆ ಮಧ್ಯಕಾಲೀನ ಸಂದರ್ಭದಲ್ಲಿ ಬೇರೆ ಬೇರೆ ಧರ್ಮಗಳು ಸಂಸ್ಥೆಯಾಗಿ ಮಾರ್ಪಟ್ಟು ಜನ ಬೆಂಬಲವನ್ನು ಆಯಾ ಧರ್ಮದ ಆಚರಣೆಗಳನ್ನು ಹೇರುವುದರ ಮೂಲಕ ಪಡೆಯಕೊಳ್ಳಬೇಕಿತ್ತು. ಸೊರಬ ಪ್ರದೇಶದ ವೈದಿಕರಿಗೆ ಅವರ ಅಸ್ತಿತ್ವಕ್ಕೆ ಧಕ್ಕೆ ಒದಗಿತ್ತು, ಸಮಕಾಲೀನ ವೀರಶೈವ, ಜೈನ ಧರ್ಮಗಳು ಪ್ರಬಲವಾಗಿ ಜನಬೆಂಬಲ ಪಡೆಯುತ್ತಿರುವಾಗ ವೈದಿಕರು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಬೇಕಾದಂತಹ ಅನಿವಾರ್ಯ ಒದಗಿತ್ತು. ಇದುವರೆಗೂ ಸ್ಥಳೀಯ ಕೆಳವರ್ಗವನ್ನು ಯಾವ ರೀತಿಯಲ್ಲೂ ಗಣನೆಗೆ ತೆಗೆದುಕೊಳ್ಳದಿದ್ದ ಮೇಲುಜಾತಿಯವರು ಇದ್ದಕ್ಕಿದ್ದ ಹಾಗೆ ಕೆಳವರ್ಗವನ್ನು ಸ್ತುತಿಸುವ ಸ್ಥಿತಿ ಒದಗಿರಬಹುದಾದ ಹಿನ್ನೆಲೆ ಇದಾಗಿದೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ಜನ ಬೆಂಬಲವನ್ನು ಪಡೆಯುವ ತಂತ್ರವಾಗಿ ವೀರಗಲ್ಲುಗಳು ಮತ್ತು ದಾನ ಶಾಸನಗಳು ಹುಟ್ಟುಕೊಂಡವು ಮತ್ತು ಈತರಹದ ಮೌಲ್ಯಗಳು ಹೆಚ್ಚು ಪ್ರತಿಪಾದಿತವಾದವು. ಉದಾ: ಈ ಎರಡೂ ದಾನ ಶಾಸನಗಳನ್ನು ಗಮನಿಸಬಹುದು.

1. ಕನ್ನಯ್ಯ ಎರಡು ದೇವಾಲಯ ಮಾಡಿಸಿ ಕೆರೆಯನ್ನು ಕಟ್ಟಿಸಿದ.[15]

2. ಹೆರ್ಗಡೆ ನಾಕಿಮಯ್ಯ ದೇವಾಲಯ ಮಾಡಿಸಿ ಗದ್ದೆಯನ್ನು ದಾನ ಬಿಟ್ಟನು.[16]

ದಾನಕೊಡುವ ಮೂಲಕ ಸ್ಥಳೀಯರ ನಂಬಿಕೆಗಳನ್ನು ತಮ್ಮ ಪರವಾಗಿ ಗಟ್ಟಿಗೊಳಿಸಿಕೊಳ್ಳುವ ಉದ್ದೇಶಗಳು ಹುದುಗಿಕೊಂಡಿವೆ.

ಸೊರಬ ಪರಿಸರದಲ್ಲಿ ಸುಮಾರು 260 ಮಾಸ್ತಿಕಲ್ಲುಗಳು ದೊರಕುತ್ತವೆ. ವೀರಗಲ್ಲುಗಳನ್ನು ಹೊರತು ಪಡಿಸಿ ಮಾಸ್ತಿಕಲ್ಲುಗಳನ್ನು ನೋಡಲು ಬಾರದು. ಮಾಸ್ತಿಕಲ್ಲುಗಳು ರಚನೆಗೊಳ್ಳುವ ಒತ್ತಡದ ಹಿನ್ನೆಲೆಯನ್ನು ಗಮನಿಸುವುದು ಸೂಕ್ತ. ಇಲ್ಲಿ ದೊರಕುವ ಮಹಾಸತಿಕಲ್ಲುಗಳು ಬಹುತೇಕ ಮೇಲ್ವರ್ಗದ ವೀರರ ಪತ್ನಿಯರ ಕಲ್ಲುಗಳು. ಹೆಣ್ಣು ಮೇಲ್ವರ್ಗದಲ್ಲಿ ಒಂದು ಶೋಷಣೆಯ ವಸ್ತು ಅಥವಾ ಅನುಭೋಗಿ ಸರಕು. ಆಕೆ ಭೂಮಿಯ ಸಂಬಂಧವನ್ನು ಹೊಂದಿದ್ದವಳು. ಭೂಮಿಯ ಮೇಲೆ ಯಾವ ಬಗೆಯ ವ್ಯಾಮೋಹ ಅಂದಿನ ಮೇಲ್ವರ್ಗಕ್ಕೆ ಇತ್ತೋ ಅದಕ್ಕಿಂತ ಭಿನ್ನವಾದ ವ್ಯಾಮೋಹ ಮೇಲ್ವರ್ಗದವರಿಗೆ ಇದ್ದಿರಲು ಸಾಧ್ಯವಿಲ್ಲ. ಹಾಗೇನಾದರೂ ಇದ್ದಿದರೆ ಮಹಾಸತಿ ಕಲ್ಲುಗಳು ಹುಟ್ಟುಕೊಳ್ಳುತ್ತಿರಲಿಲ್ಲ. ತಾವು ಅನುಭವಿಸುವ ಭೂಮಿಯಾಗಲಿ, ಹೆಣ್ಣಾಗಲಿ ಬೇರೆಯವರಿಂದ ಅನುಭೋಗಿಸಲ್ಪಡುವುದನ್ನು ಊಳಿಗಮಾನ್ಯ ವವಸ್ಥೆಯನ್ನು ಪ್ರತಿಪಾದಿಸುವ ಒಂದು ವರ್ಗ ಎಂದಿಗೂ ಸಹಿಸಲಾರದು. ಈ ಅಸಹ್ಯದ ಪರಿಣಾಮವಾಗಿ ಮಹಾಸತಿಯ ಕಲ್ಪನೆ ಭಾರತೀಯ ಸಮಾಜ ವ್ಯವಸ್ಥೆಯ ಒಳಗಡೆ ರೂಢಿಗೊಂಡಿದೆ. ಯುದ್ಧದಲ್ಲಿ ಸತ್ತ ವೀರರು ತಮ್ಮ ನಂತರ ತಮ್ಮ ಪತ್ನಿಯರು ಇತರ ಪುರುಷರೊಡನೆ ಸಂಬಂಧವಿರಿಸಕೊಂಡು ಸುಖವಾಗಿರುವುದನ್ನು ಯಾವ ಕಾರಣಕ್ಕೂ ಸಹಿಸಲಾರರು. ಯುದ್ಧ ಪ್ರಧಾನ ದಿನಗಳಾದ ಅಂದು ಬಹುತೇಕ ರಾಜರು ಮತ್ತು ರಾಜಪರಿವಾರದವರು ಮಡಿಯಲೇ ಬೇಕಾಯಿತು. ಇಂತಹವರ ಅಧೀನದಲ್ಲಿದ್ದ ಸಾವಿರಾರು ಸಂಖ್ಯೆ ಹೆಣ್ಣುಗಳು ಯಾವ ಕಾರಣಕ್ಕೂ ತಮ್ಮ ಮೂಲಪ್ರವೃತ್ತಿಯಾದ ಕಾಮವಾಸನೆಯಿಂದ ವಿಮುಕರಾಗಿರಲು ಸಾಧ್ಯವಿಲ್ಲ. ಇದನ್ನು ಮನಗಂಡ ಮೇಲ್ವರ್ಗದ ಪುರುಷರು ಅದನ್ನು ತಪ್ಪಿಸಿ ಹೆಣ್ಣುಗಳು ಕೇವಲ ತಮ್ಮ ಸುಖಕ್ಕಷ್ಟೇ ಬಳಕೆಯಾಗುವ ಆಸ್ತಿಯಂತೆ ರೂಪಿಸಿಕೊಳ್ಳಲು ಹೆಣ್ಣಿಗೆ ಮಹಾಸತಿ ಕಲ್ಪನೆಯನ್ನು ಆರೋಪಿಸಿದರು. ತಮ್ಮ ಮರಣ ನಂತರ ಚಿತೆಯೆರುವ ಈ ಸತಿಯರು ಮಹಾಸತಿಯರಾಗುತ್ತಾರೆ. ಪರಲೋಕದಲ್ಲಿ ತಮ್ಮ ಗಂಡನನ್ನು ಕೂಡುತ್ತಾರೆ ಎನ್ನುವ ಪಾರಲೌಕಿಕ ಕಲ್ಪನೆಯನ್ನು

[illegible]

[illegible]

[illegible]

[illegible]

[illegible]

ಮಹಾ ಸತಿ ಕಲ್ಪನೆಯ ಆಚರಣೆಗಳಲ್ಲಿ ಹೇರಿ ಗಟ್ಟಿಗೊಳಿಸಲಾಯಿತು. ಉದಾ:ಈ ಕೆಳಗಿನ ಶಾಸನಗಳನ್ನು ಗಮನಿಸಬಹುದು.

1.ಚಂದ್ರಗುತ್ತಿ ಸೀಮೆಯ ಹರೂರು ಅನ್ನುಮಗೌಡನ ಹೆಂಡತಿ ಭೈರವ ಗೌಡತಿ ಸಹಗಮನವಾದಳು.[17]

2. ಕಮ್ಮಗೌಡರ ಮಗ ಮದವರಸ ಮತ್ತು ಆತನ ಸತಿ ಕೂಡೆ ಸ್ವರ್ಗಸ್ಥರಾದರು.[18]

3. ಹರೂರು ಚಾವುಂಡ ಗೌಡನ ಮಗ ಬೊಮ್ಮಗೌಡನು ಸತ್ತಾಗ ಆತನ ಹೆಂಡತಿ ಬೊಮ್ಮಗೌಡಿ ಸ್ವರ್ಗಸ್ಥಳಾದಳು.[19]

ಮೇಲ್ಕಂಡ ಶಾಸನಗಳ ಉಲ್ಲೇದನ್ವಯ ಮೂರು ಶಾಸನಗಳ ಮೂವರು ಸತಿಯರು ಸಾಮಾಜಿಕವಾಗಿ ಮೇಲ್ಜಾತಿಯವರು ಮತ್ತು ಉತ್ಪಾದನ ಒಡತನಗಳ ಹಕ್ಕನ್ನು ಹೊಂದಿದ್ದವರು. ಉತ್ಪಾದನಾ ಒಡೆತನಗ ವಿಚಾರದಲ್ಲಿ ಯಾವ ಬಗೆಯ ಸಂಬಂಧವನ್ನು ಹೊಂದಿರಲು ಸಾಧ್ಯವು ಅದಕ್ಕಿಂತ ಭಿನ್ನಾವಾದ ಅಭಿಪ್ರಾಯವನ್ನು ಅವರ ಪತ್ನಿಯರ ಬಗ್ಗೆ ಹೊಂದಿರಲು ಸಾಧ್ಯವಿಲ್ಲ. ಈ ತತ್ವವನ್ನು ನೇರವಾಗಿ ಪ್ರತಿಪಾದಿಸಲು ಸಾಧ್ಯವಿಲ್ಲ. ಏಕೆಂದರೆ ನೇರವಾದ ತತ್ವಚಾರಣೆಗಳು ವಾಸ್ತವವನ್ನು ಅದರ ನೈಜತೆಯಲ್ಲಿ ಪ್ರತಿಬಿಂಬಿಸುತ್ತವೆ. ನೈಜ ವಿಚಾರಗಳು ಆ ಆಚರಣೆಗೆ ಒಳಪಡಬೇಕಾದ ಸಮೂಹಕ್ಕೆ ನೇರವಾಗಿ ಹೇರಲ್ಪಟ್ಟರೆ, ಅವುಗಳಿಂದ ತಮ್ಮ ರಕ್ಷಣೆಯನ್ನು ಪಡೆದುಕೊಳ್ಳುವ ವಾಸ್ತವದ ಪ್ರತಿಕ್ರಿಯೆಯನ್ನು (ವಿರೋಧವನ್ನು) ವ್ಯಕ್ತಪಡಿಸಬೇಕಾಗುತ್ತದೆ. ಇದನ್ನು ಕಂಡುಕೊಂಡ ಮೇಲ್ಜಾತಿಯ ಪುರುಷ ವರ್ಗ ಪಾರಲೌಕಿಕ ಕಲ್ಪನೆಯ ಮೂಲಕ ಸತಿಪದ್ಧತಿಯನ್ನು ಒಂದು ಶ್ರೇಷ್ಠ ಮೌಲ್ಯವಾಗಿ ಪ್ರತಿಷ್ಠಾಪಿಸಿ ಆ ಮೂಲಕ ಸ್ತ್ರೀಯರನ್ನು ಪ್ರಚೋದಿಸಿ ತಮ್ಮ ವಿಕೃತ ಭಾವನೆಯನ್ನು ತೃಪ್ತಿಪಡಿಸಿಕೊಳ್ಳುತ್ತಿದ್ದರು.

ವೀರಗಲ್ಲುಗಳಲ್ಲಿ ಎರಡು ವಿಧಗಳನ್ನು ಗುರುತಿಸಬಹುದು

1. ಮೇಲ್ವರ್ಗದವರಿಗಾಗಿ ಸೃಷ್ಟಿಸಿದ ವೀರಗಲ್ಲುಗಳು,

2. ಕೆಳವರ್ಗದವರಿಗಾಗಿ ನಿರ್ಮಿಸಿದ ವೀರಗಲ್ಲುಗಳು. ಮೇಲ್ವರ್ಗದ ವೀರರು ಉತ್ಪಾದನಾ ಒಡೆತನದ ಹಕ್ಕನ್ನು ಒಳಗೊಂಡಂತೆ ಸಾಮಾಜಿಕ ಪ್ರತಿಷ್ಠೆಗಾಗಿ ಹೋರಾಟಕ್ಕೆ ಮುಂದಾಗಿದ್ದಾರೆ. ಕೆಳವರ್ಗದ ವೀರರು

ಪಾರಲೌಕಿಕದ ಕಲ್ಪನೆಯಿಂದ ಪ್ರಚೋದನೆಗೊಂಡು ಹೋರಾಡಿ ಮಡಿದವರಾಗಿದ್ದಾರೆ. ಕೆಳವರ್ಗದ ಪುರುಷರಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧ ಮಾನವೀಯ ಮೌಲ್ಯಗಳಿಂದ ಕೂಡಿದ್ದಾಗಿದೆ. ಈ ಕಾರಣಕ್ಕೆ ಅವರು ಮೇಲ್ವರ್ಗದವರಂತೆ ಹೆಣ್ಣನ್ನು ಒಂದು ಖಾಸಗಿ ಆಸ್ತಿ ಎಂದು ಭಾವಿಸದೇ ತಮ್ಮ ಜೀವನಸಾಡಿಗಳನ್ನಾಗಿ ಸ್ವೀಕರಿಸಿದ್ದಾರೆ. ಸ್ತ್ರೀಯರ ಬಗ್ಗೆ ಇವರಿಗೆ ಪ್ರೀತಿ ನಂಬಿಕೆಗಳಿವೆ. ಈ ಕಾರಣಕ್ಕೆ ಮಹಾಸತಿ ಕಲ್ಪನೆಯು ಈ ವರ್ಗದಲ್ಲಿ ಅಸ್ತಿತ್ವಕ್ಕೆ ಬಂದಿಲ್ಲ ಎನ್ನುವುದು ಗಮನಾರ್ಹ.

ಅಡಿಟಿಪ್ಪಣಿ

1. ಎ.ಕ. VIII,ಸೊರಬ, 255, ಕ್ರಿ.ಶ.1158, ಕಾತವಳ್ಳಿ
2. ಅದೇ. ಸೊರಬ, 250, ಕ್ರಿ.ಶ.1237, ಕುಬಟೂರು
3. ಅದೇ. ಸೊರಬ, 128, ಕ್ರಿ.ಶ.1288, ಹಿರೇ ಹವಲಿ
4. ಅದೇ. ಸೊರಬ, 147, ಕ್ರಿ.ಶ.1132, ಉದ್ರಿ
5. ಅದೇ. ಸೊರಬ, 454, ಕ್ರಿ.ಶ.973, ಬೆನ್ನೂರು (ಚಂದ್ರಗುತ್ತಿ ಹೊ)
6. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:428
7. ಅದೇ. ಪುಟ-429
8. ಅದೇ. ಪುಟ-429
9. ಎ.ಕ. VIII, ಸೊರಬ, 532, ಕ್ರಿ.ಶ.964, ಕುಸವಳ್ಳಿ
10. ಅದೇ. ಸೊರಬ, 337, ಕ್ರಿ.ಶ.1116, ಕುಣಿತೆಪ್ಪ
11. ಅದೇ. ಸೊರಬ, 289, ಕ್ರಿ.ಶ.1138, ದೇ.ಹಕ್ಕಲು
12. ಅದೇ. ಸೊರಬ, 19, ಕ್ರಿ.ಶ.1152, ಕೊಡಕಣಿ
13. ಅದೇ. ಸೊರಬ, 256, ಕ್ರಿ.ಶ.1218, ಕಾತವಳ್ಳಿ

14 ಅದೇ. ಸೊರಬ, 147, ಕ್ರಿ.ಶ.1132, ಉದ್ರಿ

15 ಅದೇ. ಸೊರಬ, 44, ಕ್ರಿ.ಶ.971, ಜಂಬೆಹಳ್ಳಿ

16 ಅದೇ. ಸೊರಬ, 70, ಕ್ರಿ.ಶ.938, ಓಟೂರು

17 ಅದೇ. ಸೊರಬ, 163, ಕ್ರಿ.ಶ.442, ಹರೂರು

18 ಅದೇ. ಸೊರಬ, 214, ?, ಜಡಿಹಳ್ಳಿ

19 ಅದೇ. ಸರೊಬ, 165, ?, ಹರೂರು

ಅಧ್ಯಾಯ :6

ಸಮಾರೋಪ

ಸೊರಬ ಪರಿಸರದಲ್ಲಿ ದೊರೆಯುವ ವೀರಗಲ್ಲು, ಮಾಸ್ತಿಕಲ್ಲು, ದಾನ ಸ್ಮಾರಕಗಳು ಮತ್ತು ಸೋಸಾಸ ಕಲ್ಲುಗಳು ಸೊರಬ ಪ್ರದೇಶದ ಮಧ್ಯಕಾಲೀನ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆಯ ಮೇಲೆ ಸ್ಪಷ್ಟವಾಗಿ ಬೆಳಕು ಚೆಲ್ಲುತ್ತವೆ ಎನ್ನುವುದು ಈ ಅಧ್ಯಯನದಲ್ಲಿ ಸಾಭೀತಾಗಿದೆ.

ಮೇಲೆ ಸೂಚಿಸಿದ ಪ್ರಧಾನ ಆಕರಗಳನ್ನು ಬಳಸಿಕೊಂಡು, ಮಧ್ಯಕಾಲದಲ್ಲಿ ಸೊರಬ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಆರ್ಥಿಕ ಚಟುವಟಿಕೆಗಳನ್ನು ಗುರುತಿಸಲಾಗಿದೆ. ಈ ಆರ್ಥಿಕ ಚಟುವಟಿಕೆಯು ಅದರ ವಿಕಾಸದ ಹಂತದಲ್ಲಿ ಬೆಳೆದು ಬಂದ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಆ ಮೂಲಕ ಅದರ ಉಪ ಉತ್ಪನ್ನಗಳಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳು ಬದಲಾಗುತ್ತಾ ಬಂದ ಲಯದ ಗತಿಯನ್ನು ಕುರಿತು ಚರ್ಚೆಮಾಡಲಾಗಿದೆ. ಹೀಗೆ ಚರ್ಚಿಸುವ ಸಂದರ್ಭದಲ್ಲಿ ಈ ಅಧ್ಯಯನ ವಿಧಾನವು ಗತಿತಾರ್ಕಿಕ ವಿಶ್ಲೇಷಣಾ ಮಾದರಿಯನ್ನು ಅನುಸರಿಸಿದೆ. ಅಂದರೆ ಅಲ್ಲಿನ ಭೌಗೋಳಿಕ ಪರಿಸರ, ಆ ಹಿನ್ನೆಲೆಯಲ್ಲಿ ಅದು ವಿಕಾಸ ಹೊಂದಿದ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ.

ಸೊರಬದ ಎರಡು ವಿಭಿನ್ನ ಸ್ವರೂಪದ ಭೌಗೋಳಿಕ ಕೂಡುತಾಣವು ಈ ಅಧ್ಯಯನಕ್ಕೆ ಒಳಪಟ್ಟಿದೆ. ಮಲೆನಾಡು ಮತ್ತು ಬಯಲು ಸೀಮೆಗಳ ಕೂಡುತಾಣದ ಸೀಮೆಯ ಅಧ್ಯಯನ ಇದಾಗಿದೆ. ಇಂಥ ಪರಿಸರದಲ್ಲಿ ಪಶುಸಂಗೋಪನೆಯ ಒಂದು ಗುಂಪು, ಬೇಟೆಗಾರರ ಮತ್ತೊಂದು ಗುಂಪು, ಕೃಷಿಕರ ಇನ್ನೊಂದು ಗುಂಪು. ಹೀಗೆ ವಿಭಿನ್ನ ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸಿದ ಗುಂಪುಗಳು ಅಸ್ತಿತ್ವದಲ್ಲಿವೆ. ಮಧ್ಯಕಾಲೀನ ಸಂದರ್ಭದ ಹೊತ್ತಿಗೆ ಈ ಮೂರು ಗುಂಪುಗಳಲ್ಲಿ ಕೆಲವು ಚಾರಿತ್ರಿಕ ಕಾರಣಗಳಿಂದ, ಸಂಘರ್ಷ ಮತ್ತು ಹೊಂದಾಣಿಕೆಯ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಅದು ಈ ಅಧ್ಯಯನದಲ್ಲಿ ಪ್ರಧಾನವಾಗಿ ಚರ್ಚೆಗೆ ಒಳಪಟ್ಟಿದೆ. ಕೃಷಿ ವಿಸ್ತರಣೆ, ಕೆರೆಕಟ್ಟೆಗಳ ನಿರ್ಮಾಣ, ಗೋಪಾಲನೆ, ಹುಲ್ಲುಗಾವಲುಗಳ ವಿಸ್ತರಣೆ ಮತ್ತು ಒಡೆತನ, ಕಾಡಿನ ನಾಶ, ಬೇಟೆವೃತ್ತಿ ಅವಲಂಬಿತರ ಅಸ್ತಿತ್ವಕ್ಕೆ ಧಕ್ಕೆ, ಇಂಥ ಸನ್ನಿವೇಶಗಳು ನಿರ್ಮಾಣವಗಿ ಈ 3 ಗುಂಪುಗಳಲ್ಲಿ ವಿಭಿನ್ನ ಸ್ವರೂಪದ ಸಂಘರ್ಷ ಮತ್ತು ಅದರ ವಿಸ್ತಾರ, ಪ್ರಭಾವವೂ ಇವರ ಬದುಕಿನ ಸ್ಥಿತ್ಯಂತರಕ್ಕೆ ಸಾಕಷ್ಟು ಕಾರಣವಾಗಿದೆ. ರಾಷ್ಟ್ರಕೂಟರ ಆಡಳಿತಾವಧಿಯಕಾಲ ಈ ಪ್ರದೇಶದಲ್ಲಿ ವ್ಯಾಪಕವಾಗಿದ್ದು ಅದು ಪ್ರತಿಪಾದಿಸಿರುವ ಅಧಿಕಾರ, ಆಡಳಿತ ವಿಧಾನದ ಸ್ವರೂಪಗಳು ಇಲ್ಲಿನ ಸಾಮಾಜಿಕ ಸಂಗತಿಳಗ ಮೇಲೆ

ಬಾಹ್ಯ ಪರಿಣಾಮವಾಗಿ ಸೇರಿಕೊಂಡಿವೆ. ರಾಷ್ಟ್ರಕೂಟರ ನಂತರ ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಸಂದರ್ಭದ ಕಾಲದಲ್ಲಾಗಲೇ ವೀರಶೈವ, ಜೈನ ಧರ್ಮಗಳು ವೈಧಿಕ ಧರ್ಮಕ್ಕೆ ಪ್ರಬಲ ಅಘಾತವನ್ನು ಕೊಟ್ಟಿರುವುದು ಚಾರಿತ್ರಿಕ ವಿಷಯ. ಈ ಚಾರಿತ್ರಿಕ ಸಂಗತಿ, ಸೊರಬ ಪರಿಸರದ ಜನ ಜೀವನದ ಮೇಲೂ ಸಾಕಷ್ಟು ಬದಲಾವಣೆಗಳನ್ನುಂಟು ಮಾಡಿದೆ. ಈ ಇಷ್ಟು ಚಾರಿತ್ರಿಕ ಸಂಗತಿಗಳು ಸೊರಬ ಪರಿಸರದ ಜನರ ಬದುಕನ್ನು ನಿರ್ಧರಿಸುವ ಪ್ರಧಾನ ಅಂಶಗಳು.

ಬೇಟೆಯನ್ನವಲಂಬಿಸಿದ ಒಂದು ಗುಂಪು ಕಾಡಿನ ನಾಶವಾಗುತ್ತಿದ್ದಂತೆ ತಮಗೆ ಸಮೀಪದಲ್ಲಿರುತ್ತಿದ್ದ ಪಶುಪಾಲಕರ ಆರ್ಥಿಕ ಚಟುವಟಿಕೆಗೆ ತೊಂದರೆ ಕೊಡಬೇಕಾದ ಸ್ಥಿತಿ ಒದಗಿ ಬಂದಿರಬಹುದು. ಈ ಕಾರಣಕ್ಕೆ ಗೋವುಗಳನ್ನು ಕದಿಯುವ ಆಮೂಲಕ ತಮ್ಮ ಜೀವನ ಮತ್ತು ಅಸ್ಥಿತ್ವ ರಕ್ಷಣೆಯ ಕಾರ್ಯಕ್ರಮಗಳನ್ನು ರೂಪಿಸುವ ತಂತ್ರವನ್ನು ಇವರು ರೂಪಿಸಿಕೊಂಡಿದ್ದಾರೆ. ಈ ಸಂಘರ್ಷದ ಪ್ರವಾಹದಲ್ಲಿ ಒಂದು ಬಗೆಯ ಹೊಂದಾಣಿಕೆಯ ಬದುಕು ರೂಪುಗೊಂಡಿರಲು ಸಾಧ್ಯ. ಇದೇ ಸಂದರ್ಭದಲ್ಲಿ ಈ ಸೀಮಿತ ಜನ ಸಮೂಹದ ಮೇಲೆ ಹೊರಗಿನ ರಾಜಕೀಯ ಒತ್ತಡಗಳು ಧಾರ್ಮಿಕ ಆಕ್ರಮಣಗಳು ಜರುಗಿವೆ. ಇಂಥ ಒತ್ತಡಗಳಿಗೆ ಈ ಪರಿಸರದ ಒಟ್ಟು ಜನರು ಹೊಂದಿಕೊಂಡು ಹೊರಗಿನ ಸಂಗತಿಗಳಿಗೆ ತೋರಿಸಿರುವ ಪ್ರತಿಕ್ರಿಯೆ ತುಂಬಾ ಗಮನಾರ್ಹವಾದುದು. ಈ ಎಲ್ಲಾ ಕಾರಣಗಳ ಫಲಿತಗಳಾಗಿಯೇ ಇಲ್ಲಿನ ವೀರಗಲ್ಲುಗಳು, ಧಾನಶಾಸನ, ಗೋಸಾಸ ಕಲ್ಲುಗಳು ಮತ್ತು ಮಾಸ್ತಿ ಕಲ್ಲುಗಳಾಗಿವೆ.

ರಾಜಾಶ್ರಯುವನ್ನು ಕಳೆದುಕೊಂಡ ಈ ಪ್ರದೇಶದ ವೈಧಿಕರ ಅಸ್ಥಿತ್ವ ಸಡಿಲವಾಗಿತ್ತು. ಇಂಥ ಸಂದರ್ಭದಲ್ಲಿ ರಾಜಾಶ್ರಯ ಪಡೆದ ಹೊರಗಿನ ಜೈನ, ವೀರಶೈವ ಧರ್ಮಗಳ ಆಕ್ರಮಣವೂ ಪ್ರಾರಂಭವಾಗಿತ್ತು. ಇಲ್ಲಿಯ ವೈಧಿಕರ ಅಸ್ಥಿತ್ವವೇ ಅವರ ಧಾರ್ಮಿಕ ಆಚರಣೆಗಳು ಮತ್ತು ಪ್ರಬಲ ಅಸ್ಥಿತ್ವದಲ್ಲಿತ್ತು ಎನ್ನುವುದು ಗಮನಾರ್ಹ. ಧರ್ಮ ಮತ್ತು ಅದರ ಆಚರಣೆಗಳು ಸರಳ ಅರ್ಥದಲ್ಲಿದ್ದ, ಉತ್ಪಾದನ ಸಾಧನಗಳ ಒಡೆತನದ ಸಂಬಂಧವನ್ನು ಪ್ರಧಾನವಾಗಿ ಒಳಗೊಂಡಿರುತ್ತದೆ ಎನ್ನುವುದು ಗಮನಾರ್ಹ. ಹೀಗೆ ತಮ್ಮ ಅಸ್ಥಿತ್ವಕ್ಕೆ ಧಕ್ಕೆ ಉಂಟಾದಾಗ ಅದನ್ನು ಅವಲಂಬಿಸಿದ್ದ ಸ್ಥಳೀಯ ಪುರೋಹಿತರು, ಭೂಮಾಲೀಕರು, ವರ್ತಕರು ಅದರ ರಕ್ಷಣೆಗೆ ಹೋರಾಡಬೇಕಾದ ಅವಶ್ಯಕತೆ ಬಿತ್ತು. ಇಂಥ ಸಂದರ್ಭದಲ್ಲಿ ಸ್ಥಳೀಯ ಬೇಟೆಗಾರರನ್ನು ದುಡಿವ ಕೆಳವರ್ಗವನ್ನು

ತಮ್ಮ ಬೆಂಬಲಕ್ಕೆ ಸೆಳೆದುಕೊಳ್ಳುವ ತಂತ್ರಗಳು ಈ ವರ್ಗದಲ್ಲಿ ರೂಪುಗೊಳ್ಳ ತೊಡಗಿದವು. ಈ ಪರಿಸರದಲ್ಲಿ ಸಿಗುವ ಬಹುತೇಕ ಕೆಳವರ್ಗದ ವೀರರನ್ನು ಸ್ತುತಿಸುವ ವೀರಗಲ್ಲುಗಳು ಮತ್ತು ಧಾನ ಶಾಸನಗಳು ಈ ವರ್ಗದ ತಂತ್ರವಾಗಿ ರೂಪುಗೊಂಡವುಗಳು. ಇಂಥ ಸಂದರ್ಭದಲ್ಲಿ ಸ್ಥಳೀಯ ಗೌಡ, ಬ್ರಾಹ್ಮಣ, ಲಿಂಗಾಯಿತ ಮತ್ತು ವರ್ತಕರು ಸ್ಥಳೀಯ ಕೆಳವರ್ಗದ ಜನರನ್ನು ಸಾಮಾಜಿಕವಾಗಿ ಕೀಳೆಂದು ತಿಳಿಯದೆ ಅವರಿಗೂ ತಮ್ಮಂತೆಯೇ ಸಮಾನ ಸ್ಥಾನಮಾನಗಳನ್ನು ಜವಾಬ್ದಾರಿಗಳನ್ನು ಕೊಡುವ, ಆಮೂಲಕ ಅವರನ್ನು ಒಲಿಸಿಕೊಳ್ಳುವ ತಂತ್ರಗಳನ್ನು ಹುಡಿದ್ದಾರೆ. ಉದಾ: ಮಾದಿಗನೊಬ್ಬನು ಊರ ಗೌಡನಾಗಿ ಕೆಲಸ ನಿರ್ವಹಿಸಿದ್ದಾನೆ. ಗೌಡನೊಬ್ಬನು ಶಿಲ್ಪಿ ಮತ್ತು ಲಿಪಿಕಾರನಾಗಿದ್ದಾನೆ. ಕೆಳ ಜಾತಿಯ ವೀರರು ಮತ್ತು ಜೀತದಾರರು ವೀರಗಲ್ಲುಗಳಲ್ಲಿ ಸ್ತುತಿಸಲ್ಪಟ್ಟಿದ್ದಾರೆ. ಚಾರಿತ್ರಿಕವಾಗಿ ಆರ್ಥಿಕ ಮತ್ತು ಸಾಮಾಜಿಕವಾಗಿ ತುಳಿಯಲ್ಪಟ್ಟ ಈ ಕೆಳವರ್ಗದವರು ಇಂದು ಮೇಲ್ವರ್ಗದಿಂದ ಸ್ತುತಿಸಲ್ಪಡುತ್ತಿದ್ದಾರೆ. ಇದು ಗಮನಾರ್ಹ. ಈ ಸ್ಥಿತಿ ಉಂಟಾಗಿರಲು ಕಾರಣಗಳನ್ನು ಕೆದಕಿದರೆ ಮೇಲಿನ ಕಾರಣಗಳೇ ಪ್ರಧಾನವಾಗಿ ಗೋಚರಿಸುತ್ತವೆ. ಇಲ್ಲಿ ಸಿಗುವ ಬಹುತೇಕ ವೀರಗಲ್ಲುಗಳು ಕೆಳ ಜಾತಿ ಮತ್ತು ಕೆಳವರ್ಗದವುಗಳೆಂಬುದು ಗಮನಾರ್ಹ. ಅಂದಿನ ಸಾಮಾಜಿಕ, ಆರ್ಥಿಕ, ಚಾರಿತ್ರಿಕ ಸ್ಥಿತಿಗತಿಗಳನ್ನು ನಿರ್ಧರಿಸುವ ಪ್ರಧಾನ ಸಂದರ್ಭಕೂಡ ಈ ಸ್ವರೂಪದ್ದು.

ಇನ್ನು ಮಾಸ್ತಿಕಲ್ಲುಗಳ ವಿಚಾರ ಬೇರೆ. ಸ್ಥಳೀಯ ಮೇಲ್ವರ್ಗದ ಪುರುಷರು ತಮ್ಮ ಹಿತಾಸಕ್ತಿಗಳನ್ನು ಗಟ್ಟಿಗೊಳಿಸಬೇಕಾದ ಅನಿವಾರ್ಯತೆ ಅವರಿಗಿತ್ತೆಂಬುದು ಸ್ಪಷ್ಟವಾಗಿದೆ. ಈ ಕಾರಣಕ್ಕೆ ಅವರು ಕೆಳವರ್ಗದವರನ್ನು ಒಲಿಸಿಕೊಂಡಿದ್ದು ಕೂಡ. ಈ ಪ್ರಬಲವರ್ಗದ ಪುರುಷರು ಖಾಸಗಿ ಆಸ್ತಿಯ ಹಕ್ಕನ್ನುಳ್ಳವರು. ಈ ಹಕ್ಕನ್ನು ಹೊರತುಪಡಿಸಿ ಅವರಿಗೆ ಅಸ್ತಿತ್ವಕ್ಕಾಗಿ ಹೋರಾಡಲೇಬೇಕು. ಇಂಥ ಹೋರಾಟಗಳಲ್ಲಿ ಮಡಿದ ಅನೇಕರ ಹೆಂಡತಿಯರು ಸಹಗಮನವನ್ನು ಮಾಡಬೇಕಿತ್ತು. ಭಾರತದ ಫ್ಯೂಡಲ್ ಕಲ್ಚರ್ ಇದನ್ನು ಪ್ರಬಲವಾಗಿ ಈ ವರ್ಗದ ಮಹಿಳೆಯರ ಮೇಲೆ ಹಿಂದಿನಿಂದಲೂ ಹೇರಿಕೊಂಡು ಬಂದಿದೆ. ಮಹಿಳೆಯರ ಮೇಲೆ ಈ ಬಗೆಯ ಒತ್ತಡವನ್ನು ಹೇರುವ ತಂತ್ರಗಳು ಧಾರ್ಮಿಕ ಆಚರಣೆಗಳು ಮತ್ತು ತತ್ವಗಳ ಮೂಲಕ ಒತ್ತಾಯಿಸುತ್ತಿದ್ದವು. ಹಿಂದೂ ಧರ್ಮವನ್ನು ಒಳಗೊಂಡಂತೆ ಯಾವುದೇ ಧರ್ಮದಲ್ಲಿ ಪಾರಲೌಕಿಕ ಕಲ್ಪನೆಗಳು ಹೀಗೆ ಹೇರಲ್ಪಡುವ ಹಿನ್ನೆಲೆಯಲ್ಲಿ ಈ ಬಗೆಯ ಯಾವುದಾದರೂ ಉದ್ದೇಶಗಳು ಹುದುಗಿ ಕೊಂಡಿರುತ್ತವೆ. "ಪತಿಯೊಡನೆ ಸಹಗಮನ

ಅನುಭವಿಸಬಹುದು" ಎನ್ನುವ ಕಲ್ಪನೆಯನ್ನು ಸಹಗಮನದ ಸಂಪ್ರದಾಯಕ್ಕೆ ಆರೋಪಿಸಲಾಗಿದೆ. ದೈಹಿಕವಾಗಿ ಈ ಮೂಲಕ ಮಾನಸಿಕವಾಗಿ ದುರ್ಬಲವಾದ ಈ ವರ್ಗದ ಮಹಿಳೆಯರು ವಿಧಿಯಿಲ್ಲದೆ ಈ ಸ್ಥಿತಿಯನ್ನು ಒಪ್ಪಿ ಆಚರಿಸಲೇ ಬೇಕಾಗಿತ್ತು. ಸೊರಬದಲ್ಲಿ ದೊರಕುವ ಬಹುತೇಕ ಮಾಸ್ತಿಕಲ್ಲುಗಳು ಈ ಹಿನ್ನೆಲೆಯನ್ನು ಒಳಗೊಂಡಿವೆ. ಮಹಿಳೆಯರನ್ನು ಒಂದು ಖಾಸಗಿ ಆಸ್ತಿಯನ್ನಾಗಿ ತಿಳಿಯುವ ಫ್ಯೂಡಲ್ ಮನಸ್ಸುಗಳು ಈ ಆಸ್ತಿಯು ಪರರಿಂದ ಅನುಭವಿಸಲ್ಪಡುವುದನ್ನು ಎಂದಿಗೂ ಸಹಿಸದ ವಿಕೃತ ಮನಸ್ಸಿನ ಸ್ಥಿತಿಗೆ ಒಳಪಟ್ಟಿರುತ್ತಾರೆ. ತಮ್ಮ ಮರಣಾ ನಂತರ ಇವರು ತಮ್ಮೊಂದಿಗೆ ಮಡಿದರೆ ಈ ಸುಖದ ಅವಕಾಶ ಅವರಿಗೆ ಇರುವುದಿಲ್ಲವೆಂದು ಅರಿತು ಈ ಆಚರಣೆಯನ್ನು ಗಟ್ಟಿಗೊಳಿಸಲಾಗಿದೆ.

ಕೆಳವರ್ಗದ ವೀರಗಲ್ಲುಗಳಲ್ಲೂ ಪಾರಲೌಕಿಕ ಕಲ್ಪನೆಯ ಉಲ್ಲೇಖಗಳು ಹೇರಳವಾಗಿವೆ. ಕೆಳವರ್ಗದ ಜನರನ್ನು ಯುದ್ಧಕ್ಕೆ ಪ್ರಚೋದಿಸುವ ಉದ್ದೇಶವಾಗಿ ಈ ಕಲ್ಪನೆಯನ್ನು ಹೇರಲಾಗಿದೆ. ಸಾಕಷ್ಟು ಶಾಸನಗಳಲ್ಲಿ "ಸತ್ತು ಸುರಲೋಕ ಪ್ರಾಪ್ತನಾದ" ಎನ್ನುವ ಉಲ್ಲೇಖಗಳು ಈ ಮಾತಿಗೆ ಆಧಾರಗಳಾಗಿವೆ.

ಕೆಳವರ್ಗದ ಈ ವೀರರಿಗೆ ಖಾಸಗಿ ಆಸ್ತಿಯ ಅನುಭವ, ಹಕ್ಕುಗಳು ಇರದೇ ಇದ್ದುದರಿಂದ, ಅವರ ಪತ್ನಿಯರ ವಿಚಾರಗಳಲ್ಲಿಯೂ ಈ ಮನಸ್ಸು ಸೃಷ್ಟಿಯಾಗಲಿಕ್ಕಿಲ್ಲ. ಇಂಥ ವರ್ಗಗಳಲ್ಲಿ ಪತ್ನಿಯರು ಸಹಗಮನವನ್ನು ಆಚರಿಸಬೇಕಿಲ್ಲ. ಹಾಗಾಗಿ ಕೆಳವರ್ಗದ ಮಹಿಳೆಯರು ಎಲ್ಲಿಯೂ ಮಾಸ್ತಿಕಲ್ಲುಗಳಲ್ಲಿ ಸ್ತುತಿಸಲ್ಪಟ್ಟಿಲ್ಲ. ಅಂತವರಿಗೆ ಈ "ಮಹಾಸತಿ" ಕಲ್ಪನೆಯ ಆರೋಪದ ಅಗತ್ಯಕೂಡ ಇರಲಿಲ್ಲ. ಹೀಗೆ ಆಚರಣೆಗಳು ಪಾರಲೌಕಿಕ ಕಲ್ಪನೆಯ ಹಿಂದೆ, ಉತ್ಪಾದನಾ ಒಡೆತನದ ಸಂಬಂಧ ಮತ್ತು ಅನುಭಗಳಿಂದ ಕೂಡಿದ ಮನಸ್ಸುಗಳು ಕೆಲಸ ಮಾಡಿರುತ್ತವೆ. ಇದು ಸತ್ಯಕೂಡ.

ಒಟ್ಟು ಈ ಅಧ್ಯಯನದ ಫಲಿತಗಳನ್ನು ಕುರಿತ ಸ್ಥೂಲ ರೂಪವನ್ನು ಸಮಾರೋಪದಲ್ಲಿ ಹಿಡಿದಿಡಲಾಗಿದೆ. ಸೊರಬ ಪರಿಸರದಲ್ಲಿ ದೊರಕಿದ ಎಲ್ಲಾ ಶಾಸನಗಳ ಸೂಕ್ಷ್ಮ ಮತ್ತು ಸಮಗ್ರ ಅಧ್ಯಯನ ಇದಲ್ಲ. ಒಂದು ಸ್ಥೂಲ ಅಧ್ಯಯನ ಮಾತ್ರ. ಈ ಮಾಹಿತಿಗಳನ್ನು ಕುರಿತು ಅವುಗಳ ಬಹುಮುಖಗಳನ್ನು ವಿಭಿನ್ನ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡುವ ಅಗತ್ಯತೆಯನ್ನು ಕೂಡ ಈ ಅಧ್ಯಯನ ಸಂದರ್ಭದಲ್ಲಿ ಖಚಿತವಾಗಿ ಹೇಳಬಹುದು.

ಅಧ್ಯಾಯ:7

ಅನುಬಂಧಗಳು

[illegible]

[illegible]

[illegible]

[illegible]

[illegible]

[illegible]

7.1. ಸ್ಥಳನಾಮಗಳು

1. ಅಣ್ಣಿಗೇರಿ
2. ಅಣ್ಣುಗಿ
3. ಅನವಳ್ಳಿ
4. ಅಸಕಹಳ್ಳಿ
5. ಅಸಗನಹಳ್ಳಿ
6. ಆಕಿರುಮಡಿ
7. ಆವಲಿ
8. ಇಡುಗೋಲು
9. ಉದ್ಧರೆ
10. ಎಳಂಬಳ್ಳಿ
11. ಕಚ್ಚವಿ
12. ಕಬ್ಬೂರ್ಠಿ
12. ಕಮರವಿರು
13. ಕರುಲಿಗೆ
14. ಕಲ್ಲಂಬಿ
15. ಕಸರುಗುಪ್ಪೆ
16. ಕಂತನಹಳ್ಳಿ
17. ಕಾತೂರು
18. ಕಾತಿಕವಳ್ಳಿ
19. ಕಾನುಕಾಳಪಳ್ಳಿ
20. ಕುಣಿತೆಪ್ಪ
21. ಕುಪ್ಪಗದ್ದೆ
22. ಕುಪ್ಪಟೂರು
23. ಕುಪ್ಪೆ
24. ಕುಳವಾಡಿ
25. ಕುಪ್ಪೆ
26. ಕುಳವಾಡಿ
27. ಕುಂದಗಸೇಪೆ
28. ಕುಂಬ್ಬಿಸೆ
29. ಕೂರಲಿ(ಕೂದಲಿ,ಮಿರಲಿ, ಬೆಟ್ಟದಕೂರಲಿ)
30. ಕೆರೆಯಹಳ್ಳಿ
31. ಕೆಲ್ಲಿಗಟ್ಟೆಯ ಬಯಲು
32. ಕೊಡಕಣಿ
33. ಕೊರಕೋಡು
34. ಗಂಗವಳ್ಳಿ
35. ಗಿಣಿವಾಲಗುಂಡಿ
36. ಗುತ್ತಿ (ಚಂದ್ರಗುತ್ತಿ)
37. ಗುಡವಿ
38. ಗುಂಜನೂರು
39. ಗೆಂಡವಣ
40. ಚಿಕ್ಕಚವುಟಿ
41. ಜಿಗಳಿಕೆರೆ

42.ತಡೆಯೂರು
43. ತರವೂರು
44. ತವನಿಧಿ
45. ತವುದಟ್ಟಿ
46.ತಳವೆ
47.ತಳ್ದೊದಟ್ಟಿ
48.ತಾಳಗುಪ್ಪೆ
49.ತುಡುನಿಧಿ
50.ತೊಡದ ತೆಪ್ಪ
51.ತೊತ್ತೂರು
52.ತೊದವಳ್ಳಿ
53.ದಂಡಹಳ್ಳಿ
54.ದಿಮ್ಮಿಟ್ಟಿಸೆ
55.ದೇವರಹಳ್ಳಿ
56.ದೋರವಳ್ಳಿ
57.ನಡುವಳ್ಳಿ
58.ನಲ್ಲೂರು
59.ನಿರಲಿ
60.ಪರಿಗೆ
61.ಪೋಚಹಲಿ
62.ಬಮ್ಮಹಳ್ಳಿ
63.ಬರಗಿ (ಬಾರಗಿ)
64.ಬಳ್ಳಿಬಯಲು
65.ಬಿದಿರಗೆರೆ
66.ಬಿನಕಾಳಿ
67.ಬಿನವೂರು
68.ಬೆದವಟ್ಟಿ
69.ಬೆಳುವಗೆ
70.ಬೆಳ್ಮಣಿ
71.ಮನವನೆ
72.ಮಹರೂರು
73.ಮೂವಡಿ
74.ಲೊಕ್ಕಿವಳ್ಳಿ
75.ವಿಟ್ಟೆಗೆರೆ
76.ವೈಚಿನಾಡು
77.ಸಕುನವಳ್ಳಿ
78.ಸತ್ರದಹಳ್ಳಿ
79.ಸಾತೆಯನಹಳ್ಳಿ
80.ಸಾರೆಯ(ಸಾರೆಕೊಪ್ಪ)
81.ಸಿಕ್ಕ
82.ಸಿಡಣಿ
83.ಸಿಮ್ಮನೂರು
84.ಸೊರಬ
85.ಹರಳೂರು

86. ಹಂಚೆ

87. ಹಿರಯುಸಕುನ

88. ಹೆರರಿ

89. ಹೆರಾಸೆ

90. ಹೆಳ್ದಿಸೆ

91. ಹೈವೆಯು

92. ಹೊಸಪ್ವೂರು

93. ಹೊಸಹಳ್ಳಿ

94. ಹೊಂಮಿಸೆ

7.2. ವ್ಯಕ್ತಿನಾಮಗಳು

1. ಅಂಗರ
2. ಅಜವೇಯ
3. ಅಜ್ಜಯ್ಯನಾಯಕ
4. ಅನ್ನಮ್ಮಗೌಡ
5. ಅರಬದ್ದಗಿ
6. ಇಡುಕೆಯನಾಯಕ
7. ಉತ್ತಗೌಡ
8. ಏಚಗೌಡ
9. ಏರಹಿಸೆಟ್ಟಿ
10. ಕಗ್ಗಜ್ಜ
11. ಕಚ್ಚವಿಕೊಲತಿಲಕ
12. ಕಮ್ಮಗೌಡ
13. ಕರಿಯಕೆಂಚ
14. ಕಾಮ
15. ಕಾಳಗೌಡ
16. ಕಾಳರಸ
17. ಕಾಳಯ್ಯ
18. ಕಾಳಿಗ
19. ಕಿಳ್ಳ
20. ಕುಲಮುದ್ದ
21. ಕೇತಬೊವ
22. ಕೇತಿಗೌಡ
23. ಕೇತಯ್ಯನಾಯಕ
24. ಕೇಶಿಗ
25. ಗುಜ್ಜಗೌಡ
26. ಗುಲಗಣ್ಣ
27. ಗೋಪಗೌಡ
28. ಚಟ್ಟ
29. ಚನ್ನ
30. ಚಟ್ಟೋಜ
31. ಚಳ್ಳಗೌಡ
32. ಚಾವುಂಡಗೌಡ
33. ಚಿಕ್ಕಒಡೆಯ
34. ಚೆವುಡಗೌಡ
35. ಜಕ್ಕಗೌಡ
36. ಜೋಮಗೌಡ
37. ಜಂಬುರನಾಯಕ
38. ತಮ್ಮಗೌಡ
39. ತುಳುವಮ್ಮೆಲ
40. ತೈಲಗೌಡ
41. ದಾಸೋಜ
42. ದಿವಮಗೌಡ

43.ನರಸಣ್ಣಗೌಡ

44.ನರುಬೈಗೌಡ

45.ನಾಗ

46.ನಾಗಿಸೆಟ್ಟಿ

47.ಪೆಬ್ಬ

48.ಪೊಲೆಯಮ್ಮ

49.ಬಮ್ಮಯ್ಯ

50.ಬಸವ

51.ಬಸವಗೌಡ

52.ಬಾಕಳಗೌಡ

53.ಬಾಪಗೌಡ

54.ಬಿಕ್ಕಣ್ಣ

55.ಬಿಜ್ಜಗೌಡ

56.ಬಿಜೆಯ

57.ಬಿಟ್ಟಿಗ

58.ಬಿಲ್ಲಯ್ಯ

59.ಬಿಲ್ಲೋಜ

60.ಬಿವಣ್ಣ

61.ಬೀಚಸೆಟ್ಟಿ

62.ಬೀರಗೌಡ

63.ಬೀರ

64.ಬೀರಣ್ಣ

65.ಬೆಳಗೌಡ

66.ಬೈಚಿಗ

67.ಬೈರವನಾಯಕ

68.ಬೊಪ್ಪಬೊವ

69.ಬೊಪ್ಪಗೌಡ

70.ಬೊಮ್ಮಗೌಡ

71.ಬೊಮ್ಮಯ್ಯ

72.ಬೊಮ್ಮನಾಯಕ

73.ಮಕಳಮಣಿ

74.ಮಚಗೌಡ

75.ಮಭಿಲನಾಯಕ

76.ಮಲೆಯಬಮ್ಮಿಸೆಟ್ಟಿ

77.ಮಲ್ಲಪ್ಪ

78.ಮಲ್ಲಗೌಡ

79.ಮಸಣಗೌಡ

80.ಮಸಣಯ್ಯನಾಯಕ

81.ಮಾಕಿಸೆಟ್ಟಿ

82.ಮಾಚಿಸೆಟ್ಟಿ

83.ಮಾಚಿಯ್ಯ

84.ಮಾದೆಯ್ಯ

85.ಮಾಮೋಜ

86.ಮಾರ

[illegible]

87.ಮಾರಗೌಡ

88.ಮಾಳ

89.ಮಾಳಗೌಡ

90.ಮಾಳಯ್ಯ

91.ಮುದ್ದಣ್ಣ

92.ಮೊತ್ತಕಾರ ದೊಸಮ

93.ಮಂಡಿಯಮ

94.ರಾಮಗೌಡ

95.ವಂಕನಾಯಕ

96.ವಿರಹ

97.ಶಶಿಗಳ ಬೀಪ

98.ಸಾರಕಲ್ಲ

99.ಸೋವನಾಯಕ

100.ಸಂಕಣ್ಣ

101.ಹಟ್ಟಿಕಾರ ಬೀಚ

102.ಹಟ್ಟಿ ಪುಪ್ಪಯ್ಯ

103.ಹರಿಪಯ್ಯ

104.ಹಳ್ಳಿಗ

105.ಹೊನ್ನಯ್ಯನಾಯಕ

106.ಹಂದಿಸೊಮಯ್ಯ

7.3. ನಕ್ಷೆಗಳು



ನಕ್ಷೆ-1. [illegible]

AB TALUK



ಚಿತ್ರ-2. ಮದ್ಯಸಾಲದಲ್ಲಿದ್ದ ಹಳ್ಳಿಗಳು

7.4. ಛಾಯಾಚಿತ್ರಗಳು



ಚಿತ್ರ 1 [illegible]



ಚಿತ್ರ 2. [illegible]



ಚಿತ್ರ-3 ಗೋಲಾಕಾರ ಕಲ್ಲು, ಮಾವಲಿ




ಚಿತ್ರ 4. ಶಾಸನ ಮತ್ತು [illegible] [illegible] [illegible] ಹೊರಾಟದ
ಚಿತ್ರಣವಿರುವ ವೀರಗಲ್ಲು, [illegible]



ಚಿತ್ರ 5 ವೀರಗಲ್ಲು, [illegible]



ಚಿತ್ರ 6 ವೀರಗಲ್ಲು, [illegible]



ಚಿತ್ರ 7 [illegible]



ಚಿತ್ರ 8 [illegible]



ಚಿತ್ರ:9. ಹಂದಿಯನ್ನು ಬೇಟೆಯಾಡುತ್ತಿರುವ ವೀರ, ಕುಪ್ಪೆ



ಚಿತ್ರ:10. ಮಾಸ್ತಿಕಲ್ಲು, ಚಿಕ್ಕಬ್ಬೂರು



ಚಿತ್ರ:11. ಒಂಭತ್ತು ಅಡಿಗಳೆತ್ತರದ ವೀರಗಲ್ಲು, ಗೆಂಡ್ಲ



ಚಿತ್ರ:12. ಇಬ್ಬರು ವೀರರು ಹೋರಾಡಿ ಮಡಿದ ಚಿತ್ರಣವನ್ನು ಒಂದೇ ಬಂಡೆಯಲ್ಲಿ ನಿರ್ಮಿಸಿರುವ ದೃಶ್ಯ, ಹೆಚ್ಚೆ



ಚಿತ್ರ:13. ಕಲ್ಯಾಣ ಚಾಲುಕ್ಯರ ಕಾಲದ ರಾಮೇಶ್ವರ ದೇವಾಲಯದ ಒಂದು ನೋಟ, ಕುಪ್ಪಗದ್ದೆ



ಚಿತ್ರ:14. ಗೋಸಾಸ ಕಲ್ಲುಗಳ ಸಮೂಹ, ಬಾರಂಗಿ



ಚಿತ್ರ:15. ವೀರಗಲ್ಲಿನ ಸಮೀಪ ನೋಟ, ಕುಬಟೂರು



ಚಿತ್ರ:16. [illegible]



17. [illegible]



18. [illegible]

ಗ್ರಂಥಸೂಚಿ

I. ಶಾಸನ ಸಂಪುಟಗಳು

1. ಎಪಿಗ್ರಫಿಯ ಕರ್ನಾಟಕ, ಸಂಪುಟ-VIII (ರೈಸ್)

2. ಮೈಸೂರ್ ಆರ್ಕಿಯಾಲಾಜಿಕಲ್ ರಿಪೋರ್ಟ್, 1925, 1929

3. ಎಪಿಗ್ರಫಿಯ ಕರ್ನಾಟಕ, ಸಂಪುಟ-VII ಮತ್ತು VIII,
(ಶಿವಮೊಗ್ಗ ಜಿಲ್ಲೆಯ ಹೆಚ್ಚುವರಿ ಶಾಸನಗಳ ಸಂಗ್ರಹ)

II. ಕನ್ನಡ ಗ್ರಂಥಗಳು

1. ಅಚ್ಚುತರಾವ್, ಟಿ.ಎನ್., 1976, *ಕರ್ನಾಟಕ ಪ್ರಾದೇಶಿಕ ಭೂಗೋಲ,* ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ.

2. ಕಲಬುರ್ಗಿ, ಎಂ.ಎಂ., 1980, *ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು,* ಬೆಂಗಳೂರು, ಐಬಿಎಚ್ ಪ್ರಕಾಶನ

3. ಕಲಬುರ್ಗಿ, ಎಂ.ಎಂ., 1988, *ಮಾರ್ಗ, ಸಂ-2,* ಬೆಂಗಳೂರು, ನರೇಶ್ ಆಂಡ್ ಕಂಪನಿ.

4. ಗೋಪಾಲಕೃಷ್ಣ, ಪಿ., 1987, *ಸ್ಥಳನಾಮ-ಅಧ್ಯಯನಗಳು,* ದರಿನಾಯಕನಪಾಳ್ಯ, ವಿದ್ಯಾಗಿರಿ ಪ್ರಕಾಶನ.

5. ಚನ್ನಕ್ಕ ಎಲಿಗಾರ, 1977, *ಮಾಸ್ತಿಕಲ್ಲುಗಳು,* ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ.

6 ಚಿದಾನಂದಮೂರ್ತಿ, ಎಂ., 1976, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಮೈಸೂರು, ಮೈಸೂರು ವಿಶ್ವವಿದ್ಯಾಲಯ.

7 ಚಿದಾನಂದಮೂರ್ತಿ, ಎಂ., 1984, *ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು,* ಬೆಂಗಳೂರು.

8. ಚಿದಾನಂದಮೂರ್ತಿ, ಎಂ., 1970, *ಸಂಶೋಧನ ತರಂಗ, ಸಂ-2,*
ಬೆಂಗಳೂರು,
ಬೆಂಗಳೂರು ವಿಶ್ವವಿದ್ಯಾಲಯ

9. ಜವರೇಗೌಡ, ದೇ., 1990, *ಸ್ಥಳನಾಮ ವ್ಯಾಸಂಗ,*
ಮೈಸೂರು,
ಸಹ್ಯಾದ್ರಿ ಪ್ರಕಾಶನ.

10. ನಾಗಯ್ಯ, ಜಿ.ಎಂ., 1992, *ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ,*
ಬೆಳಗಾವಿ,
ವೀರಶೈವ ಅಧ್ಯಯನ ಅಕಾಡೆಮಿ,
ಶ್ರೀನಾಗನೂರು ರುದ್ರಾಕ್ಷಿ ಮಠ.

11 ಬಸವರಾಜ ಕಲ್ಗುಡಿ., 1985, *ಮಹಾಸತಿ ಆಚರಣೆ ಒಂದು ಅಧ್ಯಯನ,*
ಬೆಂಗಳೂರು,
ಬೆಂಗಳೂರು ವಿಶ್ವವಿದ್ಯಾಲಯ.

12 ವೆಂಕಟರತ್ನಂ, ಎ.ವಿ.,1974, *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,*
ಮೈಸೂರು,
ಮೈಸೂರು ವಿಶ್ವವಿದ್ಯಾಲಯ.

13 ಲಕ್ಷ್ಮಣ ತೆಲಗಾವಿ,(ಸಂ), 1987, *ಹರತಿಸಿರಿ,*
ಹರ್ತಿಕೋಟೆ,
ವಾಲ್ಮೀಕಿ ಸಾಹಿತ್ಯ ಸಂಪದ.

14 ಶೇಠೆ, ಬಿ.ಎಸ್., 1991, *ಕರ್ನಾಟಕದಲ್ಲಿ ಸತಿಪದ್ಧತಿ,*
ಬೆಳಗಾವಿ, ವೀರಶೈವ ಅಧ್ಯಯನ ಅಕಾಡೆಮಿ,
ಶ್ರೀನಾಗನೂರು ರುದ್ರಾಕ್ಷಿ ಮಠ.

15 ಶೇಷಶಾಸ್ತ್ರಿ, ಆರ್., 1982, *ಕರ್ನಾಟಕದ ವೀರಗಲ್ಲುಗಳು,*
ಬೆಂಗಳೂರು,
ಕನ್ನಡ ಸಾಹಿತ್ಯ ಪರಿಷತ್ತು.

16 ಶಂಬಾಜೋಷಿ.,1960, *ಹಾಲುಮತ ದರ್ಶನ*
ಬೆಳಗಾವಿ,
ಬೆಳ್ವಡಿ ಗವಿಸಿದ್ಧಪ್ಪ ಸವದತ್ತಿ.

17.ಸೂರ್ಯನಾಥ್ ಕಾಮತ್,1973,1987, *ಕರ್ನಾಟಕದ ಸಂಕ್ಷಿಪ್ತ ಇತಿಹಾಸ,*
ಬೆಂಗಳೂರು,
ಬಾಪ್ಕೊ ಪ್ರಕಾಶನ.

18.ಹಿರಿಯಣ್ಣ ಅಂಬಳಿಕೆ., 1992, *ಸೈದ್ಧಾಂತಿಕ ಜಾನಪದ,*
ಮೈಸೂರು,
ಪ್ರಜ್ವಲ ಪ್ರಕಾಶನ.

III. ಇಂಗ್ಲಿಷ್ ಗ್ರಂಥಗಳು

1) Dikshit, G.S., 1964, *Local self- government in mediaeval Karnataka,*
Drwar,
Karnatka University.

2) Gururajaharchar, S., 1974, *Some aspects of Economic and Social life in Karnataka (A.D.100-1300),*
Mysore,
Mysore University.

3) Kuppuswamy, G.R. 1975, *Economic Conditions in Karnataka (997-1336 A.D),*
Dharwar,
Karnataka University.

4) Ramachandra Guha,(Ed),1994, *Social Ecology,*
Delhi,
Oxford University.

5) Settar, S., & Gunther,D. Sontheimer, (Ed)., 1980, *Memorial Stones,*
Dharwar,
Karnatka Univesity.


AKSHARA GRANTHALAYA
ACC.NO. 042153